ಸಭೆಯ ಮುಂದಿಡಲ್ಪಟ್ಟ ಕಾಗದ ಪತ್ರಗಳು

ಶ್ರೀ ರಾಮಕೃಷ್ಣ ಹೆಗ್ಗಡೆ.—೧೯೬೪ನೇ ಇಸವಿಯ ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಶಾಸನದ ೨೨ನೇ ಕಲಮಿನ ಮೇರೆಗೆ ರಾಯಚೂರಿನ ಪೋಲೀಸ್ ಕೇಂದ್ರದ ಬಯಲು ಪ್ರದೇಶದ ರಂಗಮಂದಿರದಲ್ಲಿ ಪೋಲೀಸ್ ಸೂಪರಿಂಟೆಂಡೆಂಟರವರು ೩೫ ಎಂ. ಎಂ. ನ ದೊಡ್ಡದಾದ ಚಲನಚಿತ್ರ ಪ್ರದರ್ಶನದ ವಿನಾಯಿತಿಯ ಮಂಜೂರಾತಿಗೆ ಸಂಬಂಧಿಸಿದ ಮಾರ್ಚ್ ೧೦, ೧೯೮೩ನೇ ದಿನಾಂಕದ ಎಚ್. ಡಿ. ೪೭ ಸಿಎನ್ ಎ ೮೩ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ನಿಯಮ ೩೩೪ರ ಮೇರೆಗೆ

ಬೆಂಗಳೂರು ಲಾಲ್‌ಬಾಗಿನಲ್ಲಿ ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ ಬಗ್ಗೆ.—

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಿಯಮಾವಳಿ ಪ್ರಕಾರ ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ಪ್ರಥಮತಃ ಅಭಿನಂದಿಸುತ್ತೇನೆ. ವಿಷಯ ಪ್ರಾಮುಖ್ಯವಾದುದು ಎನ್ನುವುದನ್ನು ಮನಗಂಡು ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ ಈ ಘಟನೆಗೆ ಸಂಬಂಧಪಟ್ಟ ಹಾಗೆ ನಮಗೆ ಗೊತ್ತಿರತಕ್ಕ ವಿವರಗಳು ಪತ್ರಿಕೆಯಲ್ಲಿ ಬಂದಿರತಕ್ಕ ವಿವರಗಳು ಮತ್ತು ಪತ್ರಿಕೆಯಲ್ಲಿ ಬಾರದೇ ಇರತಕ್ಕ ವಿವರಗಳನ್ನು ಕೆಲವೊಮ್ಮೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ತಾರೀಖು ೧೧-೩-೧೯೮೩ರ ಶುಕ್ರವಾರದ ದಿವಸ ಮಧ್ಯಾಹ್ನ ಒಂದು ಅಥವಾ ಒಂದು ಮೂವತ್ತು ಗಂಟೆ ಸಮಯದಲ್ಲಿ ಇಬ್ಬರು ಹೆಣ್ಣುಮಕ್ಕಳು ಕುಮಾರಿ ಸುಧಾ ಸುಮಾರು ೨೦ ವರ್ಷ. ಮತ್ತೊಬ್ಬರು ಹೆಚ್ಚು ಕಡಿಮೆ ಅದೇ ವಯಸ್ಸಿನವರು ಕುಮಾರಿ ಜೋಷಿಬಿನ್ ಎನ್ನತಕ್ಕವರು. ಅವರು ಯಾವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರೋ, ಆ ಕಾರ್ಖಾನೆಯಿಂದ ಕೆಲಸವನ್ನು ಮುಗಿಸಿಕೊಂಡು ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆಯಲ್ಲಿ ಮನೆಗೆ ಹೊರಟು ಬಸ್ಸಿಗಾಗಿ ಕಾಯುತ್ತಿರುವಂಥ ಸಂದರ್ಭದಲ್ಲಿ ನಡೆದಿರತಕ್ಕಂಥ ಘಟನೆ ಇದು. ಆ ಸಂದರ್ಭದಲ್ಲಿ ಸುಮಾರು ಮೂರು ಜನ, ಅವರ ಹೆಸರುಗಳು ಕೂಡ ಕೆಲವು ಪತ್ರಿಕೆಗಳಲ್ಲಿ ಬಂದಿವೆ, ಶ್ರೀಧರ ಎನ್ನುವ ಒಬ್ಬರು, ಮತ್ತೆ ಇಬ್ಬರ ಫೋಟೋಗಳು ಬಂದಿವೆ. ಆ ಇಬ್ಬರು ಸಿಕ್ಕಿದ್ದಾರೆ, ಇನ್ನೊಬ್ಬರು ಕೈಗೆ ಸಿಕ್ಕಿಲ್ಲವೆಂದು ಸುದ್ದಿ ಬಂದಿದೆ. ಒಟ್ಟು ಮೂರು ಜನ ತಮ್ಮ ಕೈಯಲ್ಲಿ ಮಚ್ಚನ್ನು ಹಿಡಿದು, ಹೆಣ್ಣುಮಕ್ಕಳನ್ನು ಹೆದರಿಸಿ, ಇಬ್ಬರನ್ನೂ ಒಂದೇ ಆಟೋರಿಕ್ಷಾದಲ್ಲಿ ಬಲತ್ಕಾರವಾಗಿ ಕೂರಿಸಿಕೊಂಡು ಕರೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಕುಮಾರಿ ಜೋಷಿಬಿನ್ ಎನ್ನುವವರು ತಪ್ಪಿಸಿಕೊಂಡಿದ್ದಾರೆ. ಈಕೆ ತಪ್ಪಿಸಿಕೊಂಡರೂ ಸ್ವಲ್ಪದೂರ ಬೆನ್ನು ಹತ್ತಿದ್ದಾರೆ. ಆದರೂ ತಪ್ಪಿಸಿಕೊಂಡು ಹೋದ ಆಕೆ ಯಶಸ್ವಿಯಾಗಿದ್ದಾರೆ. ಒಟ್ಟಿನಲ್ಲಿ ಆ ಹೆಣ್ಣುಮಗಳ ಮರ್ಯಾದೆ ಉಳಿಯಿತು ಅದೇ ಸಂತೋಷ. ಅಧ್ಯಕ್ಷರೇ, ಕುಮಾರಿ ಸುಧಾ ಇಲ್ಲಿ ಅವರ ಕೈಗೆ ಸಿಕ್ಕಿ ಬಲಿಪಶುವಾಗಿದ್ದಾಳೆ. ಆಕೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ ಹನಮಂತಯ್ಯ ಜೋಡಿ ರಸ್ತೆಯಲ್ಲಿ ಸಾವಿರಾರು ಜನ ಯಾವಾಗಲೂ ಓಡಾಡುತ್ತಿರುತ್ತಾರೆ. ಆ ರಸ್ತೆಯಲ್ಲಿ ಯಾವಾಗಲೂ ವಾಹನಗಳು ಓಡಾಡುತ್ತಿರುತ್ತವೆ. ರಸ್ತೆಯ ಅಜುಬಾಜಿನಲ್ಲಿ ಅಂಗಡಿಗಳು ಇದ್ದು, ಸಣ್ಣಪುಟ್ಟ ಕಾರ್ಖಾನೆಗಳು ಇವೆ. ಒಬ್ಬ ವ್ಯಕ್ತಿ ಹತ್ತಿರ ಮಚ್ಚು ಇದ್ದ ಸಂದರ್ಭದಲ್ಲಿ ಸಹಜವಾಗಿಯೇ ಜನಗಳಿಗೆ ಭಯಬರುತ್ತದೆ. ಆದರೂ ಒಬ್ಬ ವ್ಯಕ್ತಿ ಎಷ್ಟು ಜನರನ ನಿಭಾಯಿಸುತ್ತಿದ್ದ. ಹಳ್ಳಿಗಾಡಿನಲ್ಲಿ ಇಂಥ ಒಂದು ಕೃತ್ಯ ನಡೆದಿದ್ದರೆ, ಎಲ್ಲಾ ಜನರು ಮುತ್ತಿಕೊಂಡು ಬಲಿ ಹಾಕುತ್ತಿದ್ದರು. ಇವತ್ತು ಮತ್ತೊಂದು ಪ್ರಕರಣವೂ ಕೂಡ ಪತ್ರಿಕೆಯಲ್ಲಿ ಬಂದಿದೆ ಅಂದರೆ, ಪಟ್ಟಣದಲ್ಲಿರತಕ್ಕ ಜನತೆಗೆ ಧೈರ್ಯ ಇಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ. ಅಲ್ಲಿದ್ದಂಥ ಜನತೆ ಧೈರ್ಯ ಮಾಡಿದ್ದರೆ, ಹೆಣ್ಣು ಮಕ್ಕಳ ಮಾನಭಂಗವಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿತ್ತು ಎನ್ನುವುದು ನನ್ನ ಅನಿಸಿಕೆ. ಆ ಪ್ರಯತ್ನವನ್ನು ಅಲ್ಲಿರತಕ್ಕ ಸಾರ್ವಜನಿಕರು ಯಾರೂ ಕೂಡ ಮಾಡಲಿಲ್ಲ ಎನ್ನುವಂಥ ಅಂಶ ಮನಸ್ಸಿಗೆ ತುಂಬಾ ನೋವನ್ನು ತರುವುದು ಅಷ್ಟೇ ಅಲ್ಲ, ಮುಂದಿನ ಭವಿಷ್ಯದಲ್ಲಿ ಏನಾಗುತ್ತದೆ ಎನ್ನುವ ಬಗ್ಗೆ ಉತ್ತರ ಹುಡುಕಬೇಕಾಗುತ್ತದೆ. ಅಲ್ಲಿದ್ದಂಥ ಸಾರ್ವಜನಿಕರಲ್ಲಿ ಕೊನೇ ಪಕ್ಷ ೭-೮ ಜನವಾದರೂ ಪ್ರಾಮಾಣಿಕ

ಪ್ರಯತ್ನ ಮಾಡಬಹುದಿತ್ತು. ಆ ಭಾಗದ ಸಾರ್ವಜನಿಕರು ತಿಳಿಸಿದಂತೆ ರಸ್ತೆಯುದ್ದಕ್ಕೂ ಕೂಗಿಕೊಂಡು ಆ ಹೆಣ್ಣುಮಗಳು ಹೋಗಿದ್ದಾಳೆ. ಆ ರಸ್ತೆ ಪ್ರಾರಂಭದಿಂದ ಹಿಡಿದು ಕೊನೆಯುವರೆವಿಗೂ ಪೋಲೀಸಿನವರು ಇದ್ದೇ ಇರುತ್ತಾರೆ. ಹೀಗೆ ಕೂಗಿಕೊಂಡು ಹೋಗುವಂಥ ಸಂದರ್ಭದಲ್ಲಿ ಕರ್ತವ್ಯಪಾಲನೆಯಲ್ಲಿದ್ದಂಥ ಪೋಲೀಸಿನವರು ಆ ಹೆಣ್ಣು ಮಗಳ ರಕ್ಷಣೆ ಮಾಡುವಂಥ ಪ್ರಯತ್ನ ಏತಕ್ಕೆ ಮಾಡಲಿಲ್ಲ ಎನ್ನುವುದು ಬಹಳ ಮುಖ್ಯವಾಗಿ ಬೇಕಾಗಿರತಕ್ಕ ವಿಚಾರ ಒಂದು, ಸಾರ್ವಜನಿಕರು ಮುಂದೆ ಬರದೇ ಇರುವುದಕ್ಕೆ ಕಾರಣಗಳು ಗೊತ್ತಿಲ್ಲ. ಆದರೆ ಕರ್ತವ್ಯನಿರತ ಪೋಲೀಸಿನವರು ಏತಕ್ಕೆ ರಕ್ಷಣೆ ಕೊಡಲಿಲ್ಲವೆಂಬುದೇ ಪ್ರಾಮುಖ್ಯವಾದ ಪ್ರಶ್ನೆ. ನಿನ್ನೆ ಅದಕ್ಕೋಸ್ಕರವೇ ನಾನು ಹೇಳಿದೆ, ಪ್ರತಿಯೊಬ್ಬರಿಗೂ ಪೋಲೀಸಿನವರನ್ನು ಇಡುವುದಕ್ಕೆ ಯಾವ ಸರ್ಕಾರದಿಂದಲೂ ಸಾಧ್ಯವಾಗುವುದಿಲ್ಲ. ಆದರೆ ಆ ಭಾಗದಲ್ಲಿದ್ದಂಥ ಪೋಲೀಸಿನವರು ರಕ್ಷಣೆ ಕೊಡಬೇಕಾದ್ದು ಅವರ ಆದ್ಯ ಕರ್ತವ್ಯ. ಇದು ಸರ್ಕಾರದ ಜವಾಬ್ದಾರಿ ಸಾಮಾನ್ಯವಾಗಿ ಪೋಲೀಸಿನವರನ್ನು ನಗರದ ಆಯಕಟ್ಟಿನ ಪ್ರದೇಶಗಳಲ್ಲಿ ಹಾಕಿರುತ್ತಾರೆ. ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆಯಲ್ಲಿಯೂ ಅದೇ ರಸ್ತೆಯಲ್ಲಿ ಬರತಕ್ಕ ವೃತ್ತಗಳ ಹತ್ತಿರವೂ ಪೋಲೀಸಿನವರು ಇರುತ್ತಾರೆ. ಇಂಥ ಘಟನೆ ನಡೆದಾಗ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುವುದು ಪೋಲೀಸ್ ಇಲಾಖೆಗೆ ಸೇರಿದ್ದು. ಮೂರು ಜನ ದುಷ್ಕರ್ಮಿಗಳು ಹೆಣ್ಣುಮಗಳನ್ನು ಆಟೋರಿಕ್ಷಾದಲ್ಲಿ ಹಾಕಿಕೊಂಡು ಲಾಲ್‌ಬಾಗಿಗೆ ಹೋದಂಥ ಸಂದರ್ಭದಲ್ಲಿ ಲಾಲ್‌ಬಾಗಿನಲ್ಲಿ ತೋಟದ ಕೆಲಸ ಮಾಡುವಂಥ ಸಿಬ್ಬಂದಿಯವರು ಇರುತ್ತಾರೆ. ಜೊತೆಗೆ ಬೆಳಗಿನಿಂದ ಸಂಜೆಯವರೆಗೆ ಲಾಲ್‌ಬಾಗಿನಲ್ಲಿ ಸಾರ್ವಜನಿಕರು ಇದ್ದೇ ಇರುತ್ತಾರೆ. ಸಾಯಂಕಾಲ ಕತ್ತಲಾದ ಮೇಲೆ ಈ ಘಟನೆ ನಡೆದಿದ್ದರೆ ಪ್ರಶ್ನೆ ಬೇರೆಯಾಗುತ್ತಿತ್ತು. ಮರಗಳ ನೆರಳಿನಲ್ಲಿ ಸಾವಿರಾರು ಜನ ಕೂತಿರುತ್ತಾರೆ. ಪೋಲೀಸ್ ಇಲಾಖೆಯ ಕಣ್ಣು ಮುಂದೆ, ಸಾರ್ವಜನಿಕರ ಕಣ್ಣು ಮುಂದೆ ಒಬ್ಬ ಹೆಣ್ಣು ಮಗಳನ್ನು ತೆಗೆದುಕೊಂಡು ಮಾನಭಂಗ ಮಾಡಿರುವುದು ಸ್ಪಷ್ಟವಾಗಿದೆ

1–30 ಪಿ. ಎಂ.

ಆಕೆಯನ್ನು ಮಾನಭಂಗ ಮಾಡುತ್ತಿದ್ದ ಸಂದರ್ಭದಲ್ಲಿ ಶ್ರೀಧರ ಎನ್ನುವವರು ಮಚ್ಚು ಹಿಡಿದು ನಿಂತಿದ್ದರು ಎನ್ನುವುದು ಪತ್ರಿಕಾ ವರದಿಯ ಪ್ರಕಾರ ತಿಳಿದುಬಂದಿದೆ. ನೆನ್ನೆಯ ದಿವಸ ಆಕೆ ಹೊರಗಡೆ ಇದ್ದಾಗ, ಈ ಸದನದಲ್ಲಿ ಪ್ರಸ್ತಾಪ ನಡೆಯಿತು. ಕೆಲವು ಶಾಸಕರು ಕೂಡ ಹೋಗಿ ವಿವರಗಳನ್ನು ತೆಗೆದುಕೊಂಡೆವು. ನೆನ್ನೆಯ ದಿವಸ ಆಕೆಯ ಅಣ್ಣ, ಆಕೆಯ ಸಂಬಂಧಿಕರು ಅವರಿಗೆ ಬೇಕಾಗಿರತಕ್ಕವರು ಅಲ್ಲೇ ಇದ್ದು ಅನೇಕ ವಿವರಗಳನ್ನು ಕೊಡುತ್ತಿದ್ದರು; ಹಾಗೇ ಆ ಹೆಣ್ಣುಮಗಳು ಕೂಡ ವಿವರಗಳನ್ನು ಹೇಳುತ್ತಿದ್ದಳು. ನಮಗೆ ನೇರವಾಗಿ ಆ ಹೆಣ್ಣುಮಗಳಿಂದ ಎವಿಡೆನ್ಸ್ ಸಿಕ್ಕಬೇಕಾಗುತ್ತದೆ. ನೆನ್ನೆಯ ದಿವಸ ಆಕೆಯನ್ನು ನೀವು ಎಚ್ಚರ ತಪ್ಪಿದ್ದರಾ ಎಂದು ಕೇಳಿದ್ದಕ್ಕೆ ಆಕೆ ನಾನು ಸಂಪೂರ್ಣವಾಗಿ ಎಚ್ಚರವಾಗಿದ್ದೆ, ನಾನು ಸಂಪೂರ್ಣವಾಗಿ ಕೂಗಿಕೊಳ್ಳುತ್ತಿದ್ದೆ, ಅವರು ನನ್ನ ಕೂಗನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಿದರೂ ನನ್ನ ಮಾನದ ಪ್ರಶ್ನೆಯ ದೃಷ್ಟಿಯಿಂದ, ನನ್ನ ಮಾನಭಂಗವಾಗುವುದಾದರೂ ತಪ್ಪಲಿ ಎಂದು ಸಾಕಷ್ಟು ಕೂಗಿಕೊಂಡೆ ಎಂದು ಹೇಳಿದಳು. ಸಾರ್ವಜನಿಕರ ಪ್ರಶ್ನೆ ಒಂದು ಕಡೆ ಇರಲಿ, ಸಾರ್ವಜನಿಕರು ಧೈರ್ಯ ಮಾಡದೆ ಇರತಕ್ಕ ಪರಿಸ್ಥಿತಿಯನ್ನು ಈಗಿನ ಆಡಳಿತ ಪರಿಸ್ಥಿತಿಯಲ್ಲಿ ನಿರ್ಮಾಣ ಮಾಡಿದರೆ ಅದಕ್ಕೂ ಕೂಡ ಕಾರಣ ಇರಬೇಕು. ಇವೊತ್ತು ಸುಧಾ ಇರಬಹುದು ಮತ್ತೊಬ್ಬರು ಇರಬಹುದು, ರಸ್ತೆಯಲ್ಲಿ ಅನೇಕ ಜನ ಹೆಣ್ಣುಮಕ್ಕಳು ಸ್ಕೂಲಿಗೆ ಹೋಗುವುದು ಇರುತ್ತದೆ, ಮಾರ್ಕೆಟ್‌ಗೆ ಹೋಗುವುದು ಇರುತ್ತದೆ, ಅವರು ನಮ್ಮ ಮನೆಯ ಹೆಣ್ಣುಮಕ್ಕಳು ಆಗಬಹುದು. ನಿಮ್ಮ ಮನೆಯ ಹೆಣ್ಣುಮಕ್ಕಳು ಆಗಬಹುದು, ಮತ್ತೊಬ್ಬರ ಮನೆಯ ಹೆಣ್ಣುಮಕ್ಕಳು ಆಗಬಹುದು ಅವರು ಯಾರೇ ಇರಲಿ, ಆ ದುಷ್ಕರ್ಮಿಗಳಿಗೆ ಆಡಳಿತದ ಬಿಗಿ ಹೆದರಿಕೆ, ಬೆದರಿಕೆ ಇರಬೇಕಾಗುತ್ತದೆ. ಒಳ್ಳೆಯತನಕ್ಕೆ ಅಲ್ಲ. ಕೆಟ್ಟ ಜನರಿಗೆ ಹೆದರಿಕೆ ತರದೇ ಇದ್ದರೆ ಆಡಳಿತದಲ್ಲಿ ಲೋಪ ಎದ್ದು ಕಾಣುತ್ತದೆ. ಅದು ನಮ್ಮ ಮುಂದಿರತಕ್ಕ ಪ್ರಶ್ನೆ. ಆಕೆ ಅಷ್ಟೊಂದು ಕೂಗಿಕೊಂಡರೂ ಸಾರ್ವಜನಿಕರು ರಕ್ಷಣೆ ಕೊಡಲಿಕ್ಕೆ ಆಗಿಲ್ಲ ಆ ಹೆಣ್ಣುಮಗಳಿಗೆ ಇಬ್ಬರು ಮಾನಭಂಗ ಮಾಡಿದ್ದಾರೆ. ಶ್ರೀಧರ ಎನ್ನತಕ್ಕವನು ಮಚ್ಚು ಹಿಡಿದು ನಿಂತಿರತಕ್ಕದ್ದನ್ನು ಸಾರ್ವಜನಿಕರು ನೋಡುತ್ತಿದ್ದಾರೆ. ಆತ ಮಚ್ಚು ಹಿಡಿದು ಯಾರೇ ಆಗಲಿ ಹತ್ತಿರ ಬಂದರೆ ಕತ್ತರಿಸಿ ಹಾಕುತ್ತೇನೆಂದು ಹೇಳಿದ್ದಾನೆ. ಈ ಎರಡು ಜನರು ಮಾನಭಂಗ ಮಾಡುವಾಗ ಆಕೆ ಸಾಕಷ್ಟು ಕೂಗಿಕೊಂಡರೂ ಆಕೆಗೆ ರಕ್ಷಣೆ ಸಿಕ್ಕಿಲ್ಲ ಅಲ್ಲಿ ಪೋಲೀಸರು ಇದ್ದಾರೆ

ಎನ್ನುವುದು ಕಂಡು ಬರುತ್ತದೆ. ಪೋಲೀಸರಿಗೆ ಬೇರೆ ವ್ಯವಸ್ಥೆ ಇರುತ್ತದೆ. ಅವರು ಪೋಲೀಸ್ ಕಂಟ್ರೋಲ್ ರೂಮ್‌ಗೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಫೋನ್ ಮಾಡಿದ್ದರೆ ಸಾಕಾಗುತ್ತಿತ್ತು. ವೈರ್‌ಲೆಸ್ ಮೆಸೇಜ್‌ನಲ್ಲಿ ತಿಳಿಸಿದ್ದರೆ, ಆ ಮೂರು ಜನರನ್ನು ಹಿಡಿದು ಹಾಕಬಹುದಿತ್ತು. ಈ ರೀತಿ ಹಿಡಿದು ಹಾಕಿದ್ದರೆ ಮಾನಭಂಗವಾಗುವುದನ್ನಾದರೂ ತಪ್ಪಿಸಬಹುದಾಗಿತ್ತು. ಅಥವಾ ಮಾನಭಂಗ ಮಾಡುವುದನ್ನಾದರೂ ತಪ್ಪಿಸಬಹುದಾಗಿತ್ತು. ಆ ಹೆಣ್ಣುಮಗಳ ಮೈಮೇಲೆ ಗಾಯಗಳು ಆಗಿವೆ ಎನ್ನುವುದು ಗಮನಕ್ಕೆ ಬಂದಿದೆ. ಎರಡು ಜನ ಮಾನಭಂಗ ಮಾಡಿದ ಮೇಲೆ ಮೂರನೆಯವನು ಶ್ರೀಧರ ಮಾನಭಂಗ ಮಾಡುವ ಸಂದರ್ಭದಲ್ಲಿ ಪೋಲೀಸರು ಅಲ್ಲಿಗೆ ಬಂದರೆಂದು ವರದಿ ಇದೆ. ಅವರು ಆಟೋರಿಕ್ಷಾವನ್ನು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಿದ್ದಾರೆ. ಆತ ಮತ್ತೆ ತಿರುಗಿ ಹೋಗಿ ಪೋಲೀಸ್ ಸ್ಟೇಷನ್‌ಗೆ ಹೇಳಿದಮೇಲೆ ಪೋಲೀಸರು ಬಂದಿದ್ದಾರೆ. ಶ್ರೀಧರ ಮೂರನೆಯವನಾಗಿ ಮಾನಭಂಗ ಮಾಡುತ್ತಿದ್ದ ಎಂದು ಕೇಳಿದ್ದೇವೆ. ಪತ್ರಿಕಾ ವರದಿ ಪ್ರಕಾರ ಮತ್ತು ಆ ಹೆಣ್ಣುಮಗಳ ಹೇಳಿಕೆ ಪ್ರಕಾರ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ. ಸಣ್ಣಪುಟ್ಟ ವಿಚಾರಗಳಲ್ಲಿ ವ್ಯತ್ಯಾಸ ಇರಬಹುದು. ಶ್ರೀಧರ ಮಾನಭಂಗ ಮಾಡುವ ಸಂದರ್ಭದಲ್ಲಿ ಹಿಡಿದಿದ್ದಾರೆ. ಪೋಲೀಸರು ಬಂದು ಹಿಡಿದಿದ್ದಕ್ಕೆ ಸಂತೋಷ. ಎರಡು ಜನರು ತಪ್ಪಿಸಿಕೊಂಡು ಹೋಗಿದ್ದಾರೆ, ಒಬ್ಬರನ್ನು ಹಿಡಿದರು ಎನ್ನುವ ವರದಿ ಮೊದಲು ಬಂದಿತ್ತು. ಈಗ ಮೂರು ಜನರು ಸಿಕ್ಕಿದ್ದಾರೆಯೋ ? ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಂದ ಅವರ ಹೇಳಿಕೆಯನ್ನು ನಿರೀಕ್ಷೆ ಮಾಡುತ್ತೇವೆ. ಆ ಹೆಣ್ಣುಮಗಳ ಮಾನಭಂಗ ಆದಮೇಲೆ ಪೋಲೀಸರು ಶ್ರೀಧರನನ್ನು ಅರೆಸ್ಟ್ ಮಾಡಿದಮೇಲೆ ಆ ಹೆಣ್ಣುಮಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ವಾಣಿವಿಲಾಸ್ ಆಸ್ಪತ್ರೆಗೆ ಹೋದಾಗ ಅಲ್ಲಿ ಆಕೆಗೆ ವೈದ್ಯಕೀಯ ಉಪಚಾರ ಮಾಡುವುದು, ಸರ್ಟಿಫಿಕೇಟ್ ಕೊಡುವುದು, ಈ ವಿಚಾರದಲ್ಲಿ ತಪಾಸಣೆ ಮಾಡುವುದು ಆಸ್ಪತ್ರೆಯಲ್ಲಿದ್ದಂಥ ವೈದ್ಯಾಧಿಕಾರಿಗಳ ಕರ್ತವ್ಯ. ಈಕೆ ಅಲ್ಲಿಗೆ ಹೋದಾಗ ಅಲ್ಲಿ ಯಾವ ಡಾಕ್ಟರು ಇದ್ದರೋ ಗೊತ್ತಾಗಲಿಲ್ಲ, ಅದನ್ನು ವಿಚಾರ ಮಾಡಿಸುವುದು ಒಳ್ಳೆಯದು. ಮಾನಭಂಗವಾದಂಥ ಹೆಣ್ಣುಮಗಳು ಆಸ್ಪತ್ರೆಗೆ ಹೋದಾಗ ಅಲ್ಲಿಯ ವೈದ್ಯಾಧಿಕಾರಿ ಯಾವರೀತಿ ನಡೆದುಕೊಳ್ಳಬೇಕು ಅದು ಮುಖ್ಯ. ಹೋದಂಥ ಮಾನವನ್ನು ಯಾರಿಗೂ ತಂದುಕೊಡಲಿಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಸಮಾಧಾನದ ಮಾತುಗಳನ್ನಾಡಿ ಶುಶ್ರೂಷೆ ಮಾಡಬೇಕಾಗುತ್ತದೆ. ಇದು ಕಾನೂನು ಪ್ರಕಾರ-ಮಾಡತಕ್ಕ ಪ್ರಶ್ನೆ. ಹಾಗೇ ಮಾನವೀಯ ದೃಷ್ಟಿಯಿಂದಲೂ ಮಾಡಬೇಕಾಗುತ್ತದೆ. ಆದರೆ ಅಲ್ಲಿ ಏನಾಗಿದೆ. ಅಲ್ಲಿರತಕ್ಕ ಮಹಿಳಾ ವೈದ್ಯಾಧಿಕಾರಿ ಏಕವಚನದಲ್ಲಿ ಮಾತನಾಡಿದ್ದಾರೆಂದು ತಿಳಿದುಬಂದಿದೆ. ಇದು ನಿಜವಾಗಿದ್ದರೆ, ತಪ್ಪಾಗುತ್ತದೆ. ಅಲ್ಲಿ ಡಾಕ್ಟರಿಗೆ ಸಂಬಳ ಕೊಟ್ಟು ಕುರ್ಚಿಯ ಮೇಲೆ ಕೂರಿಸಿರುವುದು ಏಕವಚನದಲ್ಲಿ ಮಾತನಾಡಲಿಕ್ಕೆ ಏನು ? ಅದು ಸಾರ್ವಜನಿಕರ ಹಣ. ಒಂದು ವೇಳೆ ಅಲ್ಲಿದ್ದಂಥ ಮಹಿಳಾ ವೈದ್ಯಾಧಿಕಾರಿ ತಪ್ಪು ಮಾಡಿರುವುದು ಕಂಡುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂಗೆ ಬೀಳಬಾರದು ಎಂದು ಹೇಳುತ್ತೇನೆ. ಇಷ್ಟು ಆಸ್ಪತ್ರೆಯ ವಿಚಾರ. ಈಗ ನನಗೆ ತಿಳಿದುಬಂದಿರುವ ಪ್ರಕಾರ ವೈದ್ಯಾಧಿಕಾರಿಯವರು ಅದಕ್ಕೆ ಸಂಬಂಧಪಟ್ಟ ಸರ್ಟಿಫಿಕೇಟ್ ಮತ್ತು ವರದಿಯನ್ನು ಏನು ಕೊಡಬೇಕು ಅದನ್ನು ಕೊಡತಕ್ಕ ವಿಚಾರದಲ್ಲಿ ವಿಳಂಬವಾಗುತ್ತಿದೆ ಎನ್ನುವುದು ತಿಳಿದುಬಂದಿದೆ. ಇದು ಎಷ್ಟು ಸತ್ಯಾಂಶದ ವಿಚಾರವೋ ನನಗೆ ಗೊತ್ತಾಗಲಿಲ್ಲ. ಸರ್ಕಾರದ ವತಿಯಿಂದ ಇದರ ಬಗ್ಗೆ ಪ್ರಸ್ತಾಪ ಮಾಡಬೇಕು. ಆಸ್ಪತ್ರೆಯ ವಿಚಾರಕ್ಕೆ ಸಂಬಂಧಪಟ್ಟ ವಿಚಾರಗಳು ಇಷ್ಟು ಮಾತ್ರ. ಇನ್ನು ಆಕೆಯ ಮನೆಯ ವಿಚಾರ ತೆಗೆದುಕೊಂಡರೆ ಸುಮಾರು ೮-೧೦ ಜನರು ಇರತಕ್ಕ ಸಂಸಾರ ಅವರದು. ಅವರ ಮನೆಯಲ್ಲಿ ನೌಕರಿಗೆ ಹೋಗತಕ್ಕವರು ಯಾರೂ ಇಲ್ಲ. ಈಕೆ ೨೦೦ ರೂಪಾಯಿ ಸಂಬಳಕ್ಕೋಸ್ಕರ ಕೆಲಸ ಹೋಗಿ ಮಾಡುತ್ತಿದ್ದಳು. ಅದರಿಂದ ಅವರ ಮನೆಯ ಜೀವನ ನಡೆಯಬೇಕಾಗಿತ್ತು. ಈವತ್ತು ಅವರ ಮನೆಯ ಸಂಸಾರಕ್ಕೆ ತೊಂದರೆಯಾಗಿದೆ. ನೆನ್ನೆಯ ದಿವಸ ಇವನ್ನು ಕೇಳಿದಾಗ ಗೊತ್ತಾಯಿತು. ನಾವು ಮರ್ಯಾದೆಯಿಂದ ಹೇಗೋ ಜೀವನ ಮಾಡುತ್ತಿದ್ದೆವು. ಈಗ ನಮ್ಮ ಮಾನ ಮರ್ಯಾದೆ ಹೋಯಿತು, ನಮಗೆ ಯಾರು ರಕ್ಷಣೆ ಕೊಡುತ್ತಾರೆಂದು ಕೇಳುತ್ತಿದ್ದರು. ನೊಂದ ಕುಟುಂಬದವರೊಡನೆ ಭಾಗಿಯಾಗತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಅವರೂ ಹೋಗಿರತಕ್ಕ ಮಾನವನ್ನು ತುಂಬಿಕೊಡಲಿಕ್ಕೆ ಯಾರಿಗೂ ಸಾಧ್ಯವಿಲ್ಲ. ನಮ್ಮ ಮುಂದಿರತಕ್ಕ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಬಹಳ ಮುಖ್ಯವಾದ ಪ್ರಶ್ನೆ. ಸರ್ಕಾರದ ಜವಾಬ್ದಾರಿ ಏನು ಎನ್ನುವುದಕ್ಕೆ ಬಗ್ಗೆ ಎರಡು ಅಂಶಗಳನ್ನು ಗಮನಕ್ಕೆ ತರಬೇಕಾಗಿದೆ. ಒಂದು ಪೋಲೀಸ್ ಇಲಾಖೆ, ಆಕೆಯನ್ನು ಆಟೋರಿಕ್ಷಾದಲ್ಲಿ ಕೂರಿಸಿಕೊಂಡು ಹೋಗಬೇಕಾದರೆ ಪೋಲೀಸರು ಅಲ್ಲೇ ಇದ್ದಾರೆ, ಅದರಿಂದ ಸರ್ಕಾರದ ಲೋಪದೋಷ ಎದ್ದು

ಕಾಣುತ್ತದೆ. ಈಗ ಬೆಂಗಳೂರು ನಗರದಲ್ಲಿ ಪೋಲೀಸ್ ಇಲಾಖೆಯಲ್ಲಿ ಬದಲಾವಣೆ ಮಾಡಿದ್ದೀರಿ, ಅದು ನಿಮಗೆ ಬಿಟ್ಟಿರತಕ್ಕ ವಿಚಾರ. ಯಾರನ್ನಾದರೂ ಹಾಕಿ, ಯಾರನ್ನಾದರೂ ತೆಗೆಯಿರಿ, ಆದರೆ ಬೆಂಗಳೂರು ನಗರ ಜನನಿಬಿಡ ಪ್ರದೇಶದಲ್ಲಿ ನಿಮ್ಮ ಹೆಚ್ಚಿನ ನಿಗಾ ಇರಬೇಕಾಗುತ್ತದೆ. ನಾನು ಪೋಲೀಸ್ ಇಲಾಖೆ ಬಗ್ಗೆ ತೆಗೆದುಕೊಂಡು ಮಿಕ್ಸ್‌ಅಪ್ ಮಾಡಿ ಮಾತನಾಡುತ್ತಿಲ್ಲ. ಇವೊತ್ತು ಪೋಲೀಸ್ ಇಲಾಖೆಯ ಕಾರ್ಯದಕ್ಷತೆಯ ಬಗ್ಗೆ ಶಂಕೆ, ಚಿಂತನೆ, ಅನುಮಾನ, ಸ್ಪಷ್ಟವಾಗಿ ಈ ಪ್ರಶ್ನೆ ಉದ್ಭವವಾಗುವುದಿಲ್ಲವೇ ಎಂದು ತಮ್ಮಲ್ಲಿ ಈ ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಿಮ್ಮ ಕರ್ತವ್ಯದಲ್ಲಿ ಲೋಪ ಆಗಿದೆ ಎಂದು ಹೇಳುತ್ತೇನೆ. ಪೋಲೀಸರು ತಕ್ಷಣ ಬೆನ್ನತ್ತಿ ಹೋಗಲಿಲ್ಲ. ಅಂದರೆ ಜನರ ಮಾನ ರಕ್ಷಣೆ, ಆಸ್ತಿಪಾಸ್ತಿ ಬಗ್ಗೆ ರಕ್ಷಣೆ ಕೊಡತಕ್ಕ ಸಾಮರ್ಥ್ಯವನ್ನು ಹೊಂದುತ್ತೀರಾ ಎಂದು ಕೇಳುತ್ತೇನೆ. ಪೋಲೀಸ್ ಇಲಾಖೆ ತನ್ನ ಕರ್ತವ್ಯ ನಿರ್ವಹಣೆ ಮಾಡತಕ್ಕ ಕಾಲದಲ್ಲಿ ಜನತೆಯ ಜೀವಕ್ಕೆ, ಸಾವಿರಾರು ಜನ ಇರುವಂಥ ಕಡೆ ರಕ್ಷಣೆಯನ್ನು ಕೊಡದೇ ಇದ್ದರೆ, ಮೂಲೆಯಲ್ಲಿರತಕ್ಕ ಹಳ್ಳಿಯಲ್ಲಿರತಕ್ಕ ಜನರಿಗೆ ಯಾವ ರೀತಿ ರಕ್ಷಣೆ ಕೊಡುತ್ತೀರಾ ಎನ್ನುವ ಅನುಮಾನ ಬರುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರ ತಲೆ ತಗ್ಗಿಸಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ನಿಮ್ಮ ಕಾಲದಲ್ಲಿ ಬೇಕಾದಷ್ಟು ಆಗಿದೆ.

ಮತ್ತೊಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಚಾರಗಳನ್ನು ಸಭೆಯ ಮುಂದಿಡುವಾಗ ಮಧ್ಯ ಪ್ರವೇಶ ಮಾಡಿ ಮಾತನಾಡುವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿ ಜನರಿಗೆ ತಾವು ಪ್ರಾಣ ರಕ್ಷಣೆಯನ್ನು ಕೊಡುವುದಕ್ಕಾಗದಿದ್ದರೆ ರಾಜ್ಯದ ವಿವಿಧ ಭಾಗಗಳಲ್ಲಿ, ದೂರದ ಪ್ರದೇಶದಲ್ಲಿ ಜೀವನ ಮಾಡತಕ್ಕ ಜನರಿಗೆ ಇನ್ನು ಯಾವರೀತಿ ರಕ್ಷಣೆಯನ್ನು ಕೊಡುತ್ತೀರೆಂದು ನಮ್ಮ ಮನಸ್ಸಿಗೆ ಅನುಮಾನ ಬರುತ್ತಿದೆ. ಮತ್ತೊಂದು ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಈ ಹೆಂಗಸಿನ ಮೇಲೆ ಅತ್ಯಾಚಾರ ನಡೆಯುವಾಗ ನೂರಾರು ಜನರಿದ್ದರೂ ಆಕೆಗೆ ರಕ್ಷಣೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಲಿಲ್ಲ ಎಂಬುದನ್ನು ನೋಡಿದರೆ ನಮ್ಮ ಮನಸ್ಸಿನಲ್ಲಿ ಯಾವ ಭಾವನೆ ಮೂಡುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಏಕೆಂದರೆ ಇವತ್ತು ಈ ರೀತಿ ಅತ್ಯಾಚಾರ ಮಾಡತಕ್ಕ ದುಷ್ಕರ್ಮಿಗಳನ್ನು ಹಿಡಿಯುವುದಕ್ಕೆ ಹೋದರೆ ನಮ್ಮ ಪ್ರಾಣಕ್ಕೇ ಏನಾದರೂ ತೊಂದರೆಯಾದರೆ ನಮಗೆ ಯಾರು ರಕ್ಷಣೆ ಕೊಡುತ್ತಾರೆಂಬುದನ್ನೂ ಯೋಚನೆ ಮಾಡಬೇಕಾಗುತ್ತದೆ. ಸರ್ಕಾರ ದಕ್ಷವಾದ ಆಡಳಿತವನ್ನು ನಡೆಸಿ ಸಾರ್ವಜನಿಕರ ಮನಸ್ಸಿನಲ್ಲಿ ಧೈರ್ಯವನ್ನು ತುಂಬಲು ಪ್ರಯತ್ನಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

ಮಾನ್ಯ ಉಪಾಧ್ಯಕ್ಷರೇ, ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ಸರ್ಕಾರ ಎಲ್ಲ ಕಡೆಯಲ್ಲೂ ಪೋಲೀಸರನ್ನು ಇಡುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ಪೋಲೀಸರು ಇರುವುದಿಲ್ಲ ಅಂಥ ಕಡೆ ಸಾರ್ವಜನಿಕರೇ ಇಂಥ ದುಷ್ಕರ್ಮಿಗಳನ್ನು ಹಿಡಿದುಹಾಕಲು ನೆರವಾಗಬೇಕೆಂಬುದನ್ನು ನಾವೂ, ನೀವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಈ ವಿಚಾರದಲ್ಲಿ ಸರ್ಕಾರ ತನ್ನ ಕರ್ತವ್ಯಲೋಪ ಮಾಡಿದೆ, ಸಾರ್ವಜನಿಕರಲ್ಲಿ ನಂಬಿಕೆಯನ್ನು ಕಳೆದುಕೊಂಡಿದೆ. ಬೆಂಗಳೂರು ನಗರದಲ್ಲೇ ಕಾನೂನು ವ್ಯವಸ್ಥೆ ಸರಿಯಾಗಿಲ್ಲ ಎಂದ ಮೇಲೆ ಇನ್ನು ರಾಜ್ಯದ ಉಳಿದ ೧೮ ಜಿಲ್ಲೆಗಳಲ್ಲಿ ಯಾವರೀತಿ ಇದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಮಾನ್ಯ ಉಪಾಧ್ಯಕ್ಷರೆ ನಾನು ಮಾತನಾಡಬೇಕಾದ ವಿಚಾರಗಳು ಬಹಳ ಇವೆ. ಆದರೆ ಅವುಗಳನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ನಾನಾದರೂ ಹೇಳುವುದಿಷ್ಟೆ, ಈಗ ಏನು ಲಾಲ್‌ಬಾಗ್‌ನಲ್ಲಿ ಹೆಣ್ಣುಮಗಳೊಬ್ಬಳ ಮೇಲೆ ಅತ್ಯಾಚಾರ ನಡೆದಿದೆ ಅದನ್ನು ತನಿಖೆ ಮಾಡಿಸುವ ವಿಚಾರದಲ್ಲ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ತಾವು ನೇಮಕ ಮಾಡಬಾರದು. ಏಕೆಂದರೆ ಪೋಲೀಸ್ ಅಧಿಕಾರಿಗಳನ್ನು ಹಾಕಿದ್ದೇ ಆದರೆ ಅವರು ಯಾವುದಾದರೂ ಪ್ರಭಾವಕ್ಕೆ ಮಣಿದು ಸರಿಯಾದ ರೀತಿಯಲ್ಲಿ ವಿಚಾರಣೆ ನಡೆಸುವುದಿಲ್ಲ. ಜನತೆಗೆ ಸತ್ಯಾಂಶ ಗೊತ್ತಾ

ಗುವುದಿಲ್ಲ. ತಾವು ಸರಿಯಾದ ರೀತಿಯಲ್ಲಿ ತನಿಖೆಯನ್ನು ಮಾಡಿಸದೇ ಹೋದರೆ ನಾಳೆ ನಿಮ್ಮ ಮೇಲೆ ಆಪಾದನೆಗಳು ಬರುತ್ತವೆ. ಯಾವುದೇ ಕಾನೂನು ಪ್ರಕಾರವಾದರೂ ನೀವು ಕ್ರಮಕೈಗೊಳ್ಳಿ. ಆದರೆ, ಆ ತನಿಖೆಯ ಹಂತವನ್ನು ಆಗಿಂದಾಗ್ಗೆ ನಮಗೆ ತಿಳಿಸುವ ವ್ಯವಸ್ಥೆ ಮಾಡಿ, ಅತ್ಯಾಚಾರಕ್ಕೊಳಗಾದ ಮಹಿಳೆಯ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಆದರೆ ಈಗ ಅದು ಯಾವ ರೂಪವನ್ನು ತಾಳುತ್ತದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈಗ ರೂಲ್ ೩೩೪–೩೩೫ರ ಕೆಳಗೆ ಯಾವುದೇ ನಿರ್ಣಯ ವನ್ನೂ ಓಟಿಗೆ ಹಾಕುವುದು ಬೇಡ. ಇದರ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡುತ್ತಾರೆಂದು ನಂಬಿದ್ದೇನೆ. ತಪ್ಪು ಮಾಡಿರುವವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುವುದಾದರೆ ಅದು ಬೇರೆ. ಇತ್ತೀಚೆಗೆ ನೀವು ಪೋಲೀಸ್ ಇಲಾಖೆಯಲ್ಲಿ ಬಹಳ ಬದಲಾವಣೆಗಳನ್ನು ಮಾಡಿದ್ದೀರಿ. ನೀವು ಏನಾದರೂ ಮಾಡಿಕೊಳ್ಳಿ ಅದು ನಮಗೆ ಬೇಡ. ವಿಚಾರಣೆ ಮಾಡುವ ಶಕ್ತಿ ನಿಮಗೆ ಇದೆ. ಆದರೆ ಅದನ್ನು ಮಾಡುವಾಗ ಯಾವುದೋ ಒತ್ತಡಕ್ಕೆ ಮಣಿದು ಮಾಡುವುದಾದರೆ ತುಂಬಾ ಕಷ್ಟವಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತಂದು ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಸನ್ಮಾನ್ಯ ಉಪಾಧ್ಯಕ್ಷರೆ, ನಿನ್ನೆ ತಾನೇ ಪ್ರಸ್ತಾಪ ಮಾಡಿದಂಥ ವಿಚಾರವನ್ನು ತಾವು ಅದಷ್ಟು ಜಾಗ್ರುತೆ ಎಂದರೆ ಇವತ್ತೇ ನಿಯಮ ೩೩೪ರ ಕೆಳಗೆ ತಂದು ಸರ್ಕಾರದ ಗಮನವನ್ನು ಈ ಬಗ್ಗೆ ಸೆಳೆದಿದ್ದಕ್ಕೆ ವಿಶೇಷವಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಈ ವಿಚಾರದಲ್ಲಿ ನಾನು ಹೆಚ್ಚು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಮಾನ್ಯ ಸದಸ್ಯರಾದ ಬಂಗಾರಪ್ಪನವರು ೧೦ನೇ ತಾರೀಖು ಸುಮಾರು ೧.೩೦ ಗಂಟೆಯಲ್ಲಿ ನಡೆದಂಥ ಘಟನೆಯಿಂದ ಇಡೀ ಬೆಂಗಳೂರಿನ ನಾಗರೀಕರೇ ತಲೆತಗ್ಗಿಸಬೇಕಾದ ವಿಚಾರವಾಗಿದೆ. ಅಷ್ಟೇ ಅಲ್ಲದೆ ಆಡಳಿತವನ್ನು ನಿರ್ವಹಣೆ ಮಾಡುತ್ತಿರುವ ಸರ್ಕಾರವೂ ಕೂಡ ತಲೆ ತಗ್ಗಿಸಬೇಕಾದ ವಿಚಾರವಾಗಿದೆ ಎಂದು ಹೇಳಿದ್ದಾರೆ. ಮತ್ತೆ ಇದನ್ನೇ ನಾನೂ ಹೇಳಬೇಕಾದ ಅಗತ್ಯವಿಲ್ಲ. ಈ ಬೆಂಗಳೂರು ನಗರದಲ್ಲಿ ಅದೂ ಹಾಡು ಹಗಲಿನಲ್ಲೇ ಕೆಂಗಲ್ ಹನುಮಂತಯ್ಯ ರಸ್ತೆ, ಅಂದರೆ ಡಬಲ್ ರೋಡ್‌ನಲ್ಲಿ, ಯಾವಾಗಲೂ ಜನನಿಬಿಡವಾದ ಪ್ರದೇಶ ದಲ್ಲಿ, ಪೋಲೀಸರು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಇರತಕ್ಕ ಪ್ರದೇಶದಲ್ಲಿ. ಸಾರ್ವಜನಿಕರು ವಿಹರಿಸತಕ್ಕ ಲಾಲ್‌ಬಾಗ್‌ನಲ್ಲಿ ಈ ಹುಡುಗಿ ಕಿರುಚಿಕೊಳ್ಳುತ್ತಿದ್ದರೂ ಪೋಲೀಸರಾಗಲಿ, ಸಾರ್ವಜನಿಕರಾಗಲಿ, ಯಾವುದೇ ರೀತಿಯ ಪ್ರತಿಭಟನೆಯನ್ನೂ ಮಾಡದಿರುವುದನ್ನು ನೋಡಿದರೆ ನಾವು ತುಂಬಾ ಯೋಚನೆ ಮಾಡ ಬೇಕಾಗುತ್ತದೆ. ಒಂದು ಕಡೆ ಸಾರ್ವಜನಿಕರು ಧೈರ್ಯವಿಲ್ಲದೆ ಇಂಥ ಕೃತ್ಯ ನಡೆಯುತ್ತಿದ್ದರೂ ಅದನ್ನು ನೋಡಿಕೊಂಡೇ ಇದ್ದುದು ಅಂದರೆ ಹಿಂಜರಿದದ್ದು, ಇನ್ನೊಂದು ಕಡೆ ಪೋಲೀಸರ ನಿಷ್ಕ್ರಿಯತೆ ಯಿಂದಿದ್ದುದು.

ಅಲ್ಲಿ ಪೋಲೀಸ್‌ನವರು ಇರಲಿಲ್ಲ; ಇಲ್ಲದಿದ್ದರಿಂದ ಈ ಅಕ್ರಮವನ್ನು ತಡೆಯಲು ಸಾಧ್ಯವಾಗಲಿಲ್ಲ ವೆಂದು ಬಹಳ ಸುಲಭವಾಗಿ ಹೇಳಬಹುದು. ಆದರೆ ಇಂಥ ಒಂದು ಸಾರ್ವಜನಿಕ ಪ್ರದೇಶದಲ್ಲಿ ಅದರಲ್ಲೂ ಡಬ್ಬಲ್‌ರೋಡಿನಲ್ಲಿರತಕ್ಕಂಥ ಲಾಲ್‌ಬಾಗ್‌ನಲ್ಲಿ ಪೋಲೀಸ್‌ನವರು ಇರಲಿಲ್ಲವೆಂದು ಹೇಳಿದರೆ ಪೋಲೀಸ್‌ನವರು ಸಾರ್ವಜನಿಕ ಪ್ರಾಣ ಮತ್ತು ಆಸ್ತಿಪಾಸ್ತಿ ರಕ್ಷಣೆ ಮಾಡುವುದರಲ್ಲಿ ಎಷ್ಟು ಕಾಳಜಿ ಯನ್ನು ವಹಿಸಲಿಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ಸ್ಪಷ್ಟವಾಗಿ ಇವತ್ತು ತೋರುತ್ತಿದೆ. ನಾವು ಯಾವಾಗಲೂ ಕೂಡ ಕಾನೂನು ಪ್ರಶ್ನೆಯನ್ನು ಎತ್ತಿದಾಗ, ಅಕ್ರಮ ಅತ್ಯಾಚಾರದ ಬಗ್ಗೆ ಹೇಳಿದಾಗ ನಿಮಗೆ ನೈತಿಕವಾದ ಧೈರ್ಯವಿಲ್ಲ ಎನ್ನುವ ಮೊಂಡು ಹಠದ ಮಾತು ಗಳನ್ನೇ ಆಡುತ್ತಾರೆ. ಎಲ್ಲಿಯುವರೆಗೆ ಮಾನ್ಯ ಮುಖ್ಯ ಮಂತ್ರಿಗಳು ಹಠವನ್ನು ಬಿಡುವುದಿಲ್ಲವೋ ಅಲ್ಲಿಯವರೆಗೆ......

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಿ ಯಾವಾಗ ಆ ರೀತಿ ಹೇಳಿದ್ದು?

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊನ್ನೆ ಶಿವಮೊಗ್ಗದಲ್ಲಿ. ಮೊಂಡು ಹಠದಿಂದ ನೈತಿಕ ಧೈರ್ಯ ವಿಲ್ಲವೆಂದು ಹೇಳಿರುತ್ತೀರಿ.

ಶ್ರೀ ರಾಮಕೃಷ ಹೆಗಡೆ.—ಅದು ಸ್ವಯಂ ಸತ್ಯ, ಹಠವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊಂಡು ಹಠವನ್ನು ಹೀಗೆಯೇ ಮುಂದಕ್ಕೆ ಮಾಡಬೇಡಿ. ಅದನ್ನೇ ಸಾಧನೆ ಮಾಡುವುದಾದರೆ ಸಾರ್ವಜನಿಕರಲ್ಲಿಯಾಗಲಿ ಪೋಲೀಸ್‌ನವರಲ್ಲಿಯಾಗಲಿ ಯಾವ ರೀತಿಯಾದ ಒಂದು ಜಾಗ್ರತೆಯನ್ನು, ವಿಶ್ವಾಸವನ್ನು ಹುಟ್ಟಿಸುವುದಕ್ಕೆ ಖಂಡಿತವಾಗಿಯೂ ಸಾಧ್ಯ ವಾಗುವುದಿಲ್ಲ. ಇಂಥ ಘಟನೆ ನಡೆದಾಗ ದಯವಿಟ್ಟು ತಾವು ರಕ್ಷಣೆಯನ್ನು ಕೊಡಲಿಕ್ಕೆ ಪ್ರಯತ್ನ ಮಾಡಿ. ರಾಜಕೀಯವಾಗಿ ತಾವು ಉಪಯೋಗ ಮಾಡುವುದಾದರೆ ಬಹುಶಃ ಕಾನೂನನ್ನು ವ್ಯವಸ್ಥಿತ ವಾಗಿ ತೆಗೆದುಕೊಂಡು ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಮಹೇಶ್ವರಪ್ಪ.—ಇದರಲ್ಲಿ ಏನು ರಾಜಕೀಯವಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಬಹಳ ಪ್ರಮುಖ್ಯವಾದ ವಿಚಾರ.

ಶ್ರೀ ಜೆ. ಡಿ. ಸೋಮಪ್ಪ.—ನಮ್ಮ ನಾಯಕರು ಮಾತನಾಡುವಾಗ ಏತಕ್ಕೆ ಅವರು ಪದೇ ಪದೇ ಎದ್ದು ನಿಂತು ಮಾತನಾಡುತ್ತಾರೆ?.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದವರು ರಾಜಕೀಯ ಮಾಡಬಾರದು, ಹಾಗೆಯೇ ವಿರೋಧಪಕ್ಷದವರೂ ಕೂಡ ರಾಜಕೀಯ ಮಾಡಬಾರದು. ರಾಜಕೀಯ ಮಾಡಿದರೆ ರಾಜಕೀಯ ವಾಗಿಯೇ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ಸಂಯುಕ್ತವಾಗಿ ಕಾರ್ಯಕ್ರಮ ವಿದ್ದರೆ ಅದು ನಮಗೂ ಕ್ಷೇಮ ನಿಮಗೂ ಕ್ಷೇಮ. ಏತಕ್ಕೆಂದರೆ ಇದು ಬಹಳ ಪ್ರಮುಖವಾದ ವಿಚಾರ ಪೋಲೀಸ್ ನವರು ಒಂದು ಕಡೆ ನಿಷ್ಕ್ರಿಯರಾಗಿದ್ದರೆ ಮತ್ತೊಂದು ಕಡೆ ಸಾರ್ವಜನಿಕರಲ್ಲಿಯೂ ಕೂಡ ಕಾನೂನನ್ನು ಸಂರಕ್ಷಣೆ ಮಾಡುವ ವ್ಯವಸ್ಥೆಯಲ್ಲಿ ಒಂದು ರೀತಿಯಾದ ಅಧೈರ್ಯ ಉಂಟಾಗಿರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಲ್ಲಿ ಒಂದು ವಿಷಯವನ್ನು ಕೇಳುತ್ತೇನೆ. ಈ ವಿಷಯವನ್ನು ೩೩೩ ಅಧಿನಿಯಮದ ಪ್ರಕಾರ ಚರ್ಚೆ ಮಾಡುತ್ತಿದ್ದಾರೆಯೇ ಎಂದು ?

ಉಪಾಧ್ಯಕ್ಷರು.—ಕೆಲವು ಸಂದರ್ಭದಲ್ಲಿ ಪುಸ್ತಕದಲ್ಲಿ ಕ್ರಮಸಂಖ್ಯೆ ತಪ್ಪಾಗಿ ಅಚ್ಚಾಗುವುದು ಇರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯ ಪ್ರಸ್ತಾಪವಾಗುತ್ತಿರುವುದು ಬೇರೆ ವಿಧದಲ್ಲಿ, ಇಂಥ ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಬೇರೆ ವಿದದಲ್ಲಿರುತ್ತದೆ ಶಾರ್ಟ್‌ನೋಟೀಸ್ ಕ್ವಶ್ಚನ್, ಕಾಲಿಂಗ್ ಅಟೆನ್‌ಷನ್ ರೀತಿಯಲ್ಲಿ ಪ್ರಸ್ತಾಪ ಮಾಡಬೇಕು. ಆದರೆ ಇಲ್ಲಿ ಪ್ರಸ್ತಾವನೆ ೩೩೩ನೇ ಅಧಿ ನಿಯಮದ ಕೆಳಗೆ ನಡೆಯುತ್ತಾ ಇರತಕ್ಕಂಥ ಸಂದರ್ಭದಲ್ಲಿ ಈ ನಿಯಮದ ಕಾನೂನು ವ್ಯಾಪ್ತಿ ಏನು ? ಇದು ಒಂದು ನಿಲುವಳಿ ಸೂಚನೆಯ ರೀತಿಯಲ್ಲಿ ವಿಚಾರ ನಡೆಯುವುದಕ್ಕೆ ವಿನಿಮಯವಾಗಿದಿಯೇ? ಹಿಂದೆ ಸಭೆಯಲ್ಲಿ ನಿಯಮಾವಳಿಗಳಿಗೆ ಅನುಸಾರವಾಗಿ ಶೂನ್ಯವೇಳೆಯಲ್ಲಿ ಅದರ ವ್ಯಾಪ್ತಿಯಲ್ಲಿ ಇಂಥ ವಿಷಯ ತೆಗೆದುಕೊಂಡರೂ ಪ್ರಸ್ತಾವನೆ ಮಾಡುವುದಕ್ಕೆ ಆಗುತ್ತಿರಲಿಲ್ಲ ಇಂಥ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದರೆ ಸರಿಯಾಗಿ ನೋಟೀಸ್ ಕೊಟ್ಟು ಸೂಚನೆ ಕೊಟ್ಟು ಅದರ ಹಿನ್ನೆಲೆಯಲ್ಲಿ ಇಂಥ ಸನ್ನಿವೇಶಗಳನ್ನು ನಿಯಮಾವಳಿಗಳಿಗೆ ಒಳಪಟ್ಟು ಪ್ರಸ್ತಾಪಿಸಬೇಕು. ಇದು ಹೊಸ ನಿಯಮ ವಾಗಿ ತಂದಿದ್ದಾರೆ. ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ ಅದರ ವ್ಯಾಪ್ತಿಯನ್ನು ತಾವು ನಿರ್ಧರಿಸ ಬೇಕು. ಹೀಗೆಯೇ ಒಂದು ಪರಿಪಾಠವನ್ನು ಮುಂದೆ ನಡೆಸಿಕೊಂಡು ಹೋದರೆ ನಿಲುವಳಿ ಸೂಚನೆಗೂ ಅಧಿನಿಯಮದ ಪ್ರಕಾರ ಇವತ್ತು ಎತ್ತಿದ ಪ್ರಕರಣಕ್ಕೂ ಏನು ವ್ಯತ್ಯಾಸವಿರುವುದಿಲ್ಲ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಯಾವ ವಿಚಾರಗಳನ್ನು ಎಷ್ಟರಮಟ್ಟಿಗೆ ಪ್ರಸ್ತಾಪ ಮಾಡಬೇಕು ಎನ್ನುವ ಬಗ್ಗೆ ತಾವು ತಿಳಿಸಬೇಕು. ಶಾರ್ಟ್‌ನೋಟೀಸ್ ಕ್ವಶ್ಚನ್, ಕಾಲಿಂಗ್ ಅಟೆನ್‌ಷನ್ ಇದಕ್ಕೆ ಏನು ಮಾಡುತ್ತಿದ್ದರು ಎಂದರೆ ಮಂತ್ರಿಗಳಿಗೆ ಇಂಥ ಒಂದು ಗಮನ ಸೆಳೆಯುವ ಸೂಚನೆಯನ್ನು ತರುತ್ತೇನೆಂದು ಮಂತ್ರಿಗಳ ಗಮನವನ್ನು ಸೆಳೆದಾಗ ಅವರು ಅದರ ಮೇಲೆ ಸ್ಟೇಟ್‌ಮೆಂಟ್ ಮಾಡು ತ್ತಿದ್ದರು. ಅನಂತರ ಕ್ಲಾರಿಫಿಕೇಶನ್ ಕೇಳುತ್ತಿದ್ದರು. ಇದು ನನ್ನ ಅಭಿಪ್ರಾಯ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸಚಿವರು ತಮಗೆ ಬುದ್ಧಿವಾದ ಹೇಳುತ್ತಿದ್ದಾರೆ.

SRI A. LAKSHMISAGAR.—Sir, as per rule 334 of the Rules of Procedure, a point of order shall relate to the interpretation of enforcement of these rules of such articles of the Constitution as regulate the business of the House and shall raise a question which is within the cognizance of the Speaker.

ಶ್ರೀ ಕೆ. ಎಚ್. ರಂಗನಾಥ್.—ಪತ್ರಿಕೆಯಲ್ಲಿ ಬಂದಿದೆ, ಮಾತನಾಡಿದ್ದರೆ. ಚರ್ಚೆ ಆಗಬಾರದು ಎಂದು ಹೇಳಿದರೆ .....

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಕೊಟ್ಟಿರತಕ್ಕಂಥ ಪತ್ರದಲ್ಲಿ ೩೩೫ ಎಂದು ಇದೆ. ಆದರೆ ೩೩೪ರ ಕೆಳಗೆ ತೆಗೆದುಕೊಂಡು ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ ನಾನು ಕೇಳುವುದು ಯಾವ ವಿಚಾರದಲ್ಲಿ ಈ ಪಾಯಿಂಟ್ ಆಫ್ ಆರ್ಡರ್ ಬಂದಿದೆ ಎಂದು. I am only trying to point out the importance of Rule 334. ನಾವೇನು ಗೊರಕೆ ಹೊಡೆಯುತ್ತಿದ್ದು ಈವತ್ತು ಎಚ್ಚೆತ್ತಿಲ್ಲ, Sir, a point of order shall relate to the interpretation of enforcement of these rules or such articles of the Constitution as regulate the business of the House and shall raise a question which is within the cognizance of the Speaker. Therefore Sir, my submission is that Rule 334 does not admit of an elaborate discussion in consonance with or of the type of an adjournment motion. The manner in which elaborate arguments being addressed under this rule are not permissible. Therefore, I am making a request to you, Sir, to limit the ambit of this rule and limit the discussion.

ಶ್ರೀ ಕೆ. ಎಚ್. ರಂಗನಾಥ್.—ಅಜೆಂಡಾದಲ್ಲಿ ಏತಕ್ಕೆ ಹಾಕಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಕೊಟ್ಟಿರತಕ್ಕಂಥ ಪುಸ್ತಕದಲ್ಲಿ ೩೩೫ ಎಂದು ಇದೆ. ಮಾನ್ಯ ಅಜೀಜ್ ಸೇಟ್‌ರವರ ಕ್ವಶ್ಚನ್‌ನಲ್ಲಿ ಅದನ್ನು ಹೇಳಿದ್ದಾರೆ. ನೀವು ಅದನ್ನು ಕೇಳುವುದಕ್ಕೆ ಇಷ್ಟವಿಲ್ಲದಿದ್ದರೆ ನಾವು ಏನು ಮಾಡುವುದು.

೨-೦೦ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಎತ್ತಿದ ಕ್ರಿಯಾಲೋಪವನ್ನು ನಾನು. ಅರ್ಥ ಮಾಡಿಕೊಂಡ ರೀತಿಯಲ್ಲಿ ಹೇಳುವುದಾದರೆ ೩೩೪ನೇ ನಿಯಮದ ಪ್ರಕಾರ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಲಾಗುತ್ತಿದೆ. ೩೩೫ನೇ ನಿಯಮದ ಪ್ರಕಾರ ಎಂಬುದಕ್ಕೆ ಬದಲು ಇಲ್ಲಿ ೩೩೪ನೇ ನಿಯಮದ ಪ್ರಕಾರ ಎಂದು ತಪ್ಪಾಗಿ ಪ್ರಿಂಟಾಗಿರಬಹುದು. ಈ ಒಂದು ನಿಯಮದ ಪ್ರಕಾರ ವಿವರವಾಗಿ ಚರ್ಚೆ ಮಾಡಲು ಅವಕಾಶವಿಲ್ಲ, ಆದಕಾರಣ ಇದಕ್ಕೆ ಸಮಯ ನಿಗದಿ ಮಾಡಬೇಕೆಂಬುದು ಮಾನ್ಯ ಮಂತ್ರಿಗಳ ಅಭಿಪ್ರಾಯವಾಗಿದೆ. ಇವೊತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬೇರೆ ವಿಚಾರಗಳೂ ಸಹ ಇವೆ. ಅವೂ ಕೂಡ ಇಲ್ಲಿ ಚರ್ಚೆಗೆ ಬರಬೇಕಾಗುತ್ತದೆ. ಇದು ನಿಲುವಳಿ ಸೂಚನೆಯಾಗಿದ್ದರೆ ಬೇರೆ ಕಾರ್ಯಕಲಾಪಗಳನ್ನೆಲ್ಲಾ ಮುಂದೂಡಬಹುದಾಗಿತ್ತು. ಆದರೆ ಇದು ನಿಲುವಳಿ ಸೂಚನೆಯಲ್ಲ. ಇದರ ಜೊತೆಗೆ ೩೩೫ನೇ ನಿಯಮವು ಒಂದು ಸೂಚನೆ ಮೂಲಕ ಇಲ್ಲಿ ಚರ್ಚೆಗೆ ಬರಲು ಸಾಧ್ಯವಿಲ್ಲ. ಆದ್ದರಿಂದ...

ಶ್ರೀ ಕೆ. ಎಚ್, ರಂಗನಾಥ್. - ಈ ವಿಷಯದ ಮೇಲೆ ಚರ್ಚೆ ಮಾಡಲು ಹೆಚ್ಚು ಅವಕಾಶ ಕೊಡುತ್ತಿದ್ದೀರಿ ಎಂದು ಮಾನ್ಯ ಮಂತ್ರಿಗಳು ಅಧ್ಯಕ್ಷರಿಗೇ ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಸಮಯ ನಿಗದಿ ಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಈ ನಿಯಮದಲ್ಲಿ ಹೇಳಿರುವ ಪ್ರಕಾರ ಸದಸ್ಯರಾದವರು ಯಾವುದೇ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಡಬೇಕು. ನಂತರ ಅದಕ್ಕೆ ಅಧ್ಯಕ್ಷರು ಅನುಮತಿ ಕೊಡಬೇಕು. ಅದಾದನಂತರ ಕಾರ್ಯಕ್ರಮದ ಪಟ್ಟಿಯಲ್ಲಿ ಅದು ಸೇರುತ್ತದೆ. ಆದರೆ ಇಂತಹ ವಿಷಯಗಳನ್ನು ಇಲ್ಲಿ

ಪ್ರಸ್ತಾಪ ಮಾಡಲು ಸಮಯವನ್ನು ನಿಗದಿ ಮಾಡಿಲ್ಲ. ಎಷ್ಟು ಸಮಯ ಕೊಡಬೇಕು ಎಂಬುದನ್ನು ಅಧ್ಯಕ್ಷರೇ ತೀರ್ಮಾನ ಮಾಡಬಹುದು. ಆದ್ದರಿಂದ ಮಾನ್ಯ ಮಂತ್ರಿಗಳ ಕ್ರಿಯಾಲೋಪ ಇಲ್ಲಿ ಉಳಿಯುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಮೂರು ನಿಮಿಷಗಳ ಕಾಲ ಕೂಡ ಮಾತನಾಡಿರಲಿಲ್ಲ. ಅಷ್ಟರಲ್ಲಿ ಈ ಕ್ರಿಯಾಲೋಪ ಬಂತು. ತಮ್ಮ ಅನುಮತಿ ಮೇಲೆ ನಾನು ಮಾತನಾಡುತ್ತಿದ್ದೇನೆ. ಸಾರ್ವಜನಿಕರಲ್ಲಿಯೇ ಆಗಲೀ ಪೋಲೀಸರಲ್ಲಿಯೇ ಆಗಲೀ ಮಾನಸಿಕ ವೇದನೆ ಇರದಂತೆ ಸರ್ಕಾರ ನೋಡಿಕೊಳ್ಳಬೇಕು. ಈ ಮೊದಲು ಬಳ್ಳಾರಿಯಲ್ಲಿ ಮಾನಭಂಗದ ಪ್ರಕರಣ ನಡೆದಾಗ ಜನರು ಪ್ರತಿಭಟನೆ ಮಾಡಿದರು. ಆಗ ಜನರಿಗೆ ಸಿಕ್ಕ ಉತ್ತರ ಎಂದರೆ ಗುಂಡೇಟು. ಪೋಲೀಸರು ಗೋಲಿಬಾರ್ ಮಾಡಿದರು. ಇದರಲ್ಲಿ ಕೆಲವು ಜನರು ಸತ್ತರು. ಇದರ ನಂತರ ಬೆಂಗಳೂರು ನಗರದಲ್ಲಿ ಟ್ರಾಫಿಕ್ ಪೋಲೀಸರು ಸರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಲಿಲ್ಲವೆಂಬ ಕಾರಣದಿಂದ ಸರ್ಕಲ್-ಇನ್ಸ್‌ಪೆಕ್ಟರ್ ಒಬ್ಬರನ್ನು ಸಸ್ಪೆಂಡ್ ಮಾಡಲಾಯಿತು. ಇಂತಹ ಸೂಕ್ಷ್ಮ ವಿಚಾರಗಳಲ್ಲಿ ಪೋಲೀಸರ ಮನಸ್ಸಿನಲ್ಲಿರುವಂತಹ ಸ್ಥೈರ್ಯವನ್ನು ಕುಗ್ಗಿಸುವುದಾದರೆ ಅವರು ಪ್ರಾಮಾಣಿಕತನದಿಂದ ಕೆಲಸ ಮಾಡುವುದಾದರೂ ಹೇಗೆ ? ಬೆಂಗಳೂರು ಸಿಟಿಯಲ್ಲಿ ನಿನ್ನೆ ಕೂಡ ೩ ಕಡೆಗಳಲ್ಲಿ ದರೋಡೆ ನಡೆದಿದೆ ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. ಈಗ ಒಂದು ಕಡೆ ಪೋಲೀಸರೇ ತಮಗೆ ರಕ್ಷಣೆ ಬೇಕೆಂದು ಒಂದು ಕಡೆ ಕೇಳುತ್ತಿದ್ದರೆ ಮತ್ತೊಂದು ಕಡೆ ಸಾರ್ವಜನಿಕರು ನಮಗೆ ರಕ್ಷಣೆ ಬೇಕು ಎಂದು ಕೇಳುತ್ತಿದ್ದಾರೆ. ಇಂತಹ ಒಂದು ಅಮಾನುಷ ಕೃತ್ಯ ನಡೆದ ಕಾರಣ ಜನರು ಸರ್ಕಾರದಿಂದ ರಕ್ಷಣೆ ಕೇಳುತ್ತಿದ್ದಾರೆ ತಮಗೆ ಜನರಿಗೆ ರಕ್ಷಣೆ ಕೊಡಲು ಸಾಧ್ಯವಿಲ್ಲದಿದ್ದರೆ ಪೋಲೀಸ್ ಇಲಾಖೆಯನ್ನು ನಮಗೆ ಬಿಟ್ಟುಕೊಡಿ, ನಾವು ನೋಡಿಕೊಳ್ಳುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಇರುವಂತಹ ಪೋಲೀಸ್ ಅಧಿಕಾರಿಗಳೇ ಮಾನ್ಯ ಮೊಯ್ಲಿ ಅವರು ಅಧಿಕಾರ ನಡೆಸಿದ ೩ ವರ್ಷಗಳ ಕಾಲದಲ್ಲಿಯೂ ಸಹ ಇದ್ದರು.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೆ ನೀವು ಮತ್ತು ಅವರು ಸೇರಿಕೊಂಡು ಒಂದು ತೀರ್ಮಾನಕ್ಕೆ ಬರುವುದಾದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಿಷ್ಟೆ, ನಿಮ್ಮ ಹಿಂದೆ ಪೋಲೀಸರು ಇದ್ದಾರೆಂಬ ವಿಶ್ವಾಸವನ್ನು ಸಾರ್ವಜನಿಕರಲ್ಲಿ ಮೊದಲು ಮೂಡಿಸಬೇಕು. ಇದರ ಜೊತೆಗೆ ಇನ್ನು ಮುಂದೆ ಇಂತಹ ಅತ್ಯಾಚಾರಗಳು ನಡೆಯದಂತೆ ಸರ್ಕಾರ ನೋಡಿಕೊಳ್ಳುತ್ತದೆ ಎಂಬ ಭರವಸೆಯನ್ನು ಸಹ ಸಾರ್ವಜನಿಕರಲ್ಲಿ ಹುಟ್ಟಿಸಬೇಕು. ಈ ದಿಶೆಯಲ್ಲಿ ಸರ್ಕಾರ ನಿಷ್ಠೂರವಾದಂಥ ಕಾರ್ಯಕ್ರಮ ಕೈಕೊಳ್ಳಬೇಕು. ಈ ಒಂದು ಪ್ರಕರಣದಲ್ಲಿ ಮೂರು ಮುಖ್ಯ ವಿಚಾರಗಳು ಎಂದರೆ, ಈ ಅತ್ಯಾಚಾರಕ್ಕೆ ಒಳಗಾದ ಹುಡುಗಿಯನ್ನು ಯಾರಾದರು ಮದುವೆಯಾಗುವುದು ಕಷ್ಟ ಮತ್ತು ಆ ಹುಡುಗಿ ಮೊದಲಿನಂತೆ ಕೆಲಸಕ್ಕೆ ಹೋಗುವುದಕ್ಕೂ ಕಷ್ಟವಾಗಬಹುದು ಈ ಕಾರಣದಿಂದ ಸರ್ಕಾರ ಪುನರ್ವಸತಿಯ ವ್ಯವಸ್ಥೆ ಬಗ್ಗೆ ಒಂದು ಘೋಷಣೆ ಮಾಡಿದರೆ ಒಂದು ಹೆಚ್ಚಿನ ವಿಶ್ವಾಸ ಹುಟ್ಟುತ್ತದೆ. ಈ ರೀತಿ ಮಾಡದಿದ್ದರೆ ಶೀಲಭಂಗಕ್ಕೆ ಒಳಗಾದ ಹುಡುಗಿಗೆ ಹೆಚ್ಚಿನ ಸಮಾಧಾನ ಆಗುವುದಕ್ಕೆ ಕಷ್ಟವಾಗಬಹುದು. ಆದ್ದರಿಂದ ಇದರ ಕಡೆಗೆ ಸರ್ಕಾರ ಗಮನ ಕೊಡಬೇಕು. ಇದೇ ಸಂದರ್ಭದಲ್ಲಿ ಈ ಸದನದ ಮುಖಾಂತರ ಸಾರ್ವಜನಿಕರಲ್ಲಿ ನನ್ನ ವಿನಂತಿ ಏನೆಂದರೆ, ಇಂತಹ ಒಂದು ಅಮಾನುಷವಾದಂಥ ಕೃತ್ಯ ನಡೆದಾಗ ನಮ್ಮ ಒಂದು ಸಮಾಜದ ವ್ಯವಸ್ಥೆಯಲ್ಲಿ ಅದನ್ನು ಪ್ರತಿಭಟನೆ ಮಾಡುವಂತಹ ಧೈರ್ಯ ಸಾರ್ವಜನಿಕರಲ್ಲಿ ಬರಬೇಕು. ಹೆಣ್ಣುಮಕ್ಕಳ ಮತ್ತು ದುರ್ಬಲವರ್ಗದವರ ರಕ್ಷಣೆಗೆ ಮುಂದೆ ಬರುವಂತಹ ಮನೋಭೂಮಿಕೆ ನಾಗರೀಕರಲ್ಲಿ ಬರದಿದ್ದರೆ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಹೆಚ್ಚುಕಡಿಮೆಯಾಗುತ್ತದೆ. ಆದ್ದರಿಂದ ಇಂತಹ ಒಂದು ಘಟನೆಗಳು ಇನ್ನು ಮುಂದೆ ಆಗದಂತೆ ನೋಡಿಕೊಳ್ಳುವ ಒಂದು ಸಂಪೂರ್ಣವಾದಂಥ ವಿಶ್ವಾಸವನ್ನು ಜನರಲ್ಲಿ ಪೋಲೀಸರ ಮೂಲಕ ಹುಟ್ಟಿಸಲು ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಪ್ರಾಮಾಣಿಕವಾದಂಥ ಮನೋಭಾವನೆಯನ್ನು ಇಟ್ಟುಕೊಂಡು ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಷಯ. ಇದಕ್ಕೂ ಮೊದಲು ಈ ಸಭೆಯಲ್ಲಿ ಸೀಮೆ ಎಣ್ಣೆ ಪ್ರಕರಣ ಬಂದಾಗ ೩ ದಿನಗಳ ಕಾಲ ಚರ್ಚೆಯಾಗಿದೆ. ಆದ್ದರಿಂದ ಇದಕ್ಕೆ ಸಮಯದ ನಿಗದಿ ಮಾಡಬಾರದು. ಈಗ ನಮ್ಮ ಮುಂದೆ ಇಡೀ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ದೇಶಕ್ಕೆ ಸಂಬಂಧಪಟ್ಟಂತಹ ಒಂದು ಸಮಸ್ಯೆ ಇದೆ.

(ಶ್ರೀ ಎಚ್. ಗಂಗಾಧರನ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಎಲ್ಲರಿಗೂ ಗೊತ್ತಿರುವಂತೆ ನಮ್ಮ ದೇಶದಲ್ಲಿ ಮೊದಲಿನಿಂದಲೂ ಹೆಣ್ಣು ಮಕ್ಕಳ ಮಾನದ ಬಗ್ಗೆ ಒಂದು ವೈಶಿಷ್ಟವಿದೆ. ಪರದೇಶಗಳಲ್ಲಿ ಇದು ಯಾವ ರೀತಿ ಇದೆಯೋ ನನಗೆ ಗೊತ್ತಿಲ್ಲ. ಆದರೆ ನಮ್ಮ ದೇಶದ್ದು ಮಾತ್ರ ನನಗೆ ಗೊತ್ತು. ತಮಗೆ ಒಂದು ಮಾತನ್ನು ಹೇಳಬೇಕೆಂದರೆ, ನಮ್ಮ ಹಿಂದಿನ ಚರಿತ್ರೆಯ ಪ್ರಕಾರ ಚಿತ್ತೂರಿನ ರಾಜ ಶ್ರೀ ಭೀಮಸೇನನ ಹೆಂಡತಿಯಾದ ಪದ್ಮಿನಿಯನ್ನು ಅಲ್ಲಾವುದ್ದೀನ್ ಖಿಲ್ಜಿಯು ನೋಡಬೇಕೆಂದು ಇಷ್ಟಪಟ್ಟು ಒಂದು ಕಾಗದ ಬರೆದು ಕಳುಹಿಸಿಕೊಡುತ್ತಾನೆ. ಆದರೆ ಚಿತ್ತೂರಿನ ರಾಜ ಒಪ್ಪದಿದ್ದಾಗ ಯುದ್ಧ ನಡೆದು ಚಿತ್ತೂರು ಸಂಪೂರ್ಣ ನಾಶವಾಗುತ್ತದೆ. ಆ ಸಂದರ್ಭದಲ್ಲಿ ಕೂಡ ಇಂತಹ ಮಾನಭಂಗವಾಗಲು ಅವಕಾಶ ಕೊಡದೆ ಪದ್ಮಿನಿಯು ಜೊತೆಗೆ ೨ ಸಾವಿರ ಇತರೇ ಹೆಣ್ಣುಮಕ್ಕಳು ಬೆಂಕಿಯಲ್ಲಿ ಬಿದ್ದು ಸಾಯುತ್ತಾರೆ. ಇಂತಹ ದೇಶ ನಮ್ಮದು. ರಾಮಾಯಣ ಮತ್ತು ಮಹಾಭಾರತ ನಡೆದಂಥ ಈ ದೇಶದಲ್ಲಿ ಇಂದು ನಾವು ಇಂತಹ ಪರಿಸ್ಥಿತಿಯನ್ನು ನೋಡಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಮಾತನಾಡುವಾಗ ಸದಸ್ಯರಿಗೆ ತಾವು ವೇಳೆಯ ಮಿತಿಯನ್ನು ಹಾಕುವುದು ಸರಿಯಾದ ಕ್ರಮವಾಗುವುದಿಲ್ಲ. ಈ ಸದನದ ಮೂಲಕ ನಾನು ಸಾರ್ವಜನಿಕರಿಗೆ ಹೇಳುವುದೇನೆಂದರೆ, ಮನುಷ್ಯನ ಮುಖ್ಯವಾದಂಥ ಕ್ರಿಯಾವಸ್ತುವೆಂದರೆ ಪ್ರಾಣ. ನೂರು ವರ್ಷ ಬದುಕುವಂತಹ ಮನುಷ್ಯನಿಗೆ ಏನಾದರು ಖಾಯಿಲೆ ಬಂದರೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿಯಾದರೂ ಪ್ರಾಣ ಉಳಿಸಿಕೊಳ್ಳಬಹುದು ಕಳೆದುಕೊಂಡಂತಹ ಹಣವನ್ನು ಮತ್ತೆ ಬೇಕಾದರೆ ಸಂಪಾದನೆ ಮಾಡಬಹುದು. ಆದರೆ ಹೋದಂಥ ಮಾನ ವಾಪಸ್ ಬರುವುದಿಲ್ಲ. ಮಾನಭಂಗ ಎಂಬುದು ಮರ್ಡರ್ ಕೇಸ್‌ಗಿಂತಲೂ ಮುಖ್ಯವಾದುದು. ಮರ್ಡರ್ ಕೇಸ್‌ನಲ್ಲಿ ಕೆಲವು ದಿನಗಳ ನಂತರ ಆ ಫ್ಯಾಮಿಲಿಗೆ ಅಷ್ಟಾಗಿ ಎಫೆಕ್ಟ್ ಆಗುವುದಿಲ್ಲ. ಆದರೆ ಒಂದು ಫ್ಯಾಮಿಲಿಗೆ ಸೇರಿದ ಹೆಣ್ಣುಮಗಳ ಮಾನ ಭಂಗವಾಯಿತೆಂದರೆ, ಆ ಫ್ಯಾಮಿಲಿ ಮೆಂಬರ್ಸ್‌ಗೆ, ಆಕೆಯ ಸಹೋದರರಿಗೆ, ಆಕೆಯ ಸಂಬಂಧಿಗಳಿಗೆ ದೊಡ್ಡ ಆಘಾತವಾಗುತ್ತದೆ. ಇದರ ಜೊತೆಗೆ ಇಂತಹ ಪ್ರಕರಣವು ನಡೆದಾಗ ಇಡೀ ದೇಶದ ಮೇಲೂ ಅಪಘಾತವಾಗುತ್ತದೆ. ಆದ್ದರಿಂದ ನಾವು ಈ ಒಂದು ದೃಷ್ಟಿ ಇಟ್ಟುಕೊಂಡು ವಿಚಾರ ಮಾಡಬೇಕಾಗುತ್ತದೆ ಇಂತಹ ವಿಚಾರ ಮಾಡುವಾಗ ಒಂದು ಪ್ರಶ್ನೆ ಬಂತು, ನಮ್ಮಲ್ಲಿ ವಾದ ನಡೆಯುತ್ತದೆ. ಆ ಪಕ್ಷ ಈ ಪಕ್ಷ ಎಂದು ಪಕ್ಷದ ಬಗ್ಗೆ ಮಾತನಾಡುವುದು ನಾಚಿಕೆಗೇಡಿನ ಮಾತಾಗಿದೆ. ಇದು ಒಬ್ಬರ ಪ್ರಶ್ನೆಯಲ್ಲ, ಇದು ಸಮಾಜದ ರಾಷ್ಟ್ರದ ಪ್ರಶ್ನೆ. ರಜನೀಶ್ ಒಂದು ಮಾತು ಹೇಳಿದ್ದಾರೆ, ಡೆಮಾಕ್ರಸಿ ಎಂದರೇನು ಎಂದು ಹೇಳಿದ್ದಾರೆ. ಒಬ್ಬ ಮನುಷ್ಯ ಬಾವಿಯಲ್ಲಿ ಮುಳುಗಿ ಸಾಯುತ್ತಿದ್ದಾಗ ನನ್ನನ್ನು ಬದುಕಿಸಿ ಎಂದು ಕೂಗಿಕೊಂಡರೆ, ದಾರಿಯಲ್ಲಿ ಹೋಗತಕ್ಕ ಜನ ಆತನ ಪ್ರಾಣ ಉಳಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ ಯಾರೋ ಹೊಸ' ಬಾವಿ ತೊಡಿಸಿದ್ದರು ಅಲ್ಲಿ ಏತಕ್ಕೆ ಹೋಗಬೇಕಾಗಿತ್ತು ಅಲ್ಲೇನು ಸಾಯಲಿಕ್ಕೆ ಹೋಗಿದ್ದನಾ, ಎಂದು ಈ ರೀತಿ ಮಾತನಾಡಿಕೊಳ್ಳುತ್ತಾರೆ. ಅವನು ಯಾರೇ ಆಗಿರಲಿ ಮೊದಲು ಆತನ ಪ್ರಾಣ ಉಳಿಸಬೇಕು. ಸಾಯುವವನ ಪ್ರಾಣ ಉಳಿಸುವುದು ಇವರಿಗೆ ಮುಖ್ಯವಲ್ಲ, ಅಲ್ಲೂ ಕೂಡ ರಾಜಕೀಯ ಮಾಡುವುದು ಮುಖ್ಯ. ಇವತ್ತಿನ ದಿವಸ ನನಗೆ ಮಾತ್ರ ಊಟ ಸಿಗಬೇಕು, ಬೇರೆಯವರಿಗೆ ಇಲ್ಲದಿದ್ದರೂ ಪರವಾಗಿಲ್ಲ ಎಂಬ ಧೋರಣೆ ಇದೆ. ಇವತ್ತು ಪ್ರಜಾಪ್ರಭುತ್ವ ಇಷ್ಟು ಕೆಳಗೆ ಇಳಿದಿದೆ ಎಂದು ನನಗನಿಸುತ್ತದೆ. ೩೫ ವರ್ಷಗಳಿಂದಲೂ ಪ್ರಜಾಪ್ರಭುತ್ವ ನಡೆದುಕೊಂಡು ಬಂದಿದೆ. ಓಟು ತೆಗೆದುಕೊಳ್ಳುತ್ತಾರೆ, ಓಟು ಕೊಟ್ಟಂತಹ ಜನಗಳಿಗೆ ಏನೂ ಸಹಾಯ ಮಾಡುವುದಿಲ್ಲ ಬರೀ ಓಟಿನ ಬ್ರಹ್ಮರಾಗಿ ಇರುತ್ತಾರೆಯೇ ವಿನಹ ಬೇರೆ ಯಾವುದೇ ವಿಚಾರವನ್ನು ಮಾಡುವುದಿಲ್ಲ. ಪಕ್ಷ ಮುಖ್ಯ ಅದು ಯಾವುದೇ ಆಗಿರಬಹುದು, ಆ ಒಂದು ಪರಿಸ್ಥಿತಿಗೆ ಬಂದಿದ್ದೇವೆಂದು ನಾನು ಹೇಳಬೇಕಾಗಿದೆ. ನಾನು ಒಂದು ಮಾತು ಹೇಳುತ್ತೇನೆ, ಬಳ್ಳಾರಿಯಲ್ಲಿ ನಡೆದಂತಹ ಘಟನೆ ವಾಸ್ತವಿಕವಾಗಿ ಪೋಲೀಸರಿಂದಲೇ ನಡೆಯಿತು. ಪೋಲೀಸ್‌ನವರದು ತಪ್ಪು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಅದರ ಬಗ್ಗೆ ಕೇಸಾಯಿತು. ಅದರ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ. ಚರ್ಚೆ ಏತಕ್ಕೆ ಮಾಡಬೇಕು ? ಅಂದರೆ ಚರ್ಚೆ ಮಾಡುವ ಕಾರಣವೇನೆಂದರೆ ಘಟನೆ ಯಾವ

ಪ್ರಕಾರ ನಡೆಯಿತು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಪೋಲೀಸ್‌ನವರು ಈ ಪ್ರಕಾರ ಏತಕ್ಕೆ ಮಾಡುತ್ತಿದ್ದಾರೆ ?

ಶ್ರೀ ಬಾಪೂಗೌಡ.—ಮಾನ್ಯ ಸದಸ್ಯರಾದ ಖಂಡ್ರೆಯವರು ಚಿಕ್ಕ ಕಥೆಗಳನ್ನು ಕಟ್ಟಿದ್ದಾರೆ. ಈ ವಿಷಯಗಳ ಮೇಲೆ ಕಥೆಗಳನ್ನು ಕಟ್ಟುವ ಪ್ರಯತ್ನ ಮಾಡಿದ್ದಾರೆ. ಇವರ ಕಥೆಗೂ ಇಲ್ಲಿ ನಾವು ಚರ್ಚೆ ಮಾಡುವ ವಿಷಯಕ್ಕೂ ಯಾವುದೇ ಸಂಬಂಧವಿಲ್ಲ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಮಾನ್ಯ ಸದಸ್ಯರಾದ ಬಾಪೂಗೌಡರಿಗೆ ನಾನು ಹೇಳುವ ಮಾತು ಕಥೆಗಳ ರೂಪದಲ್ಲಿ ಕಾಣಿಸುತ್ತದೆ. ಅದರ ವಾಸ್ತವಿಕತೆ ಏನೆಂಬುದು ನಿಮಗೆ ತಿಳಿದು ಬರಲಿಲ್ಲ. ನಡೆದಂತಹ ಘಟನೆಯ ಬಗ್ಗೆ ಮಾನ್ಯ ಬಂಗಾರಪ್ಪನವರು ಮತ್ತು ವೀರಪ್ಪ ಮೊಯಿಲಿಯವರು ಚೆನ್ನಾಗಿ ಹೇಳಿದ್ದಾರೆ. ನಾನೇನು ಹೇಳುವುದಿಲ್ಲ, ಏನೇನು ನಡೆಯಿತು ಎಂಬುದು ಗೊತ್ತಾಯಿತು. ಪೋಲೀಸರ ದಕ್ಷತೆಯ ಬಗ್ಗೆ ಘಟನೆಗಳು ನಡೆದಾಗ ಅವರು ಯಾವ ರೀತಿ ನಡೆದುಕೊಳ್ಳುತ್ತಾರೆಂಬ ಬಗ್ಗೆ ಒಂದು ಮಾತು ಹೇಳುತ್ತೇನೆ. ಕೇಸುಗಳನ್ನು ದಾಖಲು ಮಾಡಿಕೊಂಡ ಮೇಲೆ ಎಫ್.ಐ.ಆರ್. ಇಶ್ಯೂ ಮಾಡುವುದಿಲ್ಲ. ಬೆಂಗಳೂರು ನಗರದಲ್ಲಿ ಹಾಡುಹಗಲಿನಲ್ಲೇ (೨ ಗಂಟೆ ಸಮಯದಲ್ಲಿ) ಏನೊಂದು ಅತ್ಯಾಚಾರ ನಡೆಯಿತು ಅದರ ಬಗ್ಗೆ ಪೋಲೀಸ್‌ನವರು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಮುಖ್ಯಮಂತ್ರಿಗಳು ಇದನ್ನು ತಿಳಿದುಕೊಳ್ಳಬೇಕು ನಡೆದಂಥ ಘಟನೆಯ ಬಗ್ಗೆ ಎನ್‌ಕ್ವಯಿರಿ ಮಾಡಬೇಕು. ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತಿದ್ದಾಗ ಪೋಲೀಸ್‌ನವರು ಬಿಡಿಸಿದ್ದರು. ಅಪರಾಧಿಗಳನ್ನು ಹಿಡಿದುಕೊಂಡು ಅತ್ಯಾಚಾರಕ್ಕೆ ಒಳಗಾಗಿದ್ದಂತಹ ಹೆಣ್ಣುಮಗಳನ್ನು ಆರೋಗ್ಯ ಕೇಂದ್ರಕ್ಕೆ ಕಳುಹಿಸಿ ಪರೀಕ್ಷೆ ಮಾಡಿಸಿ ಕರೆದುಕೊಂಡು ಬಂದು, ಆವತ್ತು ರಾತ್ರಿ ೧೨ ಗಂಟೆವರೆಗೂ ಎಫ್.ಐ.ಆರ್. ಇಶ್ಯೂ ಆಗಿಲ್ಲ. ಮಾರನೆಯ ದಿವಸವೂ ಇಶ್ಯೂ ಮಾಡಲಿಲ್ಲ. ಏತಕ್ಕೆ ತಡಮಾಡಿದರು ? ಈ ಒಂದು ಪ್ರಕರಣ ಇಡೀ ರಾಜ್ಯದ ಪತ್ರಿಕೆಗಳಲ್ಲಿ ಪ್ರಕಟವಾದ ಮೇಲೆ ಆಕೆ ಇನ್ನು ಬದುಕಲು ಸಾಧ್ಯವಿಲ್ಲವೆಂದು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂದ ನಂತರ ಎಫ್.ಐ.ಆರ್. ೧೦–೧೧ ಗಂಟೆಗೆ ಇಶ್ಯೂ ಆಗಿ ಕೇಸ್ ಕೋರ್ಟಿಗೆ ಬಂದಿದೆ. ಈ ಎರಡೂ ಪ್ರಕರಣಗಳಲ್ಲಿ ಪೋಲೀಸ್‌ನವರ ಕರ್ತವ್ಯವೇನು ? ಬಳ್ಳಾರಿಯಲ್ಲಿ ಇವರೇ ಹೆಣ್ಣುಮಗಳ ಮೇಲೆ ಅತ್ಯಾಚಾರ ಮಾಡುತ್ತಾರೆ, ಇಲ್ಲಿ ಅತ್ಯಾಚಾರವಾದರೂ ಈ ರೀತಿ ತಟಸ್ಥರಾಗಲು ಕಾರಣವೇನು ? ಪೋಲೀಸ್‌ನವರು ಏನೇನು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಇಲ್ಲಿರತಕ್ಕ ಮನುಷ್ಯನಿಗೆ ಏನು ಗೊತ್ತಾಗುತ್ತದೆ, ಏನೂ ಗೊತ್ತಿಲ್ಲ. ವಾಸ್ತವಿಕವಾಗಿ ರಾಜ್ಯದಲ್ಲಿ ಅರಾಜಕತೆ ಇದೆ. ಪರಿಸ್ಥಿತಿ ಈ ಪ್ರಕಾರ ಉಂಟಾಗಿದೆ. ನನ್ನ ಜಿಲ್ಲೆಯಲ್ಲಿ ಏನಾಗಿದೆ ಅಂದರೆ ಡಾಕುಗಳ ಹತ್ತಿರ ಹೋಗಿ ಜನಗಳು ನ್ಯಾಯ ಪಡೆಯುತ್ತಿದ್ದಾರೆ. ಈ ವಿಚಾರ ಮಾನ್ಯಶ್ರೀ ಮಾಣಿಕ್ಯರಾವ್ ಪಾಟೀಲ್‌ರವರಿಗೂ ಕೂಡ ಗೊತ್ತಿದೆ. ಏನಾದರೂ ಕಳ್ಳತನವಾದರೆ ಪೋಲೀಸ್‌ನವರಿಗೆ ದೂರು ಕೊಡುವ ಹಾಗೆ ಇಲ್ಲ. ಏಕೆಂದರೆ ಪೋಲೀಸ್‌ನವರಿಗೆ ದೂರು ಕೊಟ್ಟರೆ ಕಳೆದುಹೋದ ವಸ್ತುವಿನಲ್ಲಿ ಕಾಲು ಭಾಗ ಕೂಡ ಸಿಗುವುದಿಲ್ಲ. ಅದೇ ಈ ಡಾಕುಗಳ ಹತ್ತಿರ ಹೋದರೆ ೪ ಆಣೆ ಭಾಗ ಕಳೆದು ಹೋದ ವಸ್ತುಗಳು ಸಿಗುತ್ತವೆ. ಈ ಪ್ರಕಾರ ನಡೆಯುತ್ತಿದೆ. ಉದಾಹರಣೆಗೆ ೨ ಸಾವಿರ ರೂಪಾಯಿ ಕಳೆದುಕೊಂಡರೆ ಡಾಕುಗಳ ಹತ್ತಿರ ಹೋದರೆ ೫೦೦ ರೂಪಾಯಿ ವಾಪಸ್ಸು ಸಿಗುತ್ತದೆ. ಪೋಲೀಸ್‌ನವರ ಹತ್ತಿರ ಹೋದರೆ ಅದೂ ಸಿಗುವುದಿಲ್ಲ. ಈ ಒಂದು ಪ್ರಕಾರ ಜನಗಳು ಬದುಕಬೇಕಾಗಿದೆ. ಕಳ್ಳತನವಾದರೆ ಡಾಕುಗಳಿಂದ ಸುದ್ದಿ ಬರುತ್ತದೆ ನಿಮಗೆ ಕಳೆದು ಹೋದ ವಸ್ತುವಿನಲ್ಲಿ ಕಾಲು ಭಾಗ ಬೇಕಾದರೆ ಪೋಲೀಸ್‌ನವರಿಗೆ ದೂರು ಕೊಡಬೇಡಿ ಎಂದು. ಇದು ಒಂದು ಪ್ರಕರಣದಲ್ಲಿ ಆಗಿಲ್ಲ, ಇಂತಹ ಪ್ರಕರಣಗಳು ನೂರಾರು ಆಗಿವೆ. ಜನರು ಬೇಸತ್ತು ಹೋಗಿದ್ದಾರೆ. ಪೋಲೀಸ್‌ನವರ ಹತ್ತಿರ ಹೋಗಲಿಕ್ಕೆ ಜನರು ಏತಕ್ಕೆ ಹಿಂದೆ ಬೀಳುತ್ತಾರೆ ಅಂದರೆ ಅವರು ಲಂಚ ತೆಗೆದುಕೊಳ್ಳುತ್ತಾರೆ, ನಿಮ್ಮಲ್ಲಿ ಬಿಗಿ ಇಲ್ಲದ ಕಾರಣ ಈ ರೀತಿ ಆಗುತ್ತಿದೆ. ಇದುವರೆಗೆ ಆಗಿರತಕ್ಕ ಮರ್ಡರ್ ಕೇಸುಗಳಲ್ಲಿ ಒಂದಾದರೂ ರುಜುವಾತು ಆಗಿದೆಯೋ ?

ಶ್ರೀ ಮೈಖೇಲ್ ಬಿ. ಫರ್ನಾಂಡೀಸ್.— ಈ ರೀತಿ ಆಗುವುದು ನಿಮ್ಮ ಕಡೆ.

(ಗೊಂದಲ)

ಶ್ರೀ ಎಸ್. ಭೀಮಣ್ಣ ಖಂಡ್ರೆ — ಮಾನ್ಯ ಅಧ್ಯಕ್ಷರೇ, ನನಗೆ ತಾವು ರಕ್ಷಣೆ ಕೊಡಬೇಕು. ಆಡಳಿತ ಪಕ್ಷದ ಸದಸ್ಯರು ಈ ರೀತಿ ಏತಕ್ಕೆ ಮಧ್ಯೆ ಮಧ್ಯೆ ಮಾತನಾಡುತ್ತಾರೆ. ನಿಮಗೆ ನಾಚಿಕೆಯಾಗ ಬೇಕು. ಏನು ಮಾತನಾಡುತ್ತಿದ್ದೀರಿ, ಎಲ್ಲರೂ ಒಟ್ಟಿಗೆ ಮಾತನಾಡಲಿಕ್ಕೆ ಇಲ್ಲಿ ಏತಕ್ಕೆ ಕುಳಿತಿದ್ದೀರಿ ? ಪೋಲೀಸ್‌ನವರು ಮಾನಭಂಗ ಮತ್ತು ಮರ್ಡರ್ ಕೇಸ್‌ಗಳಲ್ಲಿ ೯೦ ಭಾಗ ಫೇಲ್ ಆಗುತ್ತಿದ್ದಾರೆ. ಯಾರೂ ಸಾಕ್ಷಿಯನ್ನು ಸರಿಯಾಗಿ ಹೇಳುತ್ತಿಲ್ಲ. ಏತಕ್ಕೆ ಈ ರೀತಿಯಾಗುತ್ತಿದೆ ಎಂದು ಪ್ರಶ್ನೆ ಕೇಳು ತ್ತಿದ್ದೇನೆ ?

(ಗೊಂದಲ)

ಅಧ್ಯಕ್ಷರೇ, ನನಗೆ ನೀವು ರಕ್ಷಣೆ ಕೊಡಬೇಕು. ಬೆಂಗಳೂರು ನಗರದಲ್ಲಿ ಹಾಡುಹಗಲಿನಲ್ಲೇ ನಡೆದಂತಹ ಅತ್ಯಾಚಾರದ ವಿಷಯದಲ್ಲಿ ಆರೋಪಿಗಳನ್ನು ಏತಕ್ಕೆ ತಕ್ಷಣ ಬಂಧಿಸಲಿಲ್ಲ ? ಪೋಲೀಸ್‌ನವರು ಏತಕ್ಕೆ ರಕ್ಷಣೆ ಕೊಡಲಿಲ್ಲ ? ಸಾವಿರಾರು ಜನರು ನೋಡುತ್ತಿದ್ದರೂ ಯಾರೂ ಕೂಡ ಏತಕ್ಕೆ ಸಪೋರ್ಟ್‌ಗೆ ಬರಲಿಲ್ಲ ? ಈ ಮೂರು ಪ್ರಶ್ನೆಗಳು ಬಹಳ ಗಂಭೀರವಾದ ಪ್ರಶ್ನೆಗಳು, ಇದನ್ನು ವಿಚಾರ ಮಾಡಬೇಕು ಈ ಒಂದು ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಡುತ್ತಿದ್ದೇನೆ, ಪೋಲೀಸ್‌ನವರು ಹಾಕತಕ್ಕ ಕೇಸುಗಳಲ್ಲಿ ೯೦ ಭಾಗ ರುಜುವಾತು ಆಗುವುದಿಲ್ಲ, ಆಗ ಆರೋಪಿಗಳು ಯಾವ ಅಂಜಿಕೆಯೂ ಇಲ್ಲದೆ ತಮ್ಮ ಕೆಲಸವನ್ನು ಮುಂದುವರಿಸುತ್ತಾರೆ. ಏನು ಮಾಡಿದರೂ ವಾಪಸ್ಸು ಬರುತ್ತೇವೆ ಎನ್ನುವ ಧೈರ್ಯ ಬರುತ್ತದೆ. ಜನಗಳು ಸಹ ಆರೋಪಿಗಳ ಮೇಲೆ ಸಾಕ್ಷಿ ಹೇಳಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಇದುವರೆಗೆ ಯಾವುದೇ ಕೇಸುಗಳಲ್ಲಿ ರುಜುವಾತು ಆಗಿಲ್ಲ. ಬಳ್ಳಾರಿಯಲ್ಲಿ ನಡೆದಂತಹ ಘಟನೆಯ ಬಗ್ಗೆ ಮಾನ್ಯ ವೀರಪ್ಪಮೊಯಿಲಿಯವರು ಹೇಳಿದರು, ಆರೇಳು ಜನ ಪೋಲೀಸ್‌ನವರು ಅತ್ಯಾಚಾರ ಮಾಡುವಾಗ ಯಾರೂ ಕೂಡ ಹೋಗಿ ರಕ್ಷಣೆ ಕೊಡಲಿಲ್ಲ. ರಕ್ಷಣೆ ಕೊಡತಕ್ಕವರೇ ಈ ರೀತಿ ಮಾಡುವಾಗ ಇನ್ನಾರು ರಕ್ಷಣೆ ಕೊಡುತ್ತಾರೆ. ಸಾಕ್ಷಿ ಹೇಳಿದರೆ ಆರೋಪಿಗಳು ಬಂದು ದಾಳಿ ಮಾಡುತ್ತಾರೆ. ಯಾವುದೂ ಬೇಡವೆಂದು ಜನಗಳು ಸುಮ್ಮನಿರುತ್ತಾರೆ. ಮರ್ಡರ್ ಕೇಸ್‌ಗಳಲ್ಲಿ ಸಾಕ್ಷಿ ಹೇಳಿದರೆ, ಯಾರೂ ಉಳಿಯುವ ಹಾಗೆ ಇಲ್ಲ. ಅದಕ್ಕೆ ಸರ್ಕಾರ ಒಂದು ಕೆಲಸ ಮಾಡಬೇಕು. ಇಂತಹವುಗಳನ್ನೆಲ್ಲಾ ತಪ್ಪಿಸುವುದಕ್ಕೆ ದಕ್ಷ ಅಧಿಕಾರಿಗಳನ್ನು ನೇಮಿಸಬೇಕು. ಅಂತಹ ಅಧಿಕಾರಿಗಳು ಯಾರು ಅಂದರೆ, ಅವರನ್ನು ನಾನು ನೋಡಿಲ್ಲ, ಅವರ ಹೆಸರು ಕೇಳಿದ್ದೇನೆ. ಸಾಂಗ್ಲಿಯಾನ ಇಂತಹ ಅಧಿಕಾರಿಗಳನ್ನು ಹಾಕಬೇಕು. ಅವರು ಗುಲ್ಬರ್ಗದಲ್ಲಿದ್ದಾಗ ೧೫ ದಿವಸಗಳಲ್ಲೇ ಮಟ್ಕಾ ಬಂದ್ ಮಾಡಿದರು. ಅಲ್ಲಿಂದ ೨೫ ದಿವಸಗಳಲ್ಲೇ ಟ್ರಾನ್ಸ್‌ಫರ್ ಆದರು. ಅಂಥ ಅಧಿಕಾರಿಗಳನ್ನು ಬೇರೆ ಕಡೆ ವರ್ಗ ಮಾಡುತ್ತಿರುತ್ತಾರೆ. ಒಳ್ಳೆಯ ಅಧಿಕಾರಿಗಳಿಗೆ ಪ್ರೊಮೋಷನ್ ಕೊಡಬೇಕು. ಈ ವಿಚಾರದಲ್ಲಿ ತಪ್ಪಿತಸ್ಥರು ಯಾರೆಂಬುದನ್ನು ಕೂಲಂಕುಷವಾಗಿ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಕೊಲೆ ಮಾಡಿದ ಕೇಸಿನಲ್ಲಿ ಕೊಲೆ ಮಾಡಿದವನು ಸಾಬೀತಾದರೆ ಅಂಥ ವ್ಯಕ್ತಿಗೆ ಗಲ್ಲು ಶಿಕ್ಷೆ ಇದೆ. ಮಾನಭಂಗ ಅತ್ಯಾಚಾರದಂಥ ಕೇಸುಗಳಲ್ಲಿ ಕೂಡ ಭಾಗಿಯಾದವರಿಗೆ ಗಲ್ಲು ಶಿಕ್ಷೆ ವಿಧಿಸುವಂಥ ಕಾನೂನನ್ನು ತಿದ್ದುಪಡಿ ಮಾಡಿ ತರಬೇಕೆಂದು ಹೇಳುತ್ತೇನೆ. ಇಲ್ಲದೇ ಹೋದರೆ, ಇಸ್ಲಾಂ ರಾಷ್ಟ್ರಗಳಲ್ಲಿರುವಂತೆ ಮಾನಭಂಗ ಮಾಡುವಂಥ ಜನರನ್ನು ಮಾರುಕಟ್ಟೆಗಳ ಹತ್ತಿರ ನಿಲ್ಲಿಸಿ ಸಾವಿರಾರು ಜನ ಕಲ್ಲು ಹೊಡೆಯುವಂಥ ಕಾನೂನು ತಂದರೆ ಒಳ್ಳೆಯದು ಎನ್ನುವಂಥ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಂದೇವ್ (ಮಲ್ಲೇಶ್ವರ). — ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ೬೯ನೇ ವಿಧಿ ಪ್ರಕಾರ ಈ ವಿಚಾರ ಏನು ಬಂದಿದೆ. ಇದು ಅತ್ಯಂತ ದೊಡ್ಡ ದುರಂತ ದುರ್ಘಟನೆ. ಇದನ್ನು ಯಾರೂ ಮೆಚ್ಚ ಲಾರರು. ಮೆಚ್ಚುವಂಥ ವಿಚಾರವೂ ಅಲ್ಲ. ಹಾಡು ಹಗಲಲ್ಲೇ ಲಾಲ್‌ಬಾಗ್ ಕ್ಷೇತ್ರದಲ್ಲಿ ನಡೆದಿರುವಂಥ ವಿಚಾರವಾದುದರಿಂದ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಇಂಥ ಪ್ರಕರಣಗಳು ಹಿಂದೆ ಕೂಡ ನಡೆದಿವೆ. ನಾವಂತೂ ಇದುವರೆಗೆ ಆಡಳಿತ ಪಕ್ಷದಲ್ಲಿ ಕೂತುಕೊಂಡ ವರಲ್ಲ. ನಮ್ಮ ಸ್ನೇಹಿತರು ಇವತ್ತು ಈ ವಿಷಯದ ಬಗ್ಗೆ ಬಹಳ ಪಶ್ಚಾತ್ತಾಪವನ್ನು ಹಾಗೂ ವ್ಯಾಕುಲ ವನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ ಮುನಿಯಮ್ಮನ ಪ್ರಕರಣವನ್ನು ತಂದಾಗ ತಾವು ಏನು ಉತ್ತರ ಕೊಟ್ಟಿದ್ದೀರಿ ಎನ್ನುವುದು ಕಾರ್ಯಕಲಾಪದಲ್ಲಿ ಸೇರಿದೆ. ಅದೇ ರೀತಿ ಪದ್ಮಕ್ಕನ ಪ್ರಕರಣ ಮಂತ್ರಿಗಳ

ಮನೆಯಲ್ಲಿಯೇ ನಡೆದಿರತಕ್ಕಂಥ ಒಂದು ಮಾನಭಂಗದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ತಾವು ಏನು ಉತ್ತರ ಕೊಟ್ಟಿದ್ದೀರಿ ಎನ್ನುವುದು ಕಾರ್ಯಕಲಾಪದಲ್ಲಿ ಸೇರಿದೆ. ಬಲಾತ್ಕಾರವಾಗಿ ಮಾನಭಂಗ ಮಾಡುವುದನ್ನು ಯಾರು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.— ಹಳೇ ಕಡತ ಬಿಚ್ಚುವುದು ಬೇಡ. ಅವರು ಮಾಡಿದ್ದನ್ನು ತಾವು ಅನುಸರಿಸುವುದು ಬೇಡ.

ಶ್ರೀ ಪಿ. ರಾಂದೇವ್.— ಮಾನ್ಯ ನಾರಾಯಣಕುಮಾರ್ ಅವರು ಹಳೇ ಪ್ರಕರಣವನ್ನು ಜಸ್ಟಿಫೈ ಮಾಡುವುದು ದುರದೃಷ್ಟಕರ. ಹಳೇ ಪ್ರಕರಣಗಳನ್ನು ಕೂಡ ಕೇಳಬೇಕಾಗುತ್ತದೆ. ಯಾವುದೇ ದೇಶದಲ್ಲಾಗಲೀ ಮಹಿಳೆಯರ ಮೇಲೆ ಅದರಲ್ಲಿಯೂ ದುರ್ಬಲವರ್ಗದ ಮಹಿಳೆಯರ ಮೇಲೆ ಅತ್ಯಾಚಾರ ನಡೆಯದಂತೆ ನೋಡಿಕೊಳ್ಳುವುದು ಯಾವುದೇ ನಾಗರೀಕ ಸರ್ಕಾರದ ಕರ್ತವ್ಯ. ಇಲ್ಲಿ ಮೊನ್ನೆ ನಡೆದಂಥ ಪ್ರಕರಣವನ್ನು ಡೆಲ್ಲಿ ನಗರದಲ್ಲಿ ನಡೆದಂಥ ಚೋಪ್ರಾ ಮಕ್ಕಳ ಪ್ರಕರಣಕ್ಕೆ ಸ್ವಲ್ಪ ಮಟ್ಟಿಗೆ ಹೋಲಿಸಬಹುದು. ಅಲ್ಲಿ ಸ್ಥಳದಲ್ಲಿ ಮಾನಭಂಗ ಮಾಡಿ ಕೊಲೆ ಮಾಡಿದ್ದರು. ಇಲ್ಲಿ ಸಮಯಕ್ಕೆ ಸರಿಯಾಗಿ ಪೋಲೀಸಿನವರು ಹೋಗಿ ಕೊಲೆಯಾಗುವುದನ್ನು ತಪ್ಪಿಸಿದ್ದಾರೆ. ಈ ವಿಷಯದಲ್ಲಿ ಪೋಲೀಸಿನವರ ಕರ್ತವ್ಯವನ್ನು ಮೆಚ್ಚಬೇಕಾಗುತ್ತದೆ. ಮಾನ್ಯ ಸ್ನೇಹಿತರು ಪೋಲೀಸಿನವರು ಮಾಡಿದಂಥ ಕೆಲಸಕ್ಕೆ ಶಹಬಾಷ್‌ಗಿರಿ ಕೊಡುತ್ತಾರೆಂದು ನಾನು ಭಾವಿಸಿದ್ದೆ.

ಶ್ರೀ ಭೀಮಣ್ಣ ಖಂಡ್ರೆ.— ಎಫ್. ಐ. ಆರ್. ಮಾರೆಂದಿವಸ ಏತಕ್ಕೆ ಬಂತು ಎನ್ನುವುದನ್ನು ಹೇಳುತ್ತೀರಾ ?

ಒಬ್ಬ ಮಾನ್ಯ ಸದಸ್ಯರು.— ತಾವು ಇದುವರೆಗೂ ಮಾತನಾಡಿದ್ದನ್ನು ನಾವು ಕೇಳಿದ್ದೇವೆ. ಕೂತುಕೊಳ್ಳಿ.

ಶ್ರೀ ಜೆ. ಡಿ. ಸೋಮಪ್ಪ.— ಅವರು ಏತಕ್ಕೆ ಹೀಗೆ ಮಾತನಾಡುತ್ತಾರೋ ನಮಗೆ ಗೊತ್ತಿಲ್ಲ.

ಶ್ರೀ ಪಿ. ರಾಂದೇವ್.— ಹಿಂದೆ ನಡೆದಂಥ ಇದೇ ರೀತಿಯ ದುರ್ಘಟನೆಗಳ ಬಗ್ಗೆ ತಾವು ಏನು ಉತ್ತರ ಕೊಟ್ಟಿದ್ದೀರಿ ಎಂಬುದನ್ನು ತರಿಸಿ ನೋಡಿ. ಹಲವಾರು ವರ್ಷಗಳ ಕಾಲ ತಾವು ರಾಜ್ಯ ವಾಳಿದ್ದೀರಿ, ಮುನಿಯಮ್ಮನ ಪ್ರಕರಣ, ಶೇಷಾದ್ರಿಪುರಂ ಪೋಲೀಸ್ ಠಾಣೆಯಲ್ಲಿ ನಡೆಯಿತು, ಇದನ್ನು ಹೇಳಿದರೆ ನಿಮಗೆ ಮೆಣಸಿನಕಾಯಿ ಇಟ್ಟಂಗಾಗುತ್ತೇನು ? ಸುಮಿತ್ರಾ ದೇಸಾಯಿ ಪ್ರಕರಣದಲ್ಲಿ ಏನು ಮಾಡಿದ್ದೀರಿ ? ಮಂತ್ರಿಗಳ ಮನೆಯಲ್ಲಿ ನಡೆದಂಥ ಪ್ರಕರಣಗಳ ಬಗ್ಗೆ ತಾವು ಯಾವ ರೀತಿ ಉತ್ತರ ಕೊಟ್ಟಿದ್ದೀರಿ ಎಂಬುದು ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಿಂದಿನವರು ಮಾಡಿದ್ದಾರೆಂದು ತಾವು ಅದನ್ನೇ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.— ತಾವು ಮಾಡಿದ ತಪ್ಪನ್ನು ಸಮರ್ಥನೆ ಮಾಡುತ್ತೀರಾ ? ನೀವು ಹೇಳುವಾಗ ಕೂತುಕೊಂಡು ಕೇಳಿದ್ದೇವೆ, ತಾವು ಕೇಳಿ.

ಶ್ರೀ ಕೆ. ಹೆಚ್. ರಂಗನಾಥ್.— ಮುನಿಯಮ್ಮನ ಪ್ರಕರಣ, ಮಾನ್ಯ ರಾಮರಾಯರು ಗೃಹ ಮಂತ್ರಿಗಳಾಗಿದ್ದಾಗ ನಡೆಯಿತು. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಮಂತ್ರಿಗಳಾಗಿದ್ದರು.

ಶ್ರೀ ಎಂ. ಎಸ್. ಕೃಷ್ಣನ್.— ಪಾಯಿಂಟ್ ಆಫ್ ಆರ್ಡರ್ ಸ್ವಾಮಿ.

೨-೩೦ ಪಿ. ಎಂ.

ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ. ನಿಮ್ಮಿಂದ ಪಾಠ ಕಲಿತು ದೇಶವೆಲ್ಲಾ ಹಾಳಾಗಿದೆ. ಈ ವಿಷಯ ನಮ್ಮ ಹತ್ತಿರ ಮಾತನಾಡಬೇಡಿ. ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೇ ಸ್ವಾಮಿ. ಮಾನ್ಯ ಸದಸ್ಯರಾದ ಶ್ರೀ ಮಾಣಿಕ್‌ರಾವ್ ಪಾಟೀಲರು ಹಿಂದಿನದೆಲ್ಲಾ ಏಕೆ ಹೇಳಬೇಕು ಎಂದು ಒಂದು ಮಾತನ್ನು ಹೇಳಿದರು. ಇದು ಗಂಭೀರವಾದಂತಹ ವಿಷಯ. ಹಿಂದೆ ಆಗಿದ್ದು ಪೋಲೀಸರಿಂದ ಮಾನಭಂಗ,

ಇದನ್ನು ಹಿಂದಿನದೆಂದು ಹೇಳಿದರೆ ತಪ್ಪೇನು ? ಹಾಗೆ ಹೇಳಿದರೆ ಅದ್ಯಾಕೆ ಅವರನ್ನು ಚುಚ್ಚಬೇಕು ? ಹಿಂದೆ ಮಾಡಿದ್ದನ್ನು ಮರೆತುಬಿಡಬೇಕು, ಅದನ್ನು ಬೂದಿ ಮುಚ್ಚಿಬಿಡಲಾಗಿದೆಯೆಂದು ಬರೆದು ಕೊಟ್ಟಿದ್ದಾರೇನು ?

ಶ್ರೀ ಪಿ. ರಾಮದೇವ್.—ಹಿಂದೆ ಅವರ ಸರ್ಕಾರ ಇದ್ದಾಗ ವೈಯ್ಯಾಲಿ ಕಾವಲ್‌ನಲ್ಲಿ ಮಿಲಿಟರಿಯವರು ದಂಪತಿಗಳ ಮೇಲೆ ಅತ್ಯಾಚಾರ ನಡೆಸಿದಾಗ, ಪೋಲೀಸಿನವರ ತಪ್ಪು ಇದ್ದರೂ ಕೂಡ ಅಂದಿನ ಮುಖ್ಯಮಂತ್ರಿಗಳು ಯಾವ ರೀತಿ ಅವರ ಪರವಾಗಿ ಡಿಫೆಂಡ್ ಮಾಡಿದ್ದರು ಎಂಬುದನ್ನು ಕಡತಗಳನ್ನು ತಿರುವಿಹಾಕಿದರೆ ಗೊತ್ತಾಗುತ್ತದೆ

HON. MEMBER.—Shame on your part. ಅಂತಹ ಮಂತ್ರಿಗಳ ಸಹಕಾರ ಪಡೆದು ಸರ್ಕಾರ ರಚನೆ ಮಾಡಿದ್ದೀರಿ.

(ಗೊಂದಲ)

ಶ್ರೀ ಪಿ. ರಾಮದೇವ್.—ಎಷ್ಟು ಮಾನಭಂಗದ ಕೇಸುಗಳಲ್ಲಿ ಕನ್ವಿಕ್ಷನ್ ಮಾಡಿದ್ದೀರಿ, ಎಷ್ಟು ಕೇಸ್‌ಗಳಲ್ಲಿ ಎವಿಕ್ಟ್ ಮಾಡಿದ್ದೀರಿ ಎಂಬುದನ್ನು ಹೇಳಿ.

ಚೇರಮನ್.—ಅದಕ್ಕೆಲ್ಲಾ ಮುಖ್ಯಮಂತ್ರಿಯವರು ಉತ್ತರ ಹೇಳುತ್ತಾರೆ.

ಶ್ರೀ ಪಿ. ರಾಮದೇವ್.—ಎರಡು ತಿಂಗಳ ಅವಧಿಯಲ್ಲಿ ಏನೇನು ಆಗಿದೆ. ಬಳ್ಳಾರಿ ಘಟನೆ ಬಗ್ಗೆ ಹೇಳಿದರು, ಮಡಕೇರಿ, ಬೆಂಗಳೂರು ಘಟನೆ ಬಗ್ಗೆ ಹೇಳಿದರು. ಈ ಎಲ್ಲಾ ಘಟನೆಗಳು ಎರಡು ತಿಂಗಳಲ್ಲಿ ಆಗಿವೆ. ಇದರ ಹಿಂದೆ ಒಂದು ಕೈವಾಡ ಇದೆಯೆಂದು ನಾನು ಹೇಳುತ್ತೇನೆ. ಇಂತಹ ಘಟನೆಗಳನ್ನು ನಡೆಸಿ ಚಿತಾವಣೆ ಮಾಡಿರುವುದು ಕಂಡುಬರುತ್ತದೆ. ಯಾವ ಯಾವ ರಾಜಕೀಯ ಪಕ್ಷಗಳು ಇದರಲ್ಲಿ ಸೇರಿಕೊಂಡಿವೆ. ಮಾನಭಂಗ ಮಾಡತಕ್ಕಂಥ ವ್ಯಕ್ತಿಗಳು ಯಾವ ರಾಜಕೀಯ ಪಕ್ಷದಲ್ಲಿದ್ದಾರೆ ಎಂಬುದರ ಬಗ್ಗೆ ಏಕೆ ಹೇಳುವುದಿಲ್ಲ ?

(ಗೊಂದಲ)

ಎರಡು ತಿಂಗಳಲ್ಲಿ ಲಾ ಆಂಡ್ ಆರ್ಡರ್ ಪ್ರಾಬ್ಲಮ್‌ಗಳನ್ನು ಕ್ರಿಯೇಟ್ ಮಾಡಿದವರು ಯಾರು ? ಬಸ್ಸಿಗೆ ಬೆಂಕಿ ಇಟ್ಟವರು ಯಾರು ? ಬಳ್ಳಾರಿಯಲ್ಲಿ ೪೮ ಗಂಟೆಗಳ ನಂತರ ಸಾರ್ವಜನಿಕರ ಆಸ್ತಿಪಾಸ್ತಿಗೆ ಹಾನಿಯಾಗುವ ಗಲಬೆಗೆ ಪ್ರಚೋದನೆ ಮಾಡಿದವರು ಯಾರು ? ಮಡಿಕೇರಿಯಲ್ಲಿ ಪ್ರಚೋದನೆ ಮಾಡಿದವರು ಯಾರು ? ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಮೂವತ್ತು ವರ್ಷಗಳ ಕಾಲ ಅಧಿಕಾರದಲ್ಲಿದ್ದಂತಹ ಸರ್ಕಾರ ಬದಲಾವಣೆಯಾಗಿ ಕೇವಲ ಎರಡು ತಿಂಗಳಾಗಿದೆ. ವಿರೋಧಪಕ್ಷದವರು ಸ್ವಲ್ಪ ಸೌಜನ್ಯದಿಂದ ವರ್ತಿಸಬೇಕು. ಇಲ್ಲದೇ ಹೋದರೆ ಅದು ಬಹಳ ಶೋಚನೀಯವಾಗುತ್ತದೆ. ಇವರದು ಮೊಸಳೆ ಕಣ್ಣೀರು. ನಿಜವಾದ ಕಣ್ಣೀರಾಗಿದ್ದರೆ ಅದು ಹಿಂದೆ ಸುರಿಯಬೇಕಾಗಿತ್ತು. ಇದರ ಹಿಂದೆ ಪ್ರಚೋದನೆ ಇದೆ. ಆ ಶಕ್ತಿ ಯಾವುದು, ವ್ಯಕ್ತಿಗಳು ಯಾರು ಎಂಬುದನ್ನು ಬಯಲು ಮಾಡಬೇಕಾಗಿದೆ. ಇದು ಪೂರ್ವಯೋಜಿತವಾಗಿ ನಡೆಯುತ್ತಿದೆ ಮತ್ತು ಇದಕ್ಕೆ ಕೋಟ್ಯಾಂತರ ರೂಪಾಯಿ ಹಣ ಬರುತ್ತಿದೆ. ಹೇಗಾದರೂ ಮಾಡಿ ಈಗಿನ ಸರ್ಕಾರಕ್ಕೆ ಕಳಂಕ ತರಬೇಕು, ಅದಕ್ಕೆ ಮಸಿ ಬಳಿಯಬೇಕು ಎಂದು ಕೆಲವರು ಪ್ರಯತ್ನಿಸುತ್ತಿದ್ದಾರೆ.

(ಗೊಂದಲ)

ಈ ಸರ್ಕಾರವನ್ನು ಉರುಳಿಸುವುದಕ್ಕೆ, ಸರ್ಕಾರಕ್ಕೆ ಮಸಿ ಬಳಿಯುವುದಕ್ಕೆ ಏನೇನು ಮಾಡಬೇಕೋ ಅದು ಇವತ್ತಿನ ದಿವಸ ನಡೆಯುತ್ತಿದೆ. ಇನ್ನು ಪೋಲೀಸರ ನಿಷ್ಕ್ರಿಯತೆ ಬಗ್ಗೆ ಹೇಳಿದರು. ಇದು ಮೂವತ್ತು ವರ್ಷಗಳ ಹಿಂದೆ ಅವರು ಮಾಡಿಕೊಂಡು ಬಂದಿದ್ದು. ಪೋಲೀಸ್ ಇಲಾಖೆಯಲ್ಲಿ ಎಂ.ಎಲ್.ಎ., ಎಂ.ಎಲ್.ಸಿ. ಮಿನಿಸ್ಟರುಗಳ ಮಕ್ಕಳು ಇದ್ದಾರೆ. ನನ್ನ ಮಕ್ಕಳು ಯಾರೂ ಇಲ್ಲ. ಈ ಸದನದಲ್ಲಿ ಹಿಂದೆ ಚರ್ಚೆಯಾಗಿರುವಂತೆ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಐವತ್ತು ಸಾವಿರ ರೂಪಾಯಿ ಲಂಚ ಕೊಡಬೇಕಾಗಿದೆ. ಲಂಚದ, ಭ್ರಷ್ಟಾಚಾರದ ಆಧಾರದ ಮೇಲೆ ಇವರುಗಳ ನೇಮಕಾತಿ ನಡೆದಿದೆ. ಪೋಲೀಸಿನವರು ಈ ರೀತಿ ಆಗುವುದಕ್ಕೆ ಇವರುಗಳೇ ಕಾರಣ. ಪೋಲೀಸರ

ಬಗ್ಗೆ ಅನೇಕ ಸಲ ಈ ಸದನದಲ್ಲಿ ಮಾತನಾಡಿದ್ದೇವೆ. ಕರ್ತವ್ಯನಿಷ್ಠರಾಗಿರತಕ್ಕಂಥವರಿಗೆ, ನಿಷ್ಠೆಯಿಂದ ಕೆಲಸ ಮಾಡತಕ್ಕವರಿಗೆ, ಕಾನೂನಿಗೆ ಗೌರವ ಕೊಡತಕ್ಕವರಿಗೆ ಹೆಚ್ಚು ಪುರಸ್ಕಾರ ಕೊಡಿ ಎಂದು ಹೇಳಿದ್ದೇವೆ. ಹಿಂದೆ ಅನೇಕ ಪ್ರಕರಣಗಳು ನಡೆದಿವೆ. ಪೋಲೀಸ್ ಹಿರಿಯ ಅಧಿಕಾರಿಗಳಾದ ಭಟ್ ಮತ್ತು ವರ್ಗೀಸ್ ಅವರ ಕೇಸ್‌ಗಳಲ್ಲಿ ಏನು ಮಾಡಿದರು ? ಪೋಲೀಸ್ ಫೋರ್ಸ್‌ನ್ನು ರಿವೈಸ್ ಮಾಡಿದರು. ಇದರಿಂದಾಗಿ ಪೋಲೀಸರು ನಿಷ್ಕ್ರಿಯರಾಗಿದ್ದಾರೆ ಅದರ ಮೇಲಿನ ಜವಾಬ್ದಾರಿ ಅವರದೇ ಆಗಿದೆ. ಕೇವಲ ಎರಡು ತಿಂಗಳು ಅವಧಿಯಲ್ಲಿ ಪೋಲೀಸ್ ಫೋರ್ಸ್‌ನ್ನು ಸರಿಪಡಿಸುವುದಕ್ಕೆ ಸಾಧ್ಯ ವಾಗುವುದಿಲ್ಲ. ಪೋಲೀಸಿನವರೂ ರಾಜಕೀಯ ಮಾಡಿದರು. ಡಿ.ಐ.ಜಿ. ಕಾರ್ತಿಕೇಯನ್ ರಾಜಕೀಯ ಉಪಯೋಗಿಸಿ ರಾಜಕಾರಣ ಮಾಡಿದರು. ಎರಡು ತಿಂಗಳಿನಲ್ಲಿ ಪೋಲೀಸರು ಭ್ರಷ್ಟಾಚಾರ ಮಾಡಿದ್ದಾರೆ ಎಂಬ ಬಗ್ಗೆ ಹೇಳಬೇಕೆಂದರೆ ಇದು ಪರಂಪರಾನುಗತವಾಗಿ ಬಂದಿರತಕ್ಕಂಥಾದ್ದಾಗಿದೆ. ಅದಕ್ಕೆ ಜವಾಬ್ದಾರಿಯನ್ನು ಅವರೇ ಹೊರಬೇಕು. ಇಂತಹ ಪರಿಸ್ಥಿತಿಯಲ್ಲಿ ಉತ್ತಮ ಆಡಳಿತಕ್ಕೆ ಅವಕಾಶ ಕೊಡಿ. ಚಿತಾವಣೆ ಮಾಡುವುದಕ್ಕೆ ಹೋಗಬೇಡಿ. ಗೂಬೆ ಕೂಡಿಸಲಿಕ್ಕೆ ಪ್ರಯತ್ನ ಮಾಡಬೇಡಿ. ಒಂದು ಕಡೆ ಐ.ಪಿ.ಎಸ್. ಇನ್ನೊಂದು ಕಡೆ ನಾನ್ ಐ.ಪಿ.ಎಸ್. ಅಧಿಕಾರಿಗಳು ಇದ್ದರೆ ಇವರ ಮಾತನ್ನು ಅವರು ಕೇಳುವ ಹಾಗೆ ಇಲ್ಲ, ಅವರ ಮಾತನ್ನು ಇವರು ಕೇಳುವ ಹಾಗೆ ಇಲ್ಲ. ಇವತ್ತಿನ ಪರಿಸ್ಥಿತಿ ಈ ರೀತಿಯಾಗಿದೆ. ಇಂತಹ ಕೆಲವು ಪ್ರಕರಣಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇದಕ್ಕೆಲ್ಲಾ ಪೋಲೀಸ ಅಧಿಕಾರಿಗಳ ಜವಾಬ್ದಾರಿ ಇದೆ ಇದನ್ನು ಸರಿ ಮಾಡತಕ್ಕಂತಹ ಹೊಣೆಗಾರಿಕೆ ತಮ್ಮ ಮೇಲೆ ಇದೆ. ಅದನ್ನು ಅವರು ಸರಿ ಮಾಡುತ್ತಾರೆ. ಅದಕ್ಕೆ ತಾವು ಸಹಕಾರ ಕೊಡಬೇಕು. ಇದರ ಬಗ್ಗೆ ಜಿಜ್ಞಾಸೆ ಮಾಡುವುದು ಬೇಡ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಖಂಡ್ರೆಯವರು ಒಂದು ಮಾತನ್ನು ಹೇಳಿದರು. ಇಂತಹ ಬಲಾತ್ಕಾರವಾದ ಮಾನಭಂಗಗಳು ಬೇಕಾದಷ್ಟು ಆಗಿವೆ. ಇದಕ್ಕೆ ನಮ್ಮ ಐ.ಪಿ.ಸಿ. ೩೭೬ ಕಾರಣ ಅಂತ ಕಾಣುತ್ತದೆ. ಅಂತಹವರಿಗೆ ಮರಣದಂಡನೆಯ ಶಿಕ್ಷೆಯನ್ನು ಕೊಡಬೇಕೆಂದು ಹೇಳಿದರು. ಎಷ್ಟು ಜನ ಈ ರೀತಿಯ ಮಾನಭಂಗ ಮಾಡಿದಂತಹ ಅಪರಾಧಿಗಳಿಗೆ ಶಿಕ್ಷೆಯಾಗಿದೆ ಎಂಬುದನ್ನು ತಿಳಿಸುತ್ತಾರೆಯೋ ಎಂಬುದಾಗಿ ಕೇಳುತ್ತಿದ್ದೇನೆ. ವರದಿ ತೆಗೆದುಕೊಂಡು ಓದಿ ನೋಡಿದರೆ ಒಂದೂ ಸಿಕ್ಕುವುದಿಲ್ಲ. ತಾವು ಈ ಮಾತನ್ನು ಹೇಳಿದಾಗ ನನಗೆ ಸಂತೋಷವಾಯಿತು. ಹಿಂದೆ ಈ ರೀತಿಯ ಸಂದರ್ಭ ಬಂದಾಗ ನಾನು ಆ ಕಡೆ ಕುಳಿತು ಈ ರೀತಿಯ ಸಲಹೆ ಮಾಡಿದಾಗ ತಾವು ನಗುತ್ತಿದ್ದಿರಿ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಆ ಕಡೆ ಇದ್ದಾಗಲೂ ಕೆಲವು ವಿಚಾರಗಳಲ್ಲಿ ನಿಮಗಿಂತಲೂ ಹೆಚ್ಚು ಟೀಕೆ ಮಾಡಿದ್ದೇನೆ.

ಶ್ರೀ ಪಿ. ರಾಮದೇವ್.—ಇಂಡಿಯನ್ ಪೀನಲ್ ಕೋಡ್ ಬಗ್ಗೆ ತಿದ್ದುಪಡಿ ಮಾಡತಕ್ಕಂತಹ ಕೆಲಸವನ್ನು ಈ ಸರ್ಕಾರ ಮಾಡಬೇಕು. ಯಾವುದೇ ಪ್ರಕರಣವಾಗಿರಲಿ, ಯಾರೇ ಮಾಡಿರಲಿ, ಅವರ ಮೇಲೆ ಗುರುತರವಾದ ಮರಣದಂಡನೆ ಶಿಕ್ಷೆಯನ್ನು ವಿಧಿಸಬೇಕು ; ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಆ ಹೆಣ್ಣುಮಗಳು ಬಹಳ ಬಡತನದಿಂದ ಬಂದಿರತಕ್ಕಂತಹವರು ಆ ಹೆಣ್ಣುಮಗಳಿಗೆ ಸಂಪೂರ್ಣ ರಕ್ಷಣೆಯನ್ನು ಕೊಡಬೇಕು ಏಕೆಂದರೆ ಆ ಹೆಣ್ಣುಮಗಳು ಮುಂದೆ ಮದುವೆಯಾಗುವುದು ಕಷ್ಟವಿರುವುದರಿಂದ ಆ ಹೆಣ್ಣುಮಗಳು ಜೀವನ ನಡೆಸಿಕೊಂಡು ಹೋಗುವುದಕ್ಕೆ ಸಹಾಯ ಮಾಡ ಬೇಕೆಂದು ಒತ್ತಾಯ ಮಾಡುತ್ತೇನೆ.

ಛೇರ್ಮನ್.—ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ,

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಛೇರ್ಮನ್.—ನೀವು ನೋಟೀಸಿನಲ್ಲಿ ಸಹಿ ಮಾಡಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಸಹಿ ಮಾಡಿ ಕಳುಹಿಸಿಕೊಟ್ಟಿದ್ದೇನೆ, ನೋಡಿ ಸ್ವಾಮಿ.

ಛೇರ್ಮನ್.—ನೀವು ಸಹಿ ಮಾಡಿಲ್ಲ. ನೀವು ಸಹಿ ಮಾಡಿ ಕಳುಹಿಸಿರತಕ್ಕಂತಹ ನೋಟೀಸ್ ಇಲ್ಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದ ಮೇಲೆ ವಿವರಗಳನ್ನು ಕೇಳಲೂ ಬಹುದು. ಅಥವಾ ಕೊಡಲೂಬಹುದು.

ಶ್ರೀ ಜಿ. ನಾರಾಯಣಕುಮಾರ್.—ನಾನು ಸಹಿ ಮಾಡಿ ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಛೇರ್ಮನ್.—ನಿಯಮಗಳನುಸಾರ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ನಿಮ್ಮ ಹಿಂದಿನ ಅಧ್ಯಕ್ಷರು ನಾನು ಕೊಟ್ಟಂತಹ ನೋಟೀಸನ್ನು ಜೇಬಿಗೆ ಹಾಕಿಕೊಂಡು ಹೋದರೆ ನಾವು ಏನು ಮಾಡೋಣ ? ನ್ಯಾಯಬದ್ಧವಾದ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ೫ ನಿಮಿಷ ಹೆಚ್ಚು ಆದರೆ ಆಗುತ್ತದೆ.

ಛೇರ್ಮನ್.—ಸದನದಲ್ಲಿ ನಿಯಮಗಳನುಸಾರ ಕೆಲಸ ಮಾಡಬೇಕಾಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ನಾರಾಯಣಕುಮಾರ್ ಕೂಗಾಡುತ್ತಾನೆಂದು ನಾನು ಕೊಟ್ಟಂತಹ ನೋಟೀಸ್‌ನ್ನು ಹಿಂದಿನ ಅಧ್ಯಕ್ಷರು ಜೇಬಿಗೆ ಇಟ್ಟುಕೊಂಡು ಹೋದರೆ ಹೇಗೆ ?

ಛೇರ್ಮನ್.—ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ನಿಯಮಾನುಸಾರವಾಗಿ ಬರೆದು ಕಳುಹಿಸಿಕೊಟ್ಟರೂ ಮರೆತು ಬಿಟ್ಟರೆ ಹೇಗೆ ? ಒಳ್ಳೇ ಗ್ರಹಚಾರವಾಯಿತಲ್ಲ !

† ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಇವತ್ತು ಸದನದ ಮುಂದೆ ಬಂದಿರತಕ್ಕಂತಹ ವಿಚಾರದ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇದು ಮನುಷ್ಯನ ಭಾವನೆಗಳನ್ನು ಗ್ರಹಿಸತಕ್ಕಂತಹ ವಿಚಾರ. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಮಹಿಳೆಯ ಮಾನಭಂಗ ಯಾವುದೇ ಕಾಲದಲ್ಲಾಗಲೀ, ಯಾವ ದೇಶದಲ್ಲೇ ಆಗಲೀ, ಯಾರು ಅಧಿಕಾರದಲ್ಲಿದ್ದಾಗಲೀ ಆಗಲಿ ಅದು ಖಂಡನೀಯವಾದುದು. ಅದನ್ನು ಯಾರೂ ಪುರಸ್ಕರಿಸುವುದಕ್ಕೆ ಸಾಧ್ಯವಿಲ್ಲ. ಮತ್ತು ಇಂತಹ ಘಟನೆ ಯಾದಾಗ ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಪ್ರಾಮಾಣಿಕವಾಗಿ ಹೇಳಿದ್ದಾರೆಂದು ನನ್ನ ನಂಬಿಕೆ. ಇದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದರಲ್ಲಿ ರಾಜಕೀಯ ತರಕೂಡದು ಅದೇ ರೀತಿ ಉಳಿದೆಲ್ಲ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ಮತ್ತು ತಮ್ಮ ದುಃಖವನ್ನು ಸಹಾನುಭೂತಿಯನ್ನು ವ್ಯಕ್ತ ಮಾಡಿದರು. ಅವರು ಯಾವ ಭಾವನೆಗಳನ್ನು ವ್ಯಕ್ತ ಮಾಡಿದರೋ ಆ ಭಾವನೆಗಳ ಜೊತೆಗೆ ನಮ್ಮ ಈ ಕಡೆ ಕುಳಿತಿರತಕ್ಕಂತಹ ಎಲ್ಲ ಸದಸ್ಯರ ಭಾವನೆಗಳು ಸೇರುತ್ತವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಆದರೆ ಅದರ ಸತ್ಯ ಏನು ? ಆ ಸತ್ಯವನ್ನು ಇನ್ನೂ ಹೊರಗಡೆ ತೆಗೆಯಬೇಕು. ಘಟನೆಯ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬಂದಿದೆ. ನನ್ನ ಹತ್ತಿರ ಕೂಡ ಒಂದು ವರದಿ ಬಂದಿದೆ. ಆದರೆ ಆ ವರದಿಯನ್ನು ಸುಮ್ಮನೆ ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಬಂಗಾರಪ್ಪನವರು ಇಲ್ಲಿ ಇಲ್ಲ. ಅವರು ಅಂದಿನ ಮುಖ್ಯಮಂತ್ರಿಗಳ ಪರವಾಗಿ ಸರ್ಕಾರದ ಮಂತ್ರಿಯಾಗಿ ಕೋಲಾರದಲ್ಲಿ ನಡೆದಂತಹ ಅತ್ಯಂತ ಭೀಕರವಾದಂತಹ ಘಟನೆಯ ಬಗ್ಗೆ ಒಂದು ವರದಿಯನ್ನು ಓದಿಬಿಟ್ಟರು. ಆದರೆ ಆ ವರದಿಯಲ್ಲಿ ಕೂಡ ಪಶ್ಚಾತ್ತಾಪ ಅಥವಾ ದುಃಖದ ಒಂದು ಶಬ್ದವನ್ನು ಕೂಡ ಹೇಳಿಲ್ಲ. ಇವತ್ತು ಅವರಿಗೆ ಬಹಳ ದುಃಖ ಬರುತ್ತದೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ನಾನು ಇಲ್ಲಿ ನನ್ನ ಮುಂದಿರತಕ್ಕ ವರದಿಯನ್ನು ಓದುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಅದು ನನ್ನ ಮನಸ್ಸಿಗೆ ಖಾತರಿಯಾಗಿಲ್ಲ. ನನ್ನ ಮುಂದಿರತಕ್ಕಂತಹ ವರದಿಯಲ್ಲಿ ಸತ್ಯವಾದ ಚಿತ್ರ ಕಡಿಮೆ ಇದೆ. ಇನ್ನೂ ಸ್ವಲ್ಪ ತನಿಖೆ ಮಾಡಿ ಸತ್ಯವನ್ನು ಹೊರಗಡೆ ತರಬೇಕಾಗಿದೆ. ಅದರ ಬಗ್ಗೆ ಇನ್ನೂ ಸ್ವಲ್ಪಮಟ್ಟಿನ ಅನುಮಾನ ಇದೆ. ಆದ ಕಾರಣ ಆ ವರದಿಯನ್ನು ಓದುವುದಿಲ್ಲ. ಮಾನ್ಯ ಬಂಗಾರಪ್ಪನವರು ಒಂದು ವಿಚಾರವನ್ನು ಹೇಳಿದರು. ಇದು ಎಂಥ ಸರ್ಕಾರ ? ಕೆಂಗಲ್ ಹನುಮಂತಯ್ಯ ರಸ್ತೆ ಅತ್ಯಂತ ಜನನಿಬಿಡವಾದಂತಹ ರಸ್ತೆ. ಬೆಂಗಳೂರು ನಗರದಲ್ಲಿ ಒಂದು ದಾಖಲೆಯಾದ ರಸ್ತೆ. ಹೋಗುವುದಕ್ಕೆ ಒಂದು ದಾರಿ. ಬರುವುದಕ್ಕೆ ಮತ್ತೊಂದು ದಾರಿ. ಅಲ್ಲಿ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನೇಕ ಅಂಗಡಿಗಳು ಇವೆ. ಕೆ.ಎಸ್.ಆರ್.ಟಿ.ಸಿ.ಯ ಕೇಂದ್ರ ಕಛೇರಿ ಇದೆ, ಇದು ಮಧ್ಯಾಹ್ನ ಎರಡೂವರೆ ಗಂಟೆಯಲ್ಲಿ ಆದಂತಹ ಘಟನೆ. ಘಟನೆ ನಡೆದಾಗ ಎರಡೂವರೆ ಗಂಟೆಯಾಗಿರಬಹುದು. ಅಥವಾ ಮೂರು ಗಂಟೆಯಾಗಿರಬಹುದು ; ಹಾಡು ಹಗಲಲ್ಲೇ ನಡೆದಿದೆ. ಮತ್ತು ಸಮಯ ಯಾವುದು ಎಂದರೆ ಜನ ಓಡಾಡತಕ್ಕಂತಹ ಸಮಯ. ಇಂತಹ ಒಂದು ಪ್ರಸಂಗದಲ್ಲಿ ಮೂರು ಜನ ಯುವಕರು ಬರುತ್ತಾರೆ, ಒಂದು ಆಟೋ ರಿಕ್ಷಾದಲ್ಲಿ. ಎರಡು ಜನ ತರುಣಿಯರು ಹೋಗುತ್ತಾ ಇರತಕ್ಕಂತಹ ಸ್ಥಳದಲ್ಲಿ ಇಳಿಯುತ್ತಾರೆ. ಮಚ್ಚನ್ನು ತೆಗೆದು ತೋರಿಸಿ. ಹೆದರಿಸಿ ಇಬ್ಬರನ್ನು ಜೊತೆಗೆ ಸೇರಿಸಿಕೊಂಡು ಹೋಗಬೇಕೆಂದು ಯೋಚನೆ ಮಾಡಿದರೋ ಏನೋ ಅದು ಗೊತ್ತಿಲ್ಲ. ಆದರೆ ಹೆದರಿಸಿ ಒಬ್ಬ ಹುಡುಗಿಯನ್ನು ಹಾಡು ಹಗಲಲ್ಲೇ ಅವರು ತಂದಿದ್ದಂತಹ ಆಟೋ ರಿಕ್ಷಾದಲ್ಲೇ ಕೂರಿಸಿಕೊಂಡು ಲಾಲ್‌ಬಾಗಿಗೆ ಕರೆದುಕೊಂಡು ಹೋಗುತ್ತಾರೆ. ಇದೇ ವರದಿ ನಮಗೆ ಬಂದಿರುವುದು. ಇಲ್ಲಿಯವರೆಗೂ ಎಲ್ಲರೂ ಹೇಳಿದಂತಹ ಮಾತು ಇದೇ ತಾನೆ ? ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅನೇಕ ಸಂದರ್ಭದಲ್ಲಿ ಜನ ಯಾರಾದರೂ ದೂರದಿಂದ ನೋಡಿದರೂ ಕೂಡ ಅವಳ ಸಹಾಯಕ್ಕೆ ಯಾರೂ ಕೂಡ ಹೋಗಲಿಲ್ಲ. ಏಕೆಂದರೆ ನಾಳೆ ಸಾಕ್ಷಿ ಹೇಳಬೇಕು ; ಕೋರ್ಟಿಗೆ ಸಾವಿರಾರು ಸಲ ಹೋಗಬೇಕು ಎಂಬ ಪ್ರಶ್ನೆ ಬಂದಿದೆ. ಆದರೆ ಒಬ್ಬ ಮಹಿಳೆಯ ಮೇಲೆ ಬಲಾತ್ಕಾರವಾಗತಕ್ಕಂತಹ ಸನ್ನಿವೇಶ ಇದ್ದರೆ ಅಥವಾ ಅದಕ್ಕೆ ಅನುಮಾನಾಸ್ಪದವಾದ ಸನ್ನಿವೇಶ ಇದ್ದರೂ ಕೂಡ ನಮ್ಮ ಸಂಸ್ಕೃತಿ ಎಂತಹದು ಎಂದರೆ ಅವರು ಎಂತಹವರೇ ಇರಲಿ ಅವರನ್ನು ದಿಟ್ಟತನದಿಂದ ಎದುರಿಸುವ, ಅವರ ಮಾನ ರಕ್ಷಣೆಗೆ ಹೋಗುತ್ತಾರೆ. ಇದು ನಮ್ಮ ಸಂಸ್ಕೃತಿ. ಆದ್ದರಿಂದ ನನಗೆ ಬಂದಿರುವ ಒಂದು ಅನುಮಾನ ಏನೆಂದರೆ, ಇಂತಹ ಒಂದು ಘಟನೆ ಹಾಡು ಹಗಲು ಅದೂ ಜನನಿಬಿಡವಾದಂತಹ ರಸ್ತೆಯ ಮಧ್ಯದಲ್ಲಿ ಆಗತಕ್ಕಂತಹದ್ದನ್ನು ಕಂಡೂ ಕಾಣದಂತೆ ಇರಲು ಸಾಧ್ಯವೆ ?

ಮಾನ್ಯ ಬಂಗಾರಪ್ಪನವರು ತಮ್ಮ ಹೇಳಿಕೆಯಲ್ಲಿ ಹೇಳಿದರು. ಆ ತರುಣಿಯನ್ನು ಆಟೋರಿಕ್ಷಾದಲ್ಲಿ ಎಳೆದುಕೊಂಡು ಹೋದಾಗ ಚೀರಾಡಿದಳು, ಕೂಗಾಡಿದಳು ಎಂದು. ಇದರ ಬಗ್ಗೆ ನಾನು ಸತ್ಯವನ್ನು ಕೊಡುತ್ತೇನೆ. ತಮಗೆ ಹೇಳಬೇಕಾದರೆ ಎಫ್ ಐ.ಆರ್.ನಲ್ಲಿ ಆಕೆ ಪೋಲೀಸ್ ಮುಂದೆ ಏನು ಹೇಳಿಕೆ ಕೊಟ್ಟಿದ್ದರೋ ಅದನ್ನು ನಾನು ನೋಡಿದ್ದೇನೆ. ಅದರಲ್ಲಿ ಆ ತರುಣಿ ಚೀರಾಡಿದೆ, ಕೂಗಾಡಿದೆ ಅನ್ನುವ ಮಾತನ್ನು ಆವಾಗ ಏತಕ್ಕೆ ಹೇಳಲಿಲ್ಲ ? ಆದರೆ ಆಕೆಗೆ ತನ್ನ ಮೇಲೆ ಯಾವಾಗ ಬಲಾತ್ಕಾರವಾಯಿತೋ ಆ ಸಂದರ್ಭದಲ್ಲಿ ಚೀರಾಡಿದೆ ಎಂದು ಹೇಳಿದರೆ, ನಾನು ಕೇಳುತ್ತೇನೆ ಈ ಘಟನೆ ನಡೆದ ಹೊತ್ತಿನಲ್ಲಿ ನಾನು ಚೀರಾಡಿದೆ ಕೂಗಾಡಿದೆ ಎಂದು ಏತಕ್ಕೆ ಹೇಳಲಿಲ್ಲ ಎಂದು. ಶ್ರೀಮಾನ್ ಭೀಮಣ್ಣ ಖಂಡ್ರೆಯವರಿಗೆ ಹೇಳುತ್ತೇನೆ. ಈ ಒಂದು ಘಟನೆ ನಡೆದದ್ದು ೨ರಿಂದ ೩½ ಗಂಟೆ ಒಳಗೆ, ಇದು ಎಫ್.ಐ ಆರ್.ನಲ್ಲಿ ದಾಖಲೆಯಾಗಿರುವುದು ೪½ ಗಂಟೆಗೆ. ಮರು ದಿವಸ ದಾಖಲೆಯಾಗಲಿಲ್ಲ. ಒಂದು ವೇಳೆ ಏನಾದರೂ ಮರುದಿವಸ ಇದು ದಾಖಲೆಯಾಗಿದ್ದರೆ ಆವಾಗ ತಪ್ಪು ತಿಳುವಳಿಕೆ ಬರಬಹುದು. ಆದರೂ ಇದರಲ್ಲಿ ನಾವು ಸತ್ಯವನ್ನು ತೆಗಯಬೇಕು.

ಎರಡನೆಯ ವಿಚಾರ ಏನೆಂದರೆ ೩ ಜನ ಹುಡುಗರು ಮತ್ತು ಆ ತರುಣಿ ಕೂತುಕೊಂಡು ಆಟೋ ರಿಕ್ಷಾದಲ್ಲಿ ಹೋದರು ಎಂದರೆ ಇದನ್ನು ನಂಬುವುದಕ್ಕೆ ಸಾಧ್ಯವೇ ? ಒಂದು ಆಟೋದಲ್ಲಿ ೪ ಜನರು ಕೂತುಕೊಂಡು ಹೋಗುವುದಕ್ಕೆ ಆಗುವುದು ಸಾಧ್ಯವೇ ? ಸಾಧ್ಯವಾಗಬಹುದೋ ಏನೋ ನನಗೆ ಗೊತ್ತಿಲ್ಲ. ಒಂದೊಮ್ಮೆ ಹೋದರು ಎಂದು ಇಟ್ಟುಕೊಳ್ಳೋಣ. ಹಾಗೆ ಹೋದಾಗ ಇದು ಜನರ ಕಣ್ಣಿಗೆ ಬೀಳುವುದಿಲ್ಲವೇ ? ಅವಳೇನಾದರೂ ಕೂಗಿದ್ದರೆ ಇದು ಜನರ ಕಣ್ಣಿಗೆ ಬೀಳುತ್ತಿರಲಿಲ್ಲವೇ ? ಅವಳನ್ನು ಕರೆದುಕೊಂಡು ಹೋದದ್ದು ಆಟೋರಿಕ್ಷಾದಲ್ಲಿ ೧೦ ಮಾರಲ್ಲ ಸುಮಾರು ಎರಡು ಫರ್ಲಾಂಗ್ ದೂರ. ಇದರಲ್ಲಿ ನಾವು ಸತ್ಯವನ್ನು ಹುಡುಕಿ ತೆಗೆಯಬೇಕು. ಈ ಒಂದು ಸಂಶಯದ ಬಗ್ಗೆ ಮುಂದೆ ಏನು ಒಂದು ವರದಿ ಬರುತ್ತದೋ ಅದನ್ನು ನಾನು ಈಗಲೇ ಹೇಳುವುದಕ್ಕೆ ತಯಾರಿಲ್ಲ. ಈ ಬಗ್ಗೆ ವಿರೋಧಪಕ್ಷದ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಆದಕ್ಕಾಗಿ ಇದರಲ್ಲಿ ಸತ್ಯ ಏನು ಇದೆ ಅನ್ನುವುದನ್ನು ನಾವು ಹುಡುಕಿ ತೆಗೆಯಬೇಕು.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ,...

ಶ್ರೀ ರಾಮಕೃಷ್ಣ ಹೆಗಡೆ.— ನಾನು ಈಲ್ಡ್ ಆದರೆ ತಾನೆ ತಾವು ಮಾತನಾಡುವುದು.

ಶ್ರೀ ಎಸ್. ಬಂಗಾರಪ್ಪ.—ತಾವು ಈಲ್ಡ್ ಆಗುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈಗ ಈಲ್ಡ್ ಆಗುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆಮೇಲಾದರೂ ಅವಕಾಶ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಹೇಳಿಕೆ ಮುಗಿಸಿದ ಮೇಲೆ, ನಾನು ಕೂತುಕೊಂಡ ಮೇಲೆ ತಾವು ಮಾತನಾಡಬಹುದು.

ಶ್ರೀ ಕೆ.ಎಚ್. ರಂಗನಾಥ್.—ತಾವು ಈಲ್ಡ್ ಆಗದೇ ಇರುವುದರಿಂದಲೇನೇ ವಾಗ್ಯುದ್ಧ ಬಂದಿರುವುದು. ತಾವು ಹೊರಗಡೆ ಎಷ್ಟೋ ಸಾರಿ ಈಲ್ಡ್ ಆಗಿದ್ದೀರಲ್ಲಾ ?

ಶ್ರೀ ರಾಮಕೃಷ್ಣ ಹೆಗಡೆ.—ಈಸದನದ ಹೊರಗಡೆ ಈಲ್ಡ್ ಆಗುವುದಕ್ಕೂ, ಸದನದ ಒಳಗಡೆ ಈಲ್ಡ್ ಆಗುವುದಕ್ಕೂ ವ್ಯತ್ಯಾಸ ಇದೆ. ನನಗೆ ಬಂಗಾರಪ್ಪನವರು ಹೊಸಬರೇನೂ ಅಲ್ಲ. ಅವರ ಜೊತೆಯಲ್ಲಿ ಸುಮಾರು ಎರಡು ತಿಂಗಳ ಕಾಲ ಮೊದಲು ಚರ್ಚೆ ಮಾಡಿದಾಗ ಎಷ್ಟೋ ಸಮಯದಲ್ಲಿ ಪರಸ್ಪರ ಈಲ್ಡ್ ಆಗಿದ್ದೇವೆ. ಅನೇಕ ಮಹತ್ವದ ವಿಚಾರಗಳಲ್ಲಿ ನಾನು ಈಲ್ಡ್ ಆಗಿದ್ದೇನೆ. ಆ ವಿಷಯ ಅವರಿಗೂ ಗೊತ್ತಿದೆ. ಆದರೆ ಸದನದ ಒಳಗೆ ಈಲ್ಡ್ ಆಗುವುದು ಬೇರೆ ವಿಷಯ. ನಾನು ಈ ಬಗ್ಗೆ ಏನಾದರೂ ಒಂದು ಸ್ಟೇಟ್‌ಮೆಂಟ್ ಅನ್ನು ಓದಿದರೆ ಆವಾಗ ಅವರು ಪ್ರಶ್ನೆ ಕೇಳಿದರೆ ಅದು ಬೇರೆ ವಿಚಾರ. ಈಗ ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಪರಸ್ಪರ ಈಲ್ಡ್ ಆಗಿದ್ದೇವೆ ಅನ್ನುವ ಮಾತು ಹೇಳಿದರೆ ಅದು ಬೇರೆ ಅರ್ಥಕ್ಕೆ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಎಷ್ಟೋ ಸಮಯದಲ್ಲಿ ಪರಸ್ಪರ ಈಲ್ಡ್ ಆಗಿದ್ದೇವೆ ಅಂತ ಹೇಳಿದರಲ್ಲಾ, ಆ ವಿಷಯ ಸ್ವಲ್ಪ ಹೇಳಿಬಿಟ್ಟರೆ ನಮ್ಮ ತಿಳುವಳಿಕೆಗೂ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಸ್ವಲ್ಪ ಹೊತ್ತಿನಲ್ಲೇ ತಮಗೆ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ವಿವರಕ್ಕೆ ಹೋದರೆ ಒಳ್ಳೆಯದಲ್ಲ ಎಂದು ಅಷ್ಟು ಮಾತ್ರ ತಿಳಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆ ವಿವರಕ್ಕೆ ಹೋಗುವುದಿಲ್ಲ. ಆಮೇಲೆ ಆ ತರುಣಿಯನ್ನು ತಕ್ಷಣವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ಬಗ್ಗೆ ಮೆಡಿಕಲ್ ಎಕ್ಸಾಮಿನೇಷನ್ ರಿಪೋರ್ಟ್ ಇದೆ. ಅದರ ಹೊರತಾಗಿ ಇನ್ನೇನೂ ಇಲ್ಲ. ಇನ್ನು ರೇಡಿಯಾಲಜಿಕಲ್ ಎಕ್ಸಾಮಿನೇಷನ್ ಆಗಬೇಕು. ಅದು ಸಿದ್ಧವಾಗಿ ನಮ್ಮ ಹತ್ತಿರ ಇನ್ನೂ ಬಂದಿಲ್ಲ. ಆ ಬಗ್ಗೆ ತಜ್ಞರ ಅಭಿಪ್ರಾಯ ಡಾಕ್ಟರ್ ಅಭಿಪ್ರಾಯ ಆ ರಿಪೋರ್ಟ್ ಬರುವುದಕ್ಕೆ ಮೊದಲೇ ನಾನು ಹೇಳಲಾರೆ. ಆ ಬಗ್ಗೆ ರಿಪೋರ್ಟ್ ಬಂದಮೇಲೆ ಸ್ವಲ್ಪಮಟ್ಟಿಗೆ ಸತ್ಯ ಹೊರಗಡೆ ಬರಲಿಕ್ಕೆ ಅನುಕೂಲವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್. ಬಂಗಾರಪ್ಪನವರು ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಋಣಿಯಾಗಿದ್ದೇನೆ. ಆದರೆ ಒಂದು ಮಾತು ಮಾತ್ರ ಹೇಳುತ್ತೇನೆ. ಅದೇನೆಂದರೆ ಈ ಸರ್ಕಾರ ಈ ಒಂದು ಘಟನೆ ಬಗ್ಗೆ ತಲೆ ತಗ್ಗಿಸಬೇಕು ಎಂದು ಹೇಳಿದ್ದಾರೆ. ಇದಕ್ಕೆ ನಾನು ಹೇಳುವುದು ಇಷ್ಟೆ. ಇಂತಹ ಘಟನೆಗಳು ಪುನಃ ಪುನಃ ಆಗುತ್ತಾ ಇದ್ದರೆ ನಮ್ಮ ಸಮಾಜದಲ್ಲಿರ ತಕ್ಕಂಥಾ, ನಮ್ಮ ದೇಶದಲ್ಲಿರತಕ್ಕಂಥಾ ಎಲ್ಲರೂ ಕೂಡ ತಲೆ ತಗ್ಗಿಸಬೇಕು, ಬರೀ ಸರ್ಕಾರ ಅಲ್ಲ ಅನ್ನುವುದನ್ನು ತಿಳಿಯಬೇಕು. ಇದನ್ನು ಎಲ್ಲರೂ ಖಂಡಿಸಲೇಬೇಕು. ಏಕೆಂದರೆ ಒಬ್ಬ ಮಹಿಳೆಯ ಮೇಲೆ, ಒಬ್ಬ ಅಬಲೆಯ ಮೇಲೆ ಇಂತಹ ಒಂದು ಕೃತ್ಯವನ್ನು ಸಾಮಾನ್ಯವಾಗಿ ಮನುಷ್ಯ ಆದವನು ಮಾಡುವುದಿಲ್ಲ, ಬಹುಶಃ ಅವರು ಪಶುವಾಗಿರಬೇಕು, ಇಲ್ಲವೇ ಈತನು ಆ ಕ್ಷಣದಲ್ಲಾದರೂ ಪಶುವಾಗಿರಬೇಕು, ಸಾಮಾನ್ಯವಾಗಿ ಮಾನವೀಯತೆ ಇರತಕ್ಕಂಥವರು ಇಂಥಾ ಕೆಲಸವನ್ನು ಮಾಡುವುದಿಲ್ಲ. ಸರ್ಕಾರ ತಲೆ ತಗ್ಗಿಸಬೇಕು ಎನ್ನುವ ಒಂದು ನಿರ್ಣಯ ತಾವು ಏನು ಕೊಟ್ಟಿದ್ದೀರೋ ಅದರ ಬಗ್ಗೆ ನಾನು ಇಷ್ಟು ಮಾತ್ರ ಹೇಳಬಲ್ಲೆ. ಈಗ ಸುಮಾರು ಒಂದು ವರ್ಷದ ಹಿಂದಿನ ಮಾತು. ನಾನು ಡೆಲ್ಲಿಯಲ್ಲಿ ಇದ್ದಾಗ ಒಂದು ದಿನಪತ್ರಿಕೆಯಲ್ಲಿ ನಮ್ಮ ಕರ್ನಾಟಕದ ಬಗ್ಗೆ ಮುಖಪುಟದಲ್ಲಿ ಒಂದು ಸುದ್ದಿ ಬಂತು. ಅದರಲ್ಲಿ ಏನು ಇತ್ತು ಎಂದರೆ ಅಂದಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರ ಹೇಳಿಕೆ ಇತ್ತು. ಆ

ಮುಖ್ಯಮಂತ್ರಿಗಳ ಹೇಳಿಕೆ ಈ ರೀತಿ ಇತ್ತು. ''ನಮ್ಮ ಕರ್ನಾಟಕದಲ್ಲಿ ಪ್ರತಿ ೧೦ ಗಂಟೆಗೆ ಒಬ್ಬ ಮಹಿಳೆ ಮಾನಭಂಗವಾಗಿದೆ'' ಅಂತ ಇತ್ತು. ನಾನು ಅದನ್ನು ಓದಿದಾಗ ತಕ್ಷಣವೇ ನನಗೆ ಅರ್ಥವಾಗಲಿಲ್ಲ. ಅವರು ಈ ವಿಷಯವನ್ನು ಒಂದು ಅಭಿಮಾನದಿಂದ ಹೇಳಿದರೋ ಅಥವಾ ದುಃಖದಿಂದ ಹೇಳಿದರೋ ನನಗೆ ಗೊತ್ತಿಲ್ಲ, ಅಥವಾ ಆಗಬಾರದಂಥಾ ಕೆಲಸ ಏನಾದರೂ ಆಗಿತ್ತೋ ಏನೋ ನನಗೆ ಗೊತ್ತಿಲ್ಲ. ಆವಾಗ ನಾನು ರಾಜ್ಯ ಸಭೆಯ ಸದಸ್ಯನಾಗಿದ್ದುದರಿಂದ ಈ ಬಗ್ಗೆ ಒಂದು ಪ್ರಶ್ನೆಯನ್ನು ತಕ್ಷಣವೇ ಕಳುಹಿಸಿದೆ. ಏನು ಕಳುಹಿಸಿದೆ ಎಂದರೆ ಕರ್ನಾಟಕದಲ್ಲಿ ಎಷ್ಟು ಜನ ಮಹಿಳೆಯರ ಮೇಲೆ ಮಾನಭಂಗವಾಗಿದೆ ಎಂದು. ಈ ಸಭೆ ದಯವಿಟ್ಟು ಈ ವಿಷಯವನ್ನು ತಿಳಿದುಕೊಳ್ಳಬೇಕು. ೭ ವರ್ಷದಿಂದಲೂ ಈ ಒಂದು ಮಾನಭಂಗದ, ಅತ್ಯಾಚಾರದ ಲೆಕ್ಕಾಚಾರವನ್ನು ತೆಗೆದುಕೊಳ್ಳೋಣ. ೧೯೭೭ನೇ ಇಸವಿಯಲ್ಲಿ ಒಟ್ಟು ೨೮೬ ಆಗಿದೆ ಎಂದರೆ ಪ್ರತಿ ೩೧ ಗಂಟೆಗೊಂದು ಸಾರಿ ಒಬ್ಬ ಮಹಿಳೆಯ ಅತ್ಯಾಚಾರವಾಗಿದೆ. ೧೯೭೮ನೇ ಇಸವಿಯಲ್ಲಿ ೩೫೫ ಆಗಿದೆ ಅಂದರೆ ಪ್ರತಿ ೨೫ ಗಂಟೆಗೊಮ್ಮೆ ಒಬ್ಬ ಮಹಿಳೆಯ ಬಲಾತ್ಕಾರ ನಡೆದಿದೆ. ೧೯೭೯ನೇ ಇಸವಿಯಲ್ಲಿ ೫೨೨ ಆಗಿದೆ ಅಂದರೆ ಪ್ರತಿ ೧೭ ಗಂಟೆಗೊಮ್ಮೆ ಸಹೋದರಿಯ ಅಥವಾ ಮಾತೆಯ ಮೇಲೆ ಅತ್ಯಾಚಾರ ನಡೆದಿದೆ. ೧೯೮೦ನೇ ಇಸವಿಯಲ್ಲಿ ೬೧೪ ಆಗಿದೆ ಅಂದರೆ ಪ್ರತಿ ೧೪ ಗಂಟೆಗೆ ಒಮ್ಮೆ ಒಬ್ಬ ಮಹಿಳೆಯರ ಅತ್ಯಾಚಾರವಾಗಿದೆ. ೧೯೮೧ರಲ್ಲಿ ೫೭೨ ಆಗಿದೆ ಅಂದರೆ ಪ್ರತಿ ೧೫ ಗಂಟೆಗೆ ಒಮ್ಮೆ ಒಬ್ಬ ಮಹಿಳೆಯ ಅತ್ಯಾಚಾರವಾಗಿದೆ.

೩–೦೦ ಪಿ. ಎಂ.

೧೯೮೨ನೇ ಇಸವಿಯಲ್ಲಿ, ಜನವರಿ ತಿಂಗಳಲ್ಲಿ ೧೨ ಕೇಸು, ಫೆಬ್ರುವರಿಯಲ್ಲಿ ೭ ಕೇಸುಗಳು, ಮಾರ್ಚ್ ತಿಂಗಳಲ್ಲಿ ೧೧ ಕೇಸುಗಳು. ಏಪ್ರಿಲ್ ತಿಂಗಳಲ್ಲಿ ೧೩ ಕೇಸುಗಳು ಮೇ ತಿಂಗಳಲ್ಲಿ ೧೩ ಕೇಸುಗಳು. ಜೂನ್ ತಿಂಗಳಲ್ಲಿ ೧೨ ಕೇಸುಗಳು, ಜುಲೈ ತಿಂಗಳಲ್ಲಿ ೧೫ ಕೇಸುಗಳು, ಆಗಸ್ಟ್ ತಿಂಗಳಲ್ಲಿ ೧೧ ಕೇಸುಗಳು, ಸೆಪ್ಟೆಂಬರ್ ತಿಂಗಳಲ್ಲಿ ೧೨ ಕೇಸುಗಳು, ಅಕ್ಟೋಬರ್ ತಿಂಗಳಲ್ಲಿ ೧೧ ಕೇಸುಗಳು, ನವೆಂಬರ್ ತಿಂಗಳಲ್ಲಿ ೮ ಕೇಸುಗಳು, ಡಿಸೆಂಬರ್‌ನಲ್ಲಿ ೫ ಕೇಸುಗಳು, ಒಟ್ಟು ೧೩೧ ಕೇಸುಗಳು ಆಗಿವೆ. ಈಗ ಮಾನ್ಯ ಬಂಗಾರಪ್ಪನವರು ಹೇಳಿದರು ಸರ್ಕಾರ ತಲೆ ತಗ್ಗಿಸಬೇಕು ಎಂದು. ಆದರೆ ನಾನು ಮೊದಲೇ ಹೇಳಿದ ಹಾಗೆ ೧೯೮೦ನೇ ಇಸವಿಯಲ್ಲಿ ಮಾನ್ಯ ಬಂಗಾರಪ್ಪನವರೇ ಒಂದು ಹೇಳಿಕೆ ಕೊಟ್ಟಿದ್ದಾರೆ ಅದು ಅವರಿಗೆ ನೆನಪು ಇರಬಹುದು ಎಂದು ಕಾಣುತ್ತದೆ. ಕೋಲಾರ ಜಿಲ್ಲೆಯಲ್ಲಿ ಒಬ್ಬ ಮಹಿಳೆಯ ಮೇಲೆ ೯ ಜನ ಅತ್ಯಾಚಾರ ಮಾಡಿದ್ದುದು ಅವರಿಗೆ ನೆನಪು ಇರಬಹುದು. ಅದನ್ನು ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಅವರು ಆಗ ಮಂತ್ರಿಗಳಾಗಿದ್ದರು.

ಶ್ರೀ ಎಸ್. ಬಂಗಾರಪ್ಪ.—ವಿಚಾರ ಏನು ಹೇಳಿ ?

ಶ್ರೀ ರಾಮಕೃಷ್ಣ ಹೆಗಡೆ.—ಮಧ್ಯಾಹ್ನ ಹನ್ನೆರಡು ಗಂಟೆಯ ಸಮಯದಲ್ಲಿ ಗಂಡ ಹೆಂಡತಿಯರಿಬ್ಬರು ಕಾಡಿಗೆ ಹೋದರು. ಆಗ ೯ ಜನರು ಅವರನ್ನು ಅಡ ಗಟ್ಟಿ ಗಂಡನನ್ನು ಕೇಳಿದರು, ಇವಳು ನಿನ್ನ ಹೆಂಡತಿಯೋ ಅಥವಾ ಸೂಳೆಯೋ ಎಂದು. ಗಂಡ ಹೇಳಿದ ಇವಳು ನನ್ನ ಹೆಂಡತಿ ಎಂದು, ಇಲ್ಲ ಸುಳ್ಳು ಎಂದು ಹೇಳಿ ಆ ೯ ಜನರು ಗಂಡನನ್ನು ಕಟ್ಟುಹಾಕಿ ಹೆಂಡತಿಯ ಮೇಲೆ ಅತ್ಯಾಚಾರ ಮಾಡಿದರು.

ಶ್ರೀ ಎಸ್. ಬಂಗಾರಪ್ಪ.—ಇದರ ಅರ್ಥ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ತಲೆಯನ್ನು ನಾವು ಏಕೆ ತಗ್ಗಿಸಬೇಕು? ಇಂಥ ಘಟನೆ ಎಲ್ಲಿಯಾದರೂ ಆಗಲೀ, ಕರ್ನಾಟಕದಲ್ಲಿಯೋ ಆಗಲೀ, ಹೊರಗಡೆಯೋ ಆಗಲೀ ನಮ್ಮ ಕಾಲದಲ್ಲಿಯೋ ಆಗಲೀ, ನಿಮ್ಮ ಕಾಲದಲ್ಲಿಯೋ ಆಗಲೀ...

ಶ್ರೀ ಎಸ್. ಬಂಗಾರಪ್ಪ.—ಸರ್ಕಾರ ತಲೆ ತಗ್ಗಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ಆಗ ಒಂದು ಹೇಳಿಕೆಯನ್ನು ಓದಿದರು. ನಿರ್ಜೀವವಾದಂಥ ಒಂದು ಹೇಳಿಕೆಯನ್ನು ಸಭೆಯಲ್ಲಿ ಓದಿ ಹೇಳಿದರು. ಆದರೆ ನಾನು ಅಂಥ ಒಂದು ಸ್ಟೇಟ್‌ಮೆಂಟ್ ಮಾಡಿದರೆ ಸತ್ಯ ಅದರಿಂದ ಗೊತ್ತಾಗುವುದಿಲ್ಲ. ನಾನು ಒಬ್ಬ ಸಾಮಾನ್ಯ ಮಂತ್ರಿಯಾಗಿ ಕೆಲಸ ಮಾಡುವುದಿಲ್ಲ. ಅದಕ್ಕಾಗಿಯೇ ನಾನು ಆ ಸ್ಟೇಟ್‌ಮೆಂಟ್‌ನ್ನು ಸಭೆಯಲ್ಲಿ ಓದಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಂದರೇ, ನೀವು ಹೇಳುವುದು ಸ್ಟೇಟ್‌ಮೆಂಟನ್ನು ಓದಿಸಿಬಿಟ್ಟು ಮುಗಿಸುವುದೇ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ಒಂದು ರೀತಿಯಲ್ಲಿ ನಂಬಿಕೆ ಇಡತಕ್ಕವನು. ಎಂಥ ಮನುಷ್ಯನಾದರೂ ಸುಧಾರಿಸುತ್ತಾನೆ. ಸುಧಾರಿಸಲಿಕ್ಕೆ ಅವಕಾಶವಿದೆ. ಹಿಂದೆ ಒಂದೊಮ್ಮೆ ತಳಮಳ ಆಗದಿದ್ದರೆ ಇವತ್ತು ತಳಮಳ ಆದರೆ ಸಾಕು. ಇಂಥ ಪ್ರಸಂಗದಲ್ಲಿಯಾದರೂ ತಳಮಳ, ಕರುಣೆ ಭಾವನೆ ಇವರಲ್ಲಿ ಹುಟ್ಟಿದರೆ ಅದರಿಂದ ನನಗೆ ಬಹಳ ಸಂತೋಷ.

SRI S. BANGARAPPA.—I can never tolerate this kind of argument. What kind of argument you are advancing ? ನೀವು ಅನ್‌ನೆಸಸರಿಯಾಗಿ ಎಲ್ಲಾ ವಿಚಾರಗಳನ್ನು ಮುಚ್ಚುತ್ತಿದ್ದೀರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮುಖ್ಯ ಮಂತ್ರಿಗಳು ಹೇಳಿಕೆ ಕೊಡತಕ್ಕ ಸಮಯದಲ್ಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲ,

ಶ್ರೀ ಎಸ್. ಬಂಗಾರಪ್ಪ.—ನನಗೆ ತಳಮಳ ಆಗಲಿಕ್ಕೆ ಈ ಆರ್ಗ್ಯುಮೆಂಟ್ ಮಾಡುತ್ತಿದ್ದೀರಾ ? ನಾನು ಮಂತ್ರಿಯಾಗಿದ್ದಾಗ ಕೋಲಾರದ ಘಟನೆಯ ಬಗ್ಗೆ ಖಂಡನೆ ಮಾಡಿದ್ದೇನೆ. ನನಗೇನೂ ತಳಮಳ ಆಗಿಲ್ಲ. ನೀವು ಬಹಳ ಎಚ್ಚರಿಕೆಯಿಂದ ಉತ್ತರ ಕೊಡಬೇಕು.

(ಗೊಂದಲ)

SRI M. RAGUPATHI.—Myself and Sri Bangarappa have defended that case. We know it. We both are guilty. At that time I was the Chief Whip in the Council and you were the Leader of the House. So you have no right to speak now.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ನಾಯಕರಿಂದ ನಾವು ಸರಿಯಾದ ಉತ್ತರವನ್ನು ನಿರೀಕ್ಷಣೆ ಮಾಡಿ ಕೇಳುತ್ತಿದ್ದೆವು. ವಿತಸ್ಪರ್ಧೆ ಉತ್ತರ ಕೊಡುವಾಗ ಅವರು ಒಂದು ತರಹ ಕೊಟ್ಟರು. ಸನ್ಮಾನ್ಯ ಬಂಗಾರಪ್ಪನವರು ಕೆಲವು ಪ್ರಶ್ನೆಗಳನ್ನು ಇದರ ಬಗ್ಗೆ ಹಾಕಿದರು. ಚರ್ಚೆಯ ಸಮಯದಲ್ಲಿ ನಾಯಕರಾದಂಥವರು ಒಬ್ಬ ಸದಸ್ಯರ ಮೇಲೆ ವೀರಾವೇಶದಿಂದ ಕೋಪತಾಪದಿಂದ ಹೆದರಿಸತಕ್ಕದ್ದು...

ಶ್ರೀ ಎಂ. ರಘುಪತಿ.—ಮಾನ್ಯ ಗುಂಡೂರಾಯರು ಮಾನ್ಯ ಸದಸ್ಯರಾದ ಜೆ. ಎಚ್. ಪಟೇಲರನ್ನು ಹೊಡೆಯಲಿಕ್ಕೆ ಹೋಗಿರಲಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಆ ಕಡೆ ಸದಸ್ಯರುಗಳು ಇಷ್ಟು ಡೆಸ್ಪರೇಟ್ ಆಗಲಿಕ್ಕೆ ಏನು ಕಾರಣ ? ಇನ್ನೂ ಇದಕ್ಕೆ ಸಮಯವಿದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಈ ವಿಚಾರದಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವಾಗ ಬೇರೆ ಅರ್ಥ ಬರುವ ರೀತಿಯಲ್ಲಿ ಉತ್ತರ ಕೊಡತಕ್ಕ ಪದ್ಧತಿಯನ್ನು ಮೊದಲು ಬಿಡಬೇಕು. ತಳಮಳ ಆಗಿರಲಿಕ್ಕೆ ಬೇಕು ಎಂದು ಹೇಳುವ ಮಾತುಗಳನ್ನು ನೀವು ಬಿಡಬೇಕು. ಇದನ್ನು ಬಿಟ್ಟು ನೇರವಾಗಿ ಉತ್ತರ ಕೊಡುವುದನ್ನು ನೀವು ಮೊದಲು ಕಲಿಯಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದ ಮಾತಿನ ನಕಲನ್ನು ಮಾನ್ಯ ಸದಸ್ಯರಿಗೆ ಬೇಕಾದರೆ ಕಳುಹಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಮುಂದಿರತಕ್ಕ ಪ್ರಶ್ನೆಗೆ ಉತ್ತರ. ಹಿಂದಿನದನ್ನು ಬೇರೆ ಅರ್ಥ ಬರುವ ರೀತಿಯಲ್ಲಿ ಕಲ್ಪನೆ ಮಾಡಿ ಹೇಳುವುದಿಲ್ಲ. ಈ ಪದ್ಧತಿಯನ್ನು ತಾವು ಬಿಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಹೀಗೆಯೇ ಉತ್ತರ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ಅವರು ಉತ್ತರ ಕೊಡತಕ್ಕ ರೀತಿಯಲ್ಲಿ ಅವರು ಕೊಡುತ್ತಾರೆ.

ಶ್ರೀ ಜಿ. ನಾರಾಯಣಕುಮಾರ್.— ಈಗ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳೇ ? ಅಥವಾ ಮಾನ್ಯ ರಘುಪತಿಯವರು ಮುಖ್ಯ ಮಂತ್ರಿಗಳೇ ? ಶ್ರೀ ರಘುಪತಿಯವರು * ತರಹ ಕೈ ತೋರಿಸಿಕೊಂಡು ಹೇಳುತ್ತಿದ್ದಾರೆ.

(ಗೊಂದಲ)

ಚೇರ್‌ಮನ್.—ಆ ರೀತಿ ಮಾನ್ಯ ಸದಸ್ಯರು ಮಾತನಾಡಕೂಡದು. ಈ ಸದನದ ಗೌರವವನ್ನು ನಾವು ಕಾಪಾಡಬೇಕು. ಆದನ್ನು ದಾಖಲೆಯಿಂದ ತೆಗೆದುಹಾಕಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಯಾರಾದರೂ ಒಬ್ಬರು ಮಾತನಾಡಲಿ.

ಶ್ರೀ ಎಂ. ಎಸ್ ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ....

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಮೊದಲನೆಯದಾಗಿ ಪ್ರತಿಜ್ಞೆಯನ್ನು ತೆಗೆದುಕೊಳ್ಳುವ ದಿವಸ 'ಈ ಸದನಕ್ಕೆ ಅಗೌರವ ತರುವ ರೀತಿಯಲ್ಲಿ ನಡೆಯಬಾರದು' ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೊಸ ಸದಸ್ಯರಾಗಿ ಇಲ್ಲಿಗೆ ಬಂದಿದ್ದಾರೆ. ನಿನ್ನೆಯ ದಿವಸ ಮಾನ್ಯ ಸದಸ್ಯರು ಈ ಸಭೆಯ ನಿಯಮಾವಳಿಗೆ ವಿರುದ್ಧವಾಗಿ ಒಬ್ಬ ಮಹಿಳೆಯನ್ನು ಕರೆದುಕೊಂಡು ಬಂದು ತೋರಿಸಿದರು. ಎಲ್ಲರೂ ಕೂಡ ಅವರನ್ನು ಕ್ಷಮಿಸುವಷ್ಟು ಉದಾರತೆಯನ್ನು ತೋರಿಸಿದರು. ಈ ಸಭೆಯಲ್ಲಿ ಹುಟ್ಟಿದಾಗಿನಿಂದಲೂ ಎಂದೂ ನಡೆಯದಂತಹ ರೀತಿಯಲ್ಲಿ ಅವರು ನಿನ್ನೆಯ ದಿವಸ ಇಲ್ಲಿ ನಡೆದುಕೊಂಡರು. 'ನಾನೇ ಈ ಮಹಿಳೆಯನ್ನು ಈ ಸದನಕ್ಕೆ ಕರೆದುಕೊಂಡು ಬಂದೆ' ಎಂದು ಅವರು ಹೇಳಿದರು. ಇವತ್ತು ಅವರು 'ಶ್ರೀ ರಘುಪತಿಯವರ ವಿಷಯದಲ್ಲಿ ಹೇಳದ್ದಾರೆ' ತನ್ನ ಜೊತೆಯಲ್ಲಿ ಇರತಕ್ಕಂಥ ಒಬ್ಬ ಮಾನ್ಯ ಸದಸ್ಯರಿಗೆ ಹಾಗೆ ಹೇಳುವುದಾದರೆ ಅವರು ತಿಳಿಯದೇ ಹಾಗೆ ಮಾತನಾಡುತ್ತಿದ್ದಾರೆ ಎಂದು ನಾನಂತೂ ಹೇಳುವುದಿಲ್ಲ. ಅವರು ತಿಳಿದೂ ತಿಳಿದೊ ಈ ರೀತಿ ಮಾತನಾಡುತ್ತಿದ್ದಾರೆ ಹಾಗೆ ಉದ್ದೇಶಪೂರ್ವಕವಾಗಿ ಮಾತನಾಡುತ್ತಿದ್ದಾರೆ. ಇದು ನಾವು ಸಹಿಸತಕ್ಕಂಥಾದ್ದಲ್ಲ. ಅವರನ್ನು ಈ ಸಭೆಯಿಂದ ಸಸ್ಪೆಂಡ್ ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಅವರ ಮೇಲೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕ್ರಿಯಾಲೋಪ ಇದೆ. ರೂಲ್ ೩೧೧ರಲ್ಲಿ ಏನು ಹೇಳಿದೆ ಎಂಬುದನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನನ್ನಲ್ಲಿ ಇಂಗ್ಲೀಷ್‌ನಲ್ಲಿರತಕ್ಕಂಥ ರೂಲ್ಸ್ ಪುಸ್ತಕ ಇದೆ, ಕನ್ನಡದಲ್ಲಿರತಕ್ಕಂಥ ರೂಲ್ಸ್ ಪುಸ್ತಕ ಇಲ್ಲ, ಆದ್ದರಿಂದ ಮಾನ್ಯ ನಾರಾಯಣಕುಮಾರ್‌ರವರು ನನ್ನನ್ನು ಕ್ಷಮಿಸಬೇಕು, ಈಗ ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೆ, ರೂಲ್ ೩೧೧ ಏನು ಹೇಳುತ್ತದೆ ಎಂದರೆ.

A member while speaking shall not–

(i) refer to any matter of fact on which a judicial decision is pending ;

(ii) make a personal charge against a Member ;

(iii) use offensive expressions about the conduct or proceedings of Parliament or any State Legislature;

---

* ಅಧ್ಯಕ್ಷರ ಅಪ್ಪಣೆ ಮೇರೆಗೆ ಪದವನ್ನು ತೆಗೆದುಹಾಕಲಾಗಿದೆ.

(iv) reflect on any determination of the House except on a motion for rescinding it;

(v) reflect upon the conduct of persons in high authority unless the discussion is based on a substantive motion drawn in proper terms;

(vi) use the Governor's name for the purpose of influencing the debate;

(vii) utter treasonable, seditious or defamatory words;

(viii) use his right of speech for the purpose of obstructing the business of the House.

ಎಂದು ಹೇಳಿದೆ. ಇಲ್ಲಿ ಒಬ್ಬ ಮಾನ್ಯ ಸದಸ್ಯರು ಯಾವರೀತಿ ನಡೆದುಕೊಳ್ಳಬೇಕು ಎಂಬದನ್ನು ಹೇಳಿದೆ. ದುರಾದೃಷ್ಟವಶಾತ್ ಮಾನ್ಯ ನಾರಾಯಣಕುಮಾರ್‌ರವರು ಇಲ್ಲಿ ಹೇಳಿರತಕ್ಕಂಥ ರೀತಿಯಲ್ಲಿ ನಡೆದುಕೊಂಡಿಲ್ಲ. ಅವರು ಇಲ್ಲಿಗೆ ಹೊಸಬರು ನಿಜ. ಅವರಿಗೆ ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಯಾವರೀತಿ ನಡೆದುಕೊಳ್ಳಬೇಕು ಎಂಬುದು ಗೊತ್ತಿಲ್ಲದೇ ಇರಬಹುದು. ಆದ್ದರಿಂದ ಅವರು ಆ ರೀತಿ ಹೇಳಿದ್ದಾರೆ. ಮಾನ್ಯ ರಘುಪತಿಯವರ ವಿಷಯದಲ್ಲಿ ಹೇಳಿದ್ದು ತಪ್ಪು. ಅವರು ಇಲ್ಲಿ ಏನು ಹೇಳಿದ್ದಾರೆ ಅದಕ್ಕಾಗಿ ಈ ಸಭೆಯಲ್ಲಿ ಎಲ್ಲರ ಕ್ಷಮಾಪಣೆ ಕೇಳಬೇಕು ಎಂದು ನಾನು ಹೇಳುತ್ತೇನೆ ಮತ್ತು ಅವರು ಇಲ್ಲಿ ಹೇಳಿರತಕ್ಕಂಥ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಕೂಡ ಹೇಳುತ್ತೇನೆ.

ಶ್ರೀ ಕೆ. ಕೆಂಪೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ನಾರಾಯಣಕುಮಾರ್‌ರವರು ನಿನ್ನೆ ದಿವಸ ಕೂಡ ಇದೇ ರೀತಿಯ ಒಂದು ಆರೋಪವನ್ನು ಇಲ್ಲಿ ಎತ್ತಿದರು. 'ಕಾಂಗ್ರೆಸ್ (ಐ) ಸದಸ್ಯರೊಬ್ಬರ ಮಗ ಈ ಕೆಲಸ ಮಾಡಿದ' ಎಂದು ಅವರು ಈ ಸಭೆಯಲ್ಲಿ ಹೇಳಿದರು. ಇದು ನಿಜವಾಗಿಯೂ ಕೂಡ ಅಕ್ಷಮ್ಯ ಅಪರಾಧ ಎಂದುಹೇಳುತ್ತಿದ್ದೇನೆ. ಮತ್ತು ಶ್ರೀ ರಘುಪತಿಯವರು ಮಾತನಾಡುತ್ತಿದ್ದಾಗ ಅವರಿಗೆ ಒಂದು ಪದ ಉಪಯೋಗಿಸಿದರು. ಈ ಸಭೆಯಲ್ಲಿ ಮಾತನಾಡುವಾಗ 'ಕಾಂಗ್ರೆಸ್ (ಐ) ಸದಸ್ಯರ ಮಗ ಒಬ್ಬ ಈ ಕೆಲಸ ಮಾಡಿದ' ಎನ್ನುವುದಾಗಲೀ, 'ರಘುಪತಿಯವರು ಆ ತರಹ ಹೇಳುತ್ತಿದ್ದಾರೆ' ಎನ್ನುವುದಾಗಲೀ ನಮ್ಮ ಸಭ್ಯತೆಗೆ ತಕ್ಕನಾದುದಲ್ಲ. ಮಾನ್ಯ ಸದಸ್ಯರಾದ. ಶ್ರೀ ಕೃಷ್ಣನ್‌ರವರೂ ಕೂಡ ಈ ಬಗ್ಗೆ ಒಂದು ಕ್ರಿಯಾಲೋಪವನ್ನು ಎತ್ತಿ ಹೇಳಿದ್ದಾರೆ ಅದರಂತೆ ಮಾನ್ಯ ನಾರಾಯಣಕುಮಾರ್‌ರವರು ಈ ಸಭೆಯಲ್ಲಿ ಕ್ಷಮಾಪಣೆ ಕೇಳಿಕೊಳ್ಳಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ವರ್ತನೆ ತಮಿಳುನಾಡು ವಿಧಾನ ಸಭೆಯಲ್ಲಿ ಕೂಡ ಚರ್ಚೆಗೆ ಬಂತು. ಇಂತಹ ಸದಸ್ಯರ ಮುಂದುವರಿಕೆ ಈ ಸದನಕ್ಕೆ ಅಗೌರವವನ್ನು ತರುವಂಥಾದ್ದಾಗಿದೆ. ಶ್ರೀ ನಾರಾಯಣಕುಮಾರ್‌ರವರು ಈ ಸಭೆಗೆ ಹೊಸಬರಾದರೂ ಕೂಡ ಇಲ್ಲಿ ಸದಸ್ಯರ ನಡವಳಿಕೆ ಹೇಗೆ ಇರಬೇಕು ಎಂಬುದು ಅವರಿಗೆ ಗೊತ್ತಿದೆ ಗೊತ್ತಿಲ್ಲದಿದ್ದರೆ, ರೂಲ್ಸ್ ಪುಸ್ತಕವನ್ನು ಅವರಿಗೆ ಏನು ಒದಗಿಸಿದ್ದಾರೆ ಅದನ್ನು ಓದಿಕೊಂಡು ಈ ಸಭೆಗೆ ಬರಬೇಕಾದುದು ಅವರ ಕರ್ತವ್ಯ. ಯಾರೇ ಆಗಲೀ ಇಲ್ಲಿ ಸಭ್ಯತೆಯಿಂದ ವರ್ತನೆ ಮಾಡತಕ್ಕಂಥಾದ್ದು ಬಹಳ ಮುಖ್ಯ. ಅದನ್ನು ಬಿಟ್ಟು ಹೊರಗಡೆ ಯಾವರೀತಿ ಪದಗಳನ್ನು ಉಪಯೋಗಿಸಿ ಭಾಷಣ ಮಾಡುತ್ತಾರೋ ಆ ರೀತಿ ಅದನ್ನೆಲ್ಲಾ ಇಲ್ಲಿ ಉಪಯೋಗಿಸುವುದಾದರೆ ಈ ಸಭೆಗೆ ಗೌರವ ಇರುವುದಿಲ್ಲ. ನಾವು ಇಲ್ಲಿ ಮರ್ಯಾದಸ್ತರು ಕುಳಿತುಕೊಂಡು ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೂ ಆಗುವುದಿಲ್ಲ. 'ಮಾನ್ಯ ರಘುಪತಿಯವರು ಆ ತರಹ ಬಿಹೇವ್ ಮಾಡುತ್ತಾರೆ' ಎಂದು ಅವರು ಇಲ್ಲಿ ಹೇಳಿದ್ದಾರೆ. ಅವರು ಹಾಗೆ ಹೇಳಿದ್ದು ಸರಿಯಲ್ಲ. ಅವರು ಈ ತಕ್ಷಣ ಈ ಸಭೆಯ ಕ್ಷಮಾಪಣೆ ಕೇಳಬೇಕು. ಇಲ್ಲದಿದ್ದರೆ ನಾವು ಇಲ್ಲಿ ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತೇವೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ, ನಿನ್ನೆ ನಡೆದಿರತಕ್ಕಂಥ ಘಟನೆಯ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಸೂಕ್ತವಾಗಿ ವಿವರಣೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗಡೆಯವರೂ ಕೂಡ ಆ ವಿಷಯದ ಬಗ್ಗೆ ವಿವರಿಸುತ್ತಾ ಇರಬೇಕಾದರೆ ಮಾನ್ಯ ಸದಸ್ಯರು ಎದ್ದು ನಿಂತು ಅದಕ್ಕೆ ಅಡ್ಡ ಬರುವ ಅವಶ್ಯಕತೆ ಇರಲಿಲ್ಲ. ಈ ಸಮಾಜದಲ್ಲಿರತಕ್ಕಂಥ ಯಾವ ವ್ಯಕ್ತಿಯ ಬಗ್ಗೆಯಾದರೂ ಕಳಕಳಿಯನ್ನು ತೋರಿಸತಕ್ಕಂಥ ನೈತಿಕತೆ ಪ್ರತಿಯೊಬ್ಬರಿಗೂ ಇದೆ; ಮಾನವೀಯತೆ ಕೂಡ ಇದೆ. ನಾವೆಲ್ಲರೂ ಆ ವಿಷಯವಾಗಿ ಪ್ರಸ್ತಾಪ ಮಾಡಿದಮೇಲೆ ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಸಮಜಾಯಿಷಿಯನ್ನು ಕೊಡುತ್ತಾ ಇರಬೇಕಾದರೆ ಮಾನ್ಯ ಸದಸ್ಯರು ಮಧ್ಯೆ ಬಂದು ಬಾಯಿ ಹಾಕಿದ್ದನ್ನು ನಾನು ಒಪ್ಪುವುದಿಲ್ಲ. ಮಾನ್ಯ ನಾರಾಯಣ ಕುಮಾರ್‌ರವರು ನಿನ್ನೆಯ ದಿವಸ ಈ ಸಭೆಯ ನಿಯಮಗಳಿಗೆ ವಿರುದ್ಧವಾಗಿ ಒಬ್ಬ ಮಹಿಳೆಯನ್ನು ಸಭೆಯ ಒಳಕ್ಕೆ ಕರೆದುತಂದು ಉದ್ಧಟತನ ಮಾಡಿ ಇವತ್ತು ಮಾನ್ಯ ಮಂತ್ರಿಯವರಾದ ಶ್ರೀ ರಘುಪತಿಯವರ ಬಗ್ಗೆ ಅಂತಹ ಪದವನ್ನು ಇಲ್ಲಿ ಉಪಯೋಗಿಸಬಹುದೇ ? ಅವರು ಬೆಂಗಳೂರಿನಲ್ಲೆ ಬೆಳೆದಂತಹವರು, ನಾಗರೀಕರು. ಅವರು ಇಂತಹ ಪದವನ್ನು ಬಳಸಬಹುದೇ ? ತಾವು ಈ ಬಗ್ಗೆ ಸೂಕ್ತವಾದ ರೂಲಿಂಗ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ಮಾನ್ಯ ನಾರಾಯಣ ಕುಮಾರ್ ರವರ ವರ್ತನೆಯ ಬಗ್ಗೆ ಬಹಳಷ್ಟು ಹಿರಿಯ ಸದಸ್ಯರು ಹೇಳಿದ್ದಾರೆ. ಆದರೆ ನಿನ್ನೆ ಇಲ್ಲಿ ನಡೆದ ಘಟನೆಯ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನು ನೋಡಿದಾಗ ಪತ್ರಿಕೆಗಳು ಸುಧಾರಿಸತಕ್ಕಂಥ ಲಕ್ಷಣ ಕಾಣುತ್ತಾ ಇಲ್ಲ. ಮಾನ್ಯ ಸದಸ್ಯರು ಈ ಸಭೆಯ ಒಳಗಡೆ ಬರುವಾಗ ರಕ್ಷಣಾ ಸಿಬ್ಬಂದಿಗೆ ಕಪಾಳ ಮೋಕ್ಷ ಮಾಡಿದ್ದಾರೆ ಎಂದು ಒಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಇದು ನಿಜವಾಗಿದ್ದರೆ ನಾವು ಇಲ್ಲಿ ತಲೆತಗ್ಗಿಸಬೇಕಾಗುತ್ತದೆ. ಇವತ್ತಿನ ದಿವಸ ಗೌರವಾನ್ವಿತ ಮಂತ್ರಿಗಳು ಉತ್ತರ ಹೇಳುತ್ತಾ ಇರಬೇಕಾದರೆ ಮಾನ್ಯ ಸದಸ್ಯರು ಉಪಯೋಗಿಸಿರತಕ್ಕ ಪದ ನಮಗ್ಯಾರಿಗೂ ಗೌರವ ತರತಕ್ಕಂಥಾದ್ದಲ್ಲ. ಯಾರೇ ಇರಲಿ, ಯಾವಕಡೆಯವರೇ ಇರಲಿ, ಅಂತಹ ಪದಗಳನ್ನು ಉಪಯೋಗಿಸಿದಾಗ ನಮ್ಮನ್ನು ನೋಡತಕ್ಕ ಜನ ನಮ್ಮ ಬಗ್ಗೆ ಬಹಳ ಸಣ್ಣದಾಗಿ ಯೋಚನೆ ಮಾಡುತ್ತಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು, ಅವರನ್ನು ಸಸ್ಪೆಂಡ್ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ - ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಚರ್ಚೆ ಮಾಡುವಾಗ ದುರದೃಷ್ಟವಶಾತ್ ಕೆಲವು ಅಪಚಾರದ ಮಾತುಗಳು ಈ ಸದನದ ಮುಂದೆ ಬಂದಿದೆ. ಮಾನ್ಯ ನಾರಾಯಣ ಕುಮಾರ್ ರವರು ನಾನು ಹಾಗೆ ಹೇಳಲಿಲ್ಲ ಎಂದು ಹೇಳಿದ್ದಾರೆ. ಆದರೆ ಅವರು ಹಾಗೆ ಹೇಳಿದ್ದು ನಮಗೆಲ್ಲಾ ಕೇಳಿದೆ. ತಾವು ಕಡತ ತರಿಸಿ ನೋಡಿ. ಏಕೆಂದರೆ, ಮುಖ್ಯ ಮಂತ್ರಿಗಳಾಗಲಿ, ಸಂಪುಟದ ಸದಸ್ಯರಾಗಲಿ, ಯಾರೇ ಸದಸ್ಯರಾಗಲಿ ಲಕ್ಷಾಂತರ ಮಂದಿಯ ಮತಗಳನ್ನು ಪಡೆದು ಈ ಒಂದು ಗೌರವವನ್ನು ಸಂಪಾದನೆ ಮಾಡಿಕೊಂಡು ನಾವು ಈ ಸದನದಲ್ಲಿ ಬಂದಿದ್ದೇವೆ. ಆದುದರಿಂದ ಸದಸ್ಯರ ಮೇಲಾಗಲಿ, ಮುಖ್ಯ ಮಂತ್ರಿಯವರ ಮೇಲಾಗಲಿ ಸಂಪುಟದ ಸದಸ್ಯರ ಮೇಲಾಗಲಿ ಬಹಳ ಹಗುರವಾಗಿ ಮಾತನಾಡುವಂಥ ಚಟ ಈ ಸದನದಲ್ಲಿ ಬೆಳೆಸಿಕೊಂಡರೆ ಅದು ಎಲ್ಲಿಯವರೆಗೆ ಹೋಗಿ ತಲುಪುತ್ತದೆ ಎಂದು ನಾವು ಹೇಳಲಿಕ್ಕೆ ಆಗುವುದಿಲ್ಲ ತಮಗೆ ಗೊತ್ತಿದೆ, ಈ ಸದನ ಪ್ರಾರಂಭವಾದಾಗಲೇ ಇದು ಪ್ರಾರಂಭವಾಯಿತು, ಹೀಗೇ ಇದ್ದರೆ ಕೊನೆಯವರೆಗೂ ಇದೇ ತರಹ ಬೆಳೆದುಕೊಂಡು ಹೋಗುತ್ತದೆ ಎಂಬ ಅನಿಸಿಕೆ ನನಗೆ ಬರುತ್ತಾ ಇದೆ. ಇಲ್ಲಿ ಬಹಳ ಹಗುರವಾಗಿ ಮಾತನಾಡುವುದು, ಕಾಂಗ್ರೆಸ್–ಐ ಮೇಲೆ ಗಧಾಪ್ರಹಾರ ಮಾಡುವುದು ನಿಲ್ಲಬೇಕು, ನಾಳೆ ನಿಮ್ಮ ಮೇಲೂ ಬರುತ್ತದೆ. ಇದು ಸರ್ವಥಾ ಸಲ್ಲದು. ಯಾರೇ ಸದಸ್ಯರಾಗಲಿ ಇಲ್ಲಿ ಅಪಾದಿತನ ಸ್ಥಾನದಲ್ಲಿ ನಾವು ಯಾರೂ ಇಲ್ಲ. ನಾವು ಗೌರವಾನ್ವಿತವಾದಂಥ ಸದಸ್ಯರು. ಈ ಸದನದಲ್ಲಿ ಗೌರವಾನ್ವಿತ ಜನರ ವಿಚಾರಗಳನ್ನು ನಿರ್ಭಯವಾಗಿ, ನಿರಾತಂಕವಾಗಿ ಯಾವುದೇ ರೀತಿಯಾದ ಪ್ರಲೋಭನೆಯಿಲ್ಲದೆ ಪ್ರಸ್ತಾಪಿಸಲು, ಮತ್ತು ಕರ್ತವ್ಯವನ್ನು ನಿರ್ವಹಿಸಬೇಕಾದಂಥ ಅಗತ್ಯವಿದೆ ಎಂಬುದನ್ನು ಯಾವ ಸದಸ್ಯರೂ ಕೂಡ ಮರೆಯಲಿಕ್ಕೆ ಆಗುವುದಿಲ್ಲ. ಇಂತಹ ಪಕ್ಷದವರು, ಇಂತಹ ಪಂಗಡದವರು ಮಾತ್ರ ಕರ್ತವ್ಯವನ್ನು ನಿರ್ವಹಿಸಬೇಕು, ಮತ್ತೊಂದು ಪಂಗಡದವರು, ಪಕ್ಷದವರು ಇಲ್ಲ ಎನ್ನುವ ಪ್ರಶ್ನೆಯಿಲ್ಲ. ಆದರೆ ಈ ತರಹ ಹಗುರವಾದ ಮಾತುಗಳನ್ನಾಡಿಕೊಂಡು ಇಂತಹ ಒಂದು ದುರದೃಷ್ಟಕರ ಪರಿಸ್ಥಿತಿಗೆ ನಾವು ಬಂದುಬಿಟ್ಟಿದ್ದೇವೆ. ಇದು ಅನೇಕ ದಿವಸ

ಗಳಿಂದ ನಡೆದುಕೊಂಡು ಬಂದಿದೆ. ಈ ಸಂದರ್ಭದಲ್ಲಿ ನಮ್ಮ ಕಡೆಯ ಸದಸ್ಯರಿಗೂ, ತಮ್ಮ ಕಡೆಯ ಸದಸ್ಯರಿಗೂ ನಾನು ಹೇಳುವುದಿಷ್ಟೆ. ಇದರ ಬಗ್ಗೆ ಕೋಡ್ ಆಫ್ ಕಾಂಡಕ್ಟ್ ಮಾಡಲೇಬೇಕು. ಸದಸ್ಯರ ವಿಚಾರದಲ್ಲಾಗಲಿ, ಯಾರ ವಿಚಾರದಲ್ಲಾಗಲಿ ಅಗೌರವವಾಗಿ, ಹಗುರವಾಗಿ ಮಾತನಾಡುವುದನ್ನು ನಿಲ್ಲಿಸದೇ ಇದ್ದರೆ ಸದನದಲ್ಲಿ ಕಾರ್ಯಕಲಾಪಗಳನ್ನು ನಡೆಸಿದರೂ ನಿಮ್ಮ ಕಡೆಯ ಮತ್ತು ನಮ್ಮ ಕಡೆಯ ಸದಸ್ಯರಿಗೂ ಸರ್ಕಾರಕ್ಕೂ ಕೂಡ ಬಹಳ ತೊಂದರೆಯಾಗುತ್ತದೆ. ಕರ್ನಾಟಕದ ಪರಂಪರೆ, ಕರ್ನಾಟಕದ ಸಂಸ್ಕೃತಿಗೆ ಹೆಸರಾದಂಥ ಈ ಸದನದಲ್ಲಿ, ಯಾವಾಗಲೂ ಕೂಡ ಎಲ್ಲರಿಗೂ ಗೌರವವನ್ನು ನೀಡಿದಂಥ ಈ ಸದನದಲ್ಲಿ ಇಂತಹ ಘಟನೆಗಳು ನಡೆಯುವಂಥಾದ್ದು ಬಹಳ ದುಃಖಕರವಾದಂಥ ವಿಚಾರ. ಮುಂದೆ ದಯಮಾಡಿ ಈ ರೀತಿ ನಡೆಯಬಾರದು. ಇದಕ್ಕೆ ಎಲ್ಲರೂ ಕೂಡ ಅನ್ವಯವಾಗತಕ್ಕಂಥಾದ್ದು ಮುಖ್ಯ. ಒಬ್ಬ ಸದಸ್ಯರನ್ನಾಗಲೀ, ಸಂಪುಟದ ಸದಸ್ಯರನ್ನಾಗಲಿ, ಮುಖ್ಯ ಮಂತ್ರಿಯವರನ್ನಾಗಲಿ ಅವರನ್ನು ಗೌರವದಿಂದ ನೋಡುವುದು ಅಂದರೆ ನಮ್ಮನ್ನು ನಾವು ಗೌರವದಿಂದ ಖಂಡಿತವಾಗಿ ನೋಡಿದಂತಾಗುತ್ತದೆ. ಈ ಸದಸ್ಯರು ಅನೇಕ ದಿವಸಗಳಿಂದ ಈ ರೀತಿ ಮಾಡುತ್ತಿದ್ದಾರೆ. ಏನೋ ಹೊಸ ಸದಸ್ಯರು ಬಂದು, ಏನೋ ಹುರುಪಿನಿಂದ ಬಂದಿದ್ದಾರೆ ಸಂಯಮ ಇಲ್ಲ ಎಂದು ಇಷ್ಟರವರೆಗೆ ಸಹಿಸಿಕೊಂಡು ಇದ್ದದ್ದು ಮತ್ತು ಇಲ್ಲಿಯವರೆಗೆ ನಡೆದದ್ದು ಆಯಿತು. ಮಾತುಮಾತಿಗೂ ಅಡ್ಡಿ ಬರತಕ್ಕ ಪ್ರವೃತ್ತಿಯಿಂದಲೇ ಹೀಗೆ ಆಗುವುದು ಇದನ್ನು ಕ್ಷಮಿಸಬೇಕು ಎಂದು ಹೇಳುವುದಲ್ಲ, ಈ ಘಟನೆಯನ್ನು ಕ್ಷಮಿಸಬೇಕು ಎಂದು ವಾದ ಮಾಡಲಿಕ್ಕೆ ನಾನು ನಿಂತಿಲ್ಲ. ಈ ಘಟನೆ ನಡೆದದ್ದು ಬಹಳ ದುರದೃಷ್ಟಕರ. ತಾವು ಕಾನೂನು ಪರಿಧಿಯಲ್ಲಿ ಏನು ಬೇಕೋ ಅದನ್ನು ಮಾಡಿ. ಶಬ್ದ ಉಪಯೋಗ ಏನು ಆಗಿದೆ ಅದಕ್ಕೆ ಕ್ಷಮಾಪಣೆ ಕೇಳಲಿಕ್ಕೆ ಅಥವಾ ಅದನ್ನು ಹಿಂದೆ ತೆಗೆದುಕೊಳ್ಳಲಿಕ್ಕೆ ತಾವು ಹೇಳಬಹುದು ಅಥವಾ ತಾವು ದಾಖಲೆಯಿಂದ ತೆಗೆಸಬಹುದು. ಕೆಲವು ಕಡೆ ಇಂತಹ ಹಗುರವಾದ ಶಬ್ದಗಳು ಬಂದಾಗ ಕ್ಷಮಾಪಣೆ ಕೇಳಿದ್ದೂ ಇದೆ, ಹಿಂದಕ್ಕೆ ತೆಗೆದುಕೊಂಡದ್ದೂ ಇದೆ, ಎಕ್ಸ್‌ಪಂಜ್ ಮಾಡಿದ್ದೂ ಇದೆ. ಇಂತಹ ಘಟನೆಗಳು ಸದನದಲ್ಲಿ ನಡೆದಿದೆ ಆದರೆ ಸದನದ ಗೌರವವನ್ನು ಉಳಿಸಿಕೊಳ್ಳತಕ್ಕ ದೃಷ್ಟಿಯಲ್ಲಿ ಮತ್ತು ಸದನದ ಹಿಂದಿನ ಪರಂಪರೆಯನ್ನು, ಸಂಸ್ಕೃತಿಯನ್ನು ಉಳಿಸಿಕೊಂಡು ಸದನದ ಸದಸ್ಯರು ಸಮಾಜದಲ್ಲಿ ತಲೆ ಎತ್ತಿ ನಡೆಯುವಂತೆ ಮಾಡಬೇಕು. ಸದನದಲ್ಲಿ ಚರ್ಚೆ ಮಾಡಿಕೊಂಡು ಅಗೌರವವಾದ ಮಾತುಗಳನ್ನು ಹೇಳಿಕೊಂಡು ಸಮಾಜದಲ್ಲಿ ತಲೆತಗ್ಗಿಸಿ ನಡೆಯುವಂತಹ ಸದಸ್ಯರು ಸದಸ್ಯರಾಗಿ ಉಳಿದುಕೊಳ್ಳಲಿಕ್ಕೆ ಅರ್ಹತೆಯಿಲ್ಲ. ಆದ್ದರಿಂದ ಇದನ್ನು ಸೂಕ್ಷ್ಮವಾಗಿ ಮನನಮಾಡಿಕೊಂಡು ಮಾನ್ಯ ನಾರಾಯಣಕುಮಾರ್ ಅವರು ತಮ್ಮ ಗೌರವವನ್ನು ಉಳಿಸಿಕೊಳ್ಳುವುದರ ಜೊತೆಗೆ ಎಲ್ಲರ ಗೌರವವನ್ನು ಕಾಪಾಡಬೇಕು. ನಾವು ಆಕಸ್ಮಿಕವಾಗಿ ಸದನದ ಸದಸ್ಯರಾಗಿ ಬಂದಿರಬಹುದು. ಈ ಸದನದ ಗೌರವವನ್ನು ಕಾಪಾಡಿಕೊಂಡು ಅನೇಕ ದಶಕಗಳ ಕಾಲದಿಂದ ಉಳಿಸಿಕೊಂಡು ಬಂದಿರತಕ್ಕ ಆಸ್ತಿಯನ್ನು ಚೆನ್ನಾಗಿ ಕಾಪಾಡಿಕೊಂಡು ಹೋಗಬೇಕಾಗಿರತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ, ಎಲ್ಲ ಸದಸ್ಯರದ್ದೂ ಇದೆ ಈ ಒಂದು ಪರಿಜ್ಞಾನದಿಂದ ನಾವು ಕೆಲಸಮಾಡದೇ ಹೋದರೆ ಕರ್ನಾಟಕ ರಾಜ್ಯದ ಜನರ ಕೆಲಸವನ್ನು ನಾವು ಸರಿಯಾಗಿ ನಿರ್ವಹಿಸಲಿಕ್ಕೆ ಕುಂಠಿತವಾಗಬಹುದು. ಸದನದ ಗೌರವವನ್ನು, ಸಂಸ್ಕೃತಿಯನ್ನು, ಕರ್ನಾಟಕ ಜನರ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಮಾನ್ಯ ನಾರಾಯಣಕುಮಾರ್‌ರವರು ತಾವು ಹೇಳಿದಂಥ ಮಾತು ಏನಿದೆ ಅದನ್ನು ಹಿಂದಕ್ಕೆ ತೆಗೆದುಕೊಂಡು ಕ್ಷಮಾಪಣೆಯನ್ನು ಕೇಳಲಿ, ಇಲ್ಲಿಗೆ ಇದನ್ನು ಮುಕ್ತಾಯ ಮಾಡೋಣ. ಮುಂದೆ ಬರತಕ್ಕ ದಿವಸಗಳಲ್ಲಿ ಯಾವುದೇ ರೀತಿಯಲ್ಲೂ ಕೂಡ ಇಂತಹ ಘಟನೆಗಳು ಆಗದಹಾಗೆ ಎರಡೂ ಕಡೆಯ ಸದಸ್ಯರು ನಡೆದುಕೊಳ್ಳುವ ಹಾಗೆ ನಾನು ಎಲ್ಲರಲ್ಲೂ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

(ಪ್ರೇಕ್ಷಕರ ಗ್ಯಾಲರಿಯಿಂದ ಚಪ್ಪಾಳೆ)

ಶ್ರೀ ಕೆ.ಎಚ್. ರಂಗನಾಥ್——ಚಪ್ಪಾಳೆ ಸ್ವಲ್ಪ ಜಾಸ್ತಿಯಾಯಿತು. ಒಳಗೆ, ಹೊರಗೆ ಚಪ್ಪಾಳೆ ಆಗುತ್ತಿದೆ.

ಚೇರ್ಮನ್.——ಗ್ಯಾಲರಿಯಲ್ಲಿ ಜಾರಾದರೂ ಚಪ್ಪಾಳೆ ಹೊಡೆದರೆ ಕಾನೂನು ರೀತ್ಯಾ ಶಿಕ್ಷೆ ವಿಧಿಸಲಾಗುವುದು. ದಯಮಾಡಿ ಯಾರೂ ಚಪ್ಪಾಳೆ ಹೊಡೆಯಬಾರದು.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಅಧ್ಯಕ್ಷರೇ. ಈ ಸಭೆಯ ಘನತೆ ಗೌರವಗಳು ಯಾವತ್ತೂ ಇರಬೇಕು ಎನ್ನತಕ್ಕಂಥ ವಿಚಾರದಲ್ಲಿ ನಾವು ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಈ ಸಭೆಯ ಘನತೆ ಗೌರವಗಳು ಮೇಲ್ಮಟ್ಟಕ್ಕೆ ಹೋಗಬೇಕು ಎನ್ನುವುದು ನಮ್ಮೆಲ್ಲರ ಆಸೆ. ಇದರ ಬಗ್ಗೆ ಕಿಂಚಿತ್ತೂ ಅನುಮಾನಪಡಬಾರದು. ಸದಸ್ಯರು ಯಾರೇ ಆಗಲಿ, ಮಾನ್ಯ ನಾರಾಯಣಕುಮಾರ್‌ರವರ ನಮ್ಮ ಪಕ್ಷದವರು ಇರಬಹುದು, ಯಾರೇ ಇರಬಹುದು. ಇಲ್ಲಿಯ ನೀತಿನಿಯಮಗಳನುಸಾರವಾಗಿ ಸದನದ ಘನತೆ ಗೌರವಗಳನ್ನು ಮಾನ್ಯ ಸದಸ್ಯರು ಕಾಪಾಡಿಕೊಂಡು, ನಾವು ಸತ್ಸಂಪ್ರದಾಯವನ್ನು ಹಾಕತಕ್ಕ ದಿಶೆಯಲ್ಲಿ ನಮ್ಮ ಮಾತು ಅತೀ ಸ್ಪಷ್ಟವಾಗಿ ಇರಬೇಕು. ಇಲ್ಲದೇಹೋದರೆ ನಾವೂ ಕೂಡ ತಪ್ಪು ಮಾಡುತ್ತೇವೆ ಎನ್ನತಕ್ಕ ಭಾವನೆ ಇಟ್ಟುಕೊಳ್ಳಬೇಕಾಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ನಾನೂ ಇದ್ದೆ ಅವರು ಆ ರೀತಿ ಹೇಳಿದ್ದಾರೆಂದು ಹೇಳಿದರು. ಅದು ಒಳ್ಳೆಯದಲ್ಲ. ಇವತ್ತು ಸಚಿವರು ಇರಬಹುದು, ಸದಸ್ಯರು ಇರಬಹುದು ಯಾರೇ ಇರಬಹುದು. ಇಂತಹ ವಿಚಾರಗಳು ಬಂದಾಗ ಸಾಮಾನ್ಯವಾಗಿ ವಾಗ್ಯುದ್ಧ ನಡೆಯುತ್ತದೆ ಅದಕ್ಕೂ ಕೂಡ ಎಲ್ಲೆ ಇದೆ, ಒಂದು ಮಿತಿ ಇದೆ. ಅದನ್ನು ಮೀರುವಂಥದ್ದಲ್ಲ, ನಮ್ಮ ವಿಚಾರಧಾರೆಯನ್ನು ಅದಕ್ಕೆ ಬಲಿ ಕೊಡುವುದು ಸರಿಯಲ್ಲ, ಬಲಿ ಕೊಟ್ಟರೆ ನಮ್ಮದೇನು ಉಳಿಯುತ್ತದೆ, ಎಲ್ಲರದ್ದೂ ಹೊರಟುಹೋಗುತ್ತದೆ. ಮಾನ್ಯ ವಿರೋಧಪಕ್ಷದ ನಾಯಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ತಾವೂ ಕೂಡ ಪ್ರತಿಬಿಂಬಿಸತಕ್ಕ ಮಾತನ್ನು ಆಡಿದ್ದೀರಿ ಎನ್ನತಕ್ಕ ನಂಬಿಕೆ ಇದೆ.

3–30 P.M.

ನಮ್ಮ ಪಕ್ಷದ ಪರವಾಗಿ ಸ್ಪಷ್ಟಪಡಿಸುತ್ತಿದ್ದೇನೆ. ಈ ಸದನದಲ್ಲಿ ಅವಾಚ್ಯ ಶಬ್ದವನ್ನು ಉಪಯೋಗಿಸಿ ಎಲ್ಲರ ಮನಸ್ಸನ್ನು ಶ್ರೀ ನಾರಾಯಣ ಕುಮಾರ್‌ರವರು ಕಲಕಿದ್ದಾರೆ ಎನ್ನುವ ಅಭಿಪ್ರಾಯ ಬಂದಿದೆ. ಆದರೆ ಅವರು ಹೇಳಿದರು ಎನ್ನುವ ಪದ ನನಗೆ ಕೇಳಿಸಲಿಲ್ಲ ದಯವಿಟ್ಟು ಕ್ಷಮಿಸಬೇಕು. ಆಗ ನಾನು ಎದ್ದು ನಿಂತಿದ್ದೆ, ಧ್ವನಿವರ್ಧಕವನ್ನು ಕಿವಿಗೆ ಇಟ್ಟುಕೊಂಡಿರಲಿಲ್ಲ. ಆದುದರಿಂದ ಅವರು ಏನು ಹೇಳಿದರೋ ನನಗಂತೂ ಕೇಳಿಸಲಿಲ್ಲ. ಆದರೆ ಅವರೇನು ಮಾತನ್ನು ಹೇಳಿದಾರೆ ಅದು ಒಳ್ಳೆಯದಲ್ಲ. ಅದು ಶ್ರೀ ರಘುಪತಿಯವರನ್ನು ಕುರಿತೇ ಆಡಿರಲಿ ಮತ್ತೆ ಯಾರನ್ನೇ ಕುರಿತು ಆಡಿರಲಿ ಅದು ನಮಗೆ ಅನ್ವಯವಾಗುತ್ತದೆ ಎನ್ನುವ ಪ್ರಜ್ಞೆಯಿಂದ ನಾವು ಮಾತನಾಡಬೇಕಾಗುತ್ತದೆ. ನಾವು ಹೊರಗಡೆ ಮಾತನಾಡಿದ ಹಾಗೆ ಇಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಶಬ್ದಗಳ ಪ್ರಯೋಗ ಮಾಡುವಾಗ ಸಂಪೂರ್ಣವಾಗಿ ನಮ್ಮ ನಾಲಿಗೆಯ ಮೇಲೆ ಹತೋಟಿಯನ್ನಿಟ್ಟು ಕೊಂಡಿರಬೇಕಾಗುತ್ತದೆ. ಆದುದರಿಂದ ನಾನು ಪುನಃ ಸದಸ್ಯರಾದ ಶ್ರೀ ನಾರಾಯಣ ಕುಮಾರ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಅವರು ಅದನ್ನು ವಾಪಸ್ಸು ತೆಗೆದುಕೊಂಡು ಕ್ಷಮಾಪಣೆ ಕೇಳಬೇಕು, ಇಲ್ಲದಿದ್ದರೆ ಆ ಶಬ್ದವನ್ನು ತೆಗೆದು ಹಾಕುವುದು ಬಿಡುವುದು ನಿಮಗೆ ಬಿಟ್ಟಿದ್ದು, ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಶ್ರೀ ನಾರಾಯಣ ಕುಮಾರ್‌ರವರು ಈ ಸದನಕ್ಕೆ ಹೊಸಬರು ಇರಬಹುದು ಇಲ್ಲವೇ ಹಳಬರು ಇರಬಹುದು, ಈಗ ನಮಗೆ ಹಳಬರಿಗೆ ಹೊಸ ನಿಯಮಾವಳಿಗಳು ಜಾರಿಗೆ ಬಂದಿರತಕ್ಕದ್ದು ಗೊತ್ತಿಲ್ಲ. ಆದುದರಿಂದ ನಾವು ನಿಯಮಾವಳಿಗಳನ್ನು ತಿಳಿದುಕೊಂಡು ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿ ಬರುತ್ತದೆ. ಆದುದರಿಂದ ಮಾನ್ಯ ಸದಸ್ಯರೇನು ಶಬ್ದವನ್ನು ಪ್ರಯೋಗ ಮಾಡಿದ್ದಾರೆ, ಅದು ಶ್ರೀ ರಘುಪತಿಯವರ ಮೇಲೆಯೋ ಇರಬಹುದು ಮತ್ತೊಬ್ಬರ ಮೇಲೆಯೋ ಇರಬಹುದು ಆ ರೀತಿ ಪ್ರಯೋಗ ಮಾಡಿರತಕ್ಕದನ್ನು ಹಿಂದಕ್ಕೆ ತೆಗೆದುಕೊಂಡು ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡುವುದು ಒಳ್ಳೆಯದು. ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ......

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ವಿಚಾರ ಮುಗಿದು ಹೋಗಲಿ ಆ ಮೇಲೆ ನೀವು ಬೇರೆ ವಿಷಯವನ್ನು ಪ್ರಸ್ತಾಪ ಮಾಡುವಿರಂತೆ, ಮೊದಲು ಪಾಯಿಂಟ್ ಆಫ್‌ಆರ್ಡರ್ ಇದೆ ಅದು ಮುಗಿದು ಹೋಗಲಿ.

ಶ್ರೀ ಆರ್.ಎಲ್. ಜಾಲಪ್ಪ.--ಶ್ರೀ ನಾರಾಯಣ ಕುಮಾರ್‌ರವರ ವಿಚಾರ ಮೊದಲು ತೀರ್ಮಾನವಾಗಲಿ.

ಶ್ರೀ ಎಸ್. ಬಂಗಾರಪ್ಪ.--ತಾವು ಹೇಳುವುದು ಅರ್ಥವಾಯಿತು, ಮಿಕ್ಸ್ ಅಪ್ ಮಾಡುವುದು ಬೇಡ, ಈಗ ನಡೆದಿರತಕ್ಕಂಥ ಘಟನೆಯನ್ನು ಮರೆಮಾಚಿಡಬೇಕೆಂದು ಏನೂ ನಾನು ಹೇಳುತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ಆದುದರಿಂದ ಇದು ಮುಗಿದು ಹೋಗಲಿ ಆ ಮೇಲೆ ಬೇರೆ ವಿಚಾರಕ್ಕೆ ಹೋಗೋಣ......

ಛೇರ್ಮನ್.—ಈ ವಿಷಯ ಮುಗಿದು ಹೋಗಲಿ......

ಶ್ರೀ ಎಂ.ಎಸ್. ಕೃಷ್ಣನ್.—ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹಲವಾರು ಜನ ಮಾತನಾಡಿ ಅಭಿಪ್ರಾಯವನ್ನು ತಿಳಿಸಿದ್ದಾರೆ. ಆದುದರಿಂದ ಇದು ಮೊದಲು ಮುಗಿದು ಹೋಗಲಿ ಆ ನಂತರ ಬೇರೆ ವಿಷಯ ತೆಗೆದುಕೊಳ್ಳೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರು ಏನು ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ಸಂಪೂರ್ಣವಾಗಿ ನನ್ನ ಸಹಮತವಿದೆ. ಈ ಸದನದ ಸದಸ್ಯರು ನಿರ್ಭಯವಾಗಿ ತಮ್ಮ ಕರ್ತವ್ಯವನ್ನು ಪಾಲನೆ ಮಾಡುವುದಲ್ಲಿ ಯಾವುದೇ ರೀತಿಯ ಅಡ್ಡಿ ಅಡಚಣೆಯನ್ನು ಯಾರೂ ಉಂಟು ಮಾಡಕೂಡದು. ನಾವು ಇಲ್ಲಿ ಕೆಲವು ವಿಚಾರಗಳನ್ನು ವ್ಯಕ್ತಮಾಡುವಾಗ, ಸರ್ಕಾರವನ್ನು ಟೀಕೆ ಮಾಡುವಾಗ ಭಾಷೆ ಬರುತ್ತದೆ. ಚುಚ್ಚು ಮಾತುಗಳು ಬರುತ್ತವೆ. ಮೊನಚಾದ ರೀತಿಯಲ್ಲಿ ಹೇಳಬೇಕಾಗುತ್ತದೆ. ನಾವು ಈ ಕಡೆ ಅಧಿಕಾರದಲ್ಲಿರತಕ್ಕವರು ಹೆಚ್ಚಿನ ಸಂಯಮದಿಂದ ಎಲ್ಲವನ್ನೂ ಕೇಳಬೇಕಾಗುತ್ತದೆ ಈ ಮಾತನ್ನು ಸಹ ಸ್ಪಷ್ಟಪಡಿಸಿ ಹೇಳುತ್ತಿದ್ದೇನೆ. ನಾವು ಸಂಯಮದಿಂದ ಕೇಳಿಕೊಂಡು ಅದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕಾಗುತ್ತದೆ. ನಾವು ಇಲ್ಲಿ ವಿಧಿನಿಯಮಗಳನ್ನು ಅನುಸರಿಸಿ ಸಂಪೂರ್ಣವಾಗಿ ಶಾಂತವಾದ ವಾತಾವರಣದಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕಾಗಿರುತ್ತದೆ. ಇವತ್ತು ಏನು ವಿರೋಧ ಪಕ್ಷದಲ್ಲಿರತಕ್ಕ ಅನೇಕ ಹಿರಿಯ ಸದಸ್ಯರುಗಳಿದ್ದಾರೆ ಅವರಿಗೆ ಇದೆಲ್ಲಾ ಚೆನ್ನಾಗಿ ಗೊತ್ತಿದೆ, ಅವರೂ ಸಹ ಅಧಿಕಾರವನ್ನು ಅನುಭವಿಸಿರುವುದರಿಂದ ಅವರೂ ಸಹ ಕಿರಿಯ ಸದ್ಯರಿಗೆ ಸಂಯಮದಿಂದ ವರ್ತಿಸುವ ಹಾಗೆ ಮನವಿ ಮಾಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ, ಮತ್ತೆ ಮುಖ್ಯಮಂತ್ರಿಗಳವರು ಮತ್ತು ವಿರೋಧ ಪಕ್ಷದ ನಾಯಕರವರು ಇಲ್ಲಿ ಮಾತನಾಡುವಾಗ ನಾವು ಇಲ್ಲಿ ಕೆಲವೊಂದು ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದೇವೆ. ಮುಖ್ಯ ಮಂತ್ರಿಗಳಾಗಲೀ ಇಲ್ಲವೇ ವಿರೋಧ ಪಕ್ಷದ ನಾಯಕರವರಾಗಲೀ ಮಾತನಾಡುವಾಗ ಆ ಕಡೆ ಮತ್ತು ಈ ಕಡೆಯ ಸದಸ್ಯರುಗಳು ಗೌರವ ಕೊಟ್ಟು ವಿಚಾರವನ್ನು ಕೇಳಬೇಕಾಗುತ್ತದೆ. ಆ ಒಂದು ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಮಾನ್ಯ ಶ್ರೀ ನಾರಾಯಣ ಕುಮಾರ್‌ರವರು ಬಹಳ ಉತ್ಸಾಹಿಗಳಾಗಿದ್ದಾರೆ. ಮೊನ್ನೆ ದಿವಸ ನಡೆದಂಥ ಘಟನೆಯ ಬಗ್ಗೆ ಹೇಳುವುದು ಬೇಡ ಆದರೆ ನಿನ್ನೆಯ ದಿವಸ ನಮ್ಮ ಅಸೆಂಬ್ಲಿಯ ವಾಚ್ ಅಂಡ್ ವಾರ್ಡ್ ಆ ಬಾಗಿಲಿನಲ್ಲಿ ಏನು ಇದ್ದಾರೆ, ಅವರಿಗೆ ತಲೆಯ ಮೇಲೆ ಹೊಡೆದು, ಕೆನ್ನೆಗೆ ಹೊಡೆದು ಆ ಹೆಣ್ಣುಮಗಳನ್ನು ಆವತ್ತಿನ ದಿವಸ ಅವರು ಒಳಗಡೆ ಕರೆದುಕೊಂಡು ಬಂದಿದ್ದಾರೆ. ಆ ಘಟನೆಯ ಬಗ್ಗೆ ವಿಚಾರಣೆ ನಡೆಯುತ್ತಿದೆ. ನಾವು ಇಲ್ಲಿ ಶಾಸಕರಾಗಿರತಕ್ಕವರು ಕೈ ಎತ್ತುವ ಮಟ್ಟಕ್ಕೆ ಹೋದರೆ ಇನ್ನು ನಾವು ಯಾವ ರೀತಿಯಾಗಿ ಜನತಾ ಪಕ್ಷದವರಾಗಿ ಕೆಲಸ ಮಾಡುವುದಕ್ಕಾಗುತ್ತದೆ ? ಇದನ್ನು ಟೀಕೆ ಮಾಡುವ ದೃಷ್ಟಿಯಿಂದ ಹೇಳುತ್ತಿಲ್ಲ, ನಮ್ಮನ್ನು ನಾವು ತಿದ್ದಿಕೊಳ್ಳಬೇಕಾಗುತ್ತದೆ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶವಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ದಯವಿಟ್ಟು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರವರು ಮತ್ತು ಶ್ರೀ ಬಂಗಾರಪ್ಪನವರು ಹೇಳಿದಂತೆ ಶ್ರೀ ನಾರಾಯಣಕುಮಾರ್‌ರವರೇನು ಒಳಸಬಾರದ ಪದಗಳನ್ನು ಬಳಸಿದ್ದಾರೆ ಅದಕ್ಕಾಗಿ ಅವರು ಬೇಷರತ್ತಾಗಿ ಕ್ಷಮೆಯನ್ನು ಕೇಳಿ, ಅವರು ಬಳಸಿದ ಪದಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ರಘುಪತಿ.—ಸಭಾಧ್ಯಕ್ಷರೇ, ನಾನು ಸುಮಾರು ೬ ವರ್ಷಗಳ ಕಾಲ ವಿಧಾನ ಪರಿಷತ್ತಿನಲ್ಲಿ ಕೆಲಸ ಮಾಡಿದ್ದೇನೆ. ಸರ್ಕಾರದ ಮುಖ್ಯ ಸಚೇತಕನಾಗಿ ಕೆಲಸ ಮಾಡಿದ್ದೇನೆ. ಮತ್ತೆ ವಿರೋಧ ಪಕ್ಷದಲ್ಲಿಯೂ ಕೂತು ಕೆಲಸ ಮಾಡಿದ್ದೇನೆ. ಆ ರೀತಿ ಕೆಲಸ ಮಾಡುವಾಗ ಶ್ರೀಮಾನ್ ಬಂಗಾರಪ್ಪನವರು ಮಂತ್ರಿಗಳಾಗಿದ್ದರು ಮತ್ತು ಶ್ರೀ ವೀರಪ್ಪಮೊಯ್ಲಿಯವರು ಸಹ ಕೆಲವು ಕಾಲ ಮಂತ್ರಿಗಳಾಗಿದ್ದರು. ಆಗ ನಾನು ಮಾತನಾಡುವಾಗ ಬಳಸಿದ ಯಾವುದೇ ಒಂದು ಪದವನ್ನು ಸಹ ಕಡತದಿಂದ ತೆಗೆದು ಹಾಕಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಯಾವುದೋ ಒಂದು ಮುಖ್ಯವಾದ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಪದಗಳನ್ನು ಬಳಕೆ ಮಾಡುವಾಗ ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇ

ಕಾಗುತ್ತದೆ. ಕೆಟ್ಟಮಾತು ಬಾರದಹಾಗೆ ನಾವು ನಾಲಿಗೆಯ ಮೇಲೆ ಹತೋಟಿಯನ್ನಿಟ್ಟುಕೊಂಡು ಮಾತ ನಾಡಬೇಕಾಗಿರುತ್ತದೆ. ಇವತ್ತು ಏನು ನನ್ನ ಸ್ನೇಹಿತರು ನನ್ನ ಆ ಬಗ್ಗೆ ವರ್ಣಿಸಿದ್ದಾರೆ. ಆ ರೀತಿ ಮಾತ ನಾಡುವಾಗ ಈ ಸದನದ ಪರಂಪರೆಯನ್ನು ಕಾಪಾಡಿಕೊಂಡು ಬರತಕ್ಕದ್ದು ನಮ್ಮ ಕರ್ತವ್ಯವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಅವರ ಮಾತಿಗೆ ನಾನು ಧ್ವನಿಗೂಡಿಸುತ್ತೇನೆ. ಇಲ್ಲಿ ಒಂದು ಮಾತು ಹೇಳುತ್ತೇನೆ, ಮೊದಲ ದಿನ ನಡೆದ ಘಟನೆಯಾಗಲೀ ಅಥವಾ ನೆನ್ನೆ ದಿನ ನಡೆದಂಥ ಘಟನೆಯಾ ಗಲಿ ಅಥವಾ ಇವತ್ತು ನಡೆದಂಥ ಘಟನೆಯಾಗಲೀ ಏನಿದೆ ಇದರ ಬಗ್ಗೆ ಪತ್ರಿಕೆಗಳಲ್ಲಿ ಬರುತ್ತಿರುವುದನ್ನು ಓದಿದರೆ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ಮತ್ತು ನಾವು ಇಂಥಾ ಸದನವನ್ನಾದರೂ ಏತಕ್ಕೆ ನಡೆಸುತ್ತಿದ್ದೇವೆಂದು ಅನಿಸುತ್ತಿದೆ. ಇಂಥ ಘಟನೆಗಳು ನಡೆದುಕೊಂಡು ಹೋಗುತ್ತಿದ್ದರೆ ಪ್ರಜಾ ಪ್ರಭುತ್ವದಲ್ಲಿ ಲಕ್ಷಾಂತರ ಜನರು ನಮ್ಮನ್ನು ಯಾವ ಉದ್ದೇಶ ಸಾಧನೆಗಾಗಿ ಆರಿಸಿ ಕಳುಹಿಸಿದ್ದಾರೆ ಅವರ ಮನಸ್ಸಿಗೆ ಬಹಳ ನೋವಾಗುತ್ತದೆ. ನಾವು ಅವರ ಪ್ರತಿ ರೂಪವಾಗಿ ಇಲ್ಲಿ ಕುಳಿತು ಅವರ ಆಶೋತ್ತರ ಗಳನ್ನು ಈಡೇರಿಸದಿದ್ದರೆ ಅವರು ಸಹಿಸುವುದಿಲ್ಲ. ನಿನ್ನೆ ಈ ಸದನದಲ್ಲಿ ನಡೆದ ಘಟನೆಯಿಂದ ನನಗೆ ಬಹಳ ದುಃಖವಾಯಿತು. ಇದೇ ರೀತಿ ಎಷ್ಟು ದಿನ ನಡೆದುಕೊಂಡು ಹೋಗುವುದಕ್ಕಾಗುತ್ತದೆ? ಹೊಸ ಸದಸ್ಯರು ಎಂದು ಹೇಳುತ್ತಾರೆ. ಬೇರೆಯವರು ಹೊಸ ಸದಸ್ಯರಿರಬಹುದು, ಆದರೆ ನಾರಾಯಣ ಕುಮಾರ್‌ರವರು ನಗರಸಭೆಯಲ್ಲಿ ಸದಸ್ಯರಾಗಿ ಕೆಲಸ ಮಾಡಿದವರು; ಅವರಿಗೆ ಸದಸ್ಯರಾಗಿ ಹೇಗೆ ವರ್ತಿಸಬೇಕೆಂಬ ಬಗ್ಗೆ ತಿಳುವಳಿಕೆ ಇದೆ; ಅನುಭವ ಇದೆ. ಅಲ್ಲಿ ಕೂಡ ಕೆಲವು ನಿಯಮಾವಳಿಗಳಿವೆ. ಏನೇ ಆಗಲಿ, ಆ ಪ್ರವೃತ್ತಿ ಒಳ್ಳೆಯದಲ್ಲ. ಆ ರೀತಿ, ಮಾಡಬೇಕೆಂದು ಮಾಡುವುದು ಯೋಗ್ಯವಲ್ಲ. ಯಾವ ಸದಸ್ಯರೇ ಆಗಲಿ ಈಸದನಕ್ಕೆ ಅಗೌರವ ತರತಕ್ಕದ್ದು ಒಳ್ಳೆಯದಲ್ಲವೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಇನ್ನು ಮುಂದೆ ಈ ಸಭೆಗೆ ಅಗೌರವ ತರತಕ್ಕ ಕೆಲಸವನ್ನು ಮಾಡುವುದಿಲ್ಲವೆಂದು ಹೇಳಿ ಬೇಷರತ್ತಾಗಿ ಸದಸ್ಯರು ಕ್ಷಮಾಪಣೆ ಕೇಳಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ನೀವು ಆಡಿರುವ ಪ್ರಶ್ನೆ ಇಲ್ಲ.........

ಶ್ರೀ ಎಂ. ರಘುಪತಿ.—ಸದನದ ಅಭಿಪ್ರಾಯ ಏನೆಂಬುದು ಗೊತ್ತಾಗಿದೆ. ಅದನ್ನು ಮರೆಮಾಚಿ ಮಾತನಾಡುವುದು ವ್ಯಕ್ತಿಗೆ ಅಗೌರವ ತರುತ್ತದೆ ಮತ್ತು ಸಭೆಗೂ ಕುಂದು ತರುತ್ತದೆ. ರಾಜ್ಯದ ಮತ್ತು ರಾಷ್ಟ್ರದ ಗೌರವಕ್ಕೆ ಚ್ಯುತಿ ತರುತ್ತದೆ. ಆದ್ದರಿಂದ ಮಾನ್ಯ ನಾರಾಯಣ ಕುಮಾರ್‌ರವರು ಸದನದ ಅಭಿಪ್ರಾಯಕ್ಕೆ ಮಣಿದು ಬೇಷರತ್ತಾಗಿ ಕ್ಷಮಾಪಣೆ ಕೇಳಿ ಆ ಮಾತನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡತಕ್ಕ ಸಂದರ್ಭದಲ್ಲಿ ಉದ್ರೇಕ ವಾತಾವರಣ ಇತ್ತು. ಆ ಸಂದರ್ಭದಲ್ಲಿ, ಮಾತನಾಡಬೇಕಾಯಿತು. ನಮ್ಮ ಕ್ಷೇತ್ರದ ಹೆಣ್ಣುಮಗಳು ಸುಧಾ ಎಂಬುವವಳ ಮೇಲೆ ಅತ್ಯಾಚಾರ ನಡೆಯಿತು.

(ಗೊಂದಲ)

ಛೇರ್ಮನ್.—ಮೊದಲು ಕ್ಷಮಾಪಣೆ ಕೇಳಿಕೊಳ್ಳಿ; ಆಮೇಲೆ ಏನಿದ್ದರೂ ಹೇಳಿ. ಸದನದ ಕಾರ್ಯ ಕ್ರಮಗಳು ದೇಶದ ದೃಷ್ಟಿಯಿಂದ ಮತ್ತು ನಮ್ಮ ದೃಷ್ಟಿಯಿಂದ ಬಹಳ ಪ್ರಮುಖವಾಗಿವೆ. ಆದ್ದರಿಂದ ಇದಕ್ಕಾಗಿ ಕಾಲವನ್ನು ವ್ಯಯ ಮಾಡದೆ ಸಭೆ ಏನು ಸೂಚನೆ ಕೊಟ್ಟಿದೆ ಅದಕ್ಕೆ ಮನ್ನಣೆ ಕೊಡಬೇಕೆಂದು ಮತ್ತೆ ಸೂಚಿಸಬಯಸುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಅದರ ಬಗ್ಗೆ ಏನು ಇಲ್ಲ.........

ಶ್ರೀ ಆರ್. ಎಲ್. ಜಾಲಪ್ಪ.—ವಿವರಣೆ ಕೊಡುವುದು ಬೇಕಾಗಿಲ್ಲ.

ಛೇರ್ಮನ್.—ನಾಯಕರು ಏನು ಹೇಳಿದ್ದಾರೆ ಅದನ್ನು ಗೌರವಿಸುವುದು ನಿಮಗೂ ಗೌರವ ಮತ್ತು ಸದನಕ್ಕೂ ಗೌರವ.

ಶ್ರೀ ಜಿ. ನಾರಾಯಣಕುಮಾರ್.—ಗೌರವಿಸುತ್ತೇನೆ; ಅದರ ಬಗ್ಗೆ ಹಿಂದು ಮುಂದು ಹೋಗುವು ದಿಲ್ಲ, ಈಗ ನಾನೇನು ಅನಾವಶ್ಯಕವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಛೇರ್ಮನ್ .--ಕ್ಷಮಾಪಣೆ ಕೇಳಿ ವಾಪಸ್ಸು ತೆಗೆದುಕೊಳ್ಳುತ್ತೀರೋ ಇಲ್ಲವೋ?

ಶ್ರೀ ಜಿ. ನಾರಾಯಣ ಕುಮಾರ್.—ಅದಕ್ಕೂ ಅವಕಾಶ ಕೊಡದೆ ಇದ್ದರೆ ಹೇಗೆ?

ಛೇರ್ಮನ್.--ದಯಮಾಡಿ. ಸೂಚನೆ ಕೊಟ್ಟಿರುವುದನ್ನು ಪಾಲನೆ ಮಾಡಿ. ನಿಮ್ಮ ಗೌರವ ದೃಷ್ಟಿಯಿಂದ, ಸಭೆ ಏನು ಸೂಚನೆ ಕೊಟ್ಟಿದೆ ಅದನ್ನು ಪಾಲಿಸಬೇಕು.

ಶ್ರೀ ಜಿ. ನಾರಾಯಣ ಕುಮಾರ್.--ನಾನು ಕ್ಷಮೆ ಕೇಳಿದ ಮೇಲೆ ಮಾತನಾಡುವುದಕ್ಕೆ ಅವಕಾಶ ಇದೆಯೆ?

ಛೇರ್ಮನ್ —ಈಗಿರತಕ್ಕ ನಿಯಮವನ್ನು ಪಾಲನೆ ಮಾಡಿ.

SRI RAJBHAU SHANKAR RAO MANE.--Sir, the Speaker has given his ruling and the concerned member has been asked to apologise. He should apologise or he shou'd be dealt in accordance with rules. No speeches intervening the proceedings are allowed.

SRI S, BANGARAPPA.—Where it is stated so?

SRI RAJBHAU SHANKAR RAO MANE —Sir, the honble member is attempting to justify his actions. That should not be allowed.

SRI R. L. JALAPPA —He should not make any explanation.

ಶ್ರೀ ಎಸ್. ಬಂಗಾರಪ್ಪ —ಇದರಲ್ಲಿರತಕ್ಕ ಪ್ರಶ್ನೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ತಾವು ಈಗ ಸದಸ್ಯರನ್ನು ಬೇಸರತ್ತಾಗಿ ಕ್ಷಮಾಪಣೆ ಕೇಳಿ ಎಂದು ಹೇಳಿದ್ದೀರಿ. ಅದರ ಮೇಲೆ ವಾದ ಏಕೆ ? ತಮ್ಮ ರೂಲಿಂಗನ್ನು ಡಿಫೆಂಡ್ ಮಾಡುವುದಕ್ಕೆ ಅಧಿಕಾರ ಇಲ್ಲ. ದಯುವಿಟ್ಟು ಅವರು ಅಪಾಲಜಿ ಕೇಳದಿದ್ದರೆ ಮುಂದಿನ ಕ್ರಮ ಏನು ಎಂಬುದನ್ನು ಸ್ಪೆಸಿಫಿಕ್ ಆಗಿ ಹೇಳಬೇಕು

ಶ್ರೀ ಎಸ್. ಬಂಗಾರಪ್ಪ.- ಮಾನ್ಯ ಜಾಲಪ್ಪನವರು ಹೇಳಿರತಕ್ಕ ವಿಚಾರವನ್ನು ಕೇಳಿದ್ದೇನೆ. ತಾವು ಒಂದು ತೀರ್ಪನ್ನು ಕೊಟ್ಟಮೇಲೆ ಅದಕ್ಕೆ ತಲೆಬಾಗಿ ನಡೆದುಕೊಳ್ಳತಕ್ಕದ್ದು ಎಲ್ಲ ಸದಸ್ಯರ ಕರ್ತವ್ಯ. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಅವರು ಏನು ಹೇಳುತ್ತಿದ್ದಾರೆಂದರೆ, ನಿಮ್ಮ ಅಭಿಪ್ರಾಯಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತೇವೆ.

ಒಬ್ಬರು ಮಾನ್ಯ ಸದಸ್ಯರು.—ಇಡೀ ದಿವಸ ಇವರು ಮಾತನಾಡಿದ್ದನ್ನೇ ಮತ್ತೆ ಮತ್ತೆ ಕೇಳುತ್ತಿರಬೇಕೆ ?

ಶ್ರೀ ಎಸ್. ಬಂಗಾರಪ್ಪ.—ಹಾಗಾಗುವುದಿಲ್ಲ, ಏತಕ್ಕೆ ಎಂಬುದನ್ನು ಹೇಳುತ್ತೇನೆ. ಅಧ್ಯಕ್ಷರ ತೀರ್ಪು ಕೊಟ್ಟಮೇಲೆ ಅದಕ್ಕೆ ಸದಸ್ಯರು ತಲೆಬಾಗಲೇಬೇಕು. ಒಂದು ಸಾರಿ ಇದಕ್ಕೆ ಏನು ಹೇಳುತ್ತಾರೆಂಬುವುದನ್ನು ಕೇಳುವ ಸಂಪ್ರದಾಯ ಹಿಂದಿನಿಂದ ನಡೆದುಕೊಂಡು ಬಂದಿದೆ. ನಾನು ಸಂಧಾ ಚರಿತ್ರೆ ಬಗ್ಗೆ ಹೇಳುವುದಿಲ್ಲ, ಇಲ್ಲಿ ನಡೆದಿರತಕ್ಕ ಘಟನೆ ಬಗ್ಗೆ ಮಾತ್ರ ಹೇಳುತ್ತೇನೆ. ನಾಳೆ ದಿವಸ ನಿಮ್ಮ ಮೇಲೆ ಕೂಡ ಇಂಥ ಆರೋಪ ಬರಬಹುದು. ಅದಕ್ಕೂ ಕೂಡ ಸಾಧ್ಯವಾಗುವುದಿಲ್ಲ ವೆಂದರೆ ಬಹಳ ಕಷ್ಟವಾಗುತ್ತದೆ.

ಒಬ್ಬರು ಮಾನ್ಯ ಸದಸ್ಯರು.—ಈ ಸದನವನ್ನು ನಾನು ನಾಲ್ಕೈದು ದಿನಗಳಿಂದ ನೋಡುತ್ತಿದ್ದೇನೆ. ಹಿನೇ ದಿವಸ ನೋಡಿದರೆ, ಬಹುಶಃ ನಾವು ಇಟ್ಟುಕೊಂಡಿದ್ದ ಆಸೆ ಎಲ್ಲ ನಿರಾಸೆಯಾಗಿದೆ; ನಾವು ಇಟ್ಟುಕೊಂಡಿದ್ದ ಭರವಸೆಗಳೆಲ್ಲ ಹುಸಿಯಾಗಿವೆ ಇಲ್ಲಿ ಅನೇಕ ಹಿರಿಯ ಸದಸ್ಯರಿದ್ದಾರೆ, ತಿಳುವಳಿಕಸ್ಥರು ಇದ್ದಾರೆ, ಇಂಥ ಕಡೆ ನಾವು ನಡೆದು ಕೊಳ್ಳತಕ್ಕ ದಾರಿ ಚೆನ್ನಾಗಿ ಕಾಣುವುದಿಲ್ಲ. ನಾನು ಮಾನ್ಯ ಮೊಯಿಲಿಯವರಿಗೆ, ಬಂಗಾರಪ್ಪನವರಿಗೆ ಮತ್ತು ರಾಮಕೃಷ್ಣ ಹೆಗಡೆಯವರಿಗೆ ಹೇಳುತ್ತಿದ್ದೇನೆ, ಈ ಸದನದ ಗಂಭೀರತೆ ವಿಷಯದಲ್ಲಿ, ಮೌಲ್ಯಗಳನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಕೆಲಸ ಮಾಡುವ ಆಸೆ ನಮಗೆಲ್ಲರಿಗೂ ಇದೆ. ಆದ್ದರಿಂದ ಮಾನ್ಯ ನಾರಾಯಣ ಕುಮಾರ್ ಅವರು

ಮಾಡಿದ್ದು ಒಳ್ಳೆಯದೇ, ಕೆಟ್ಟದ್ದೇ ಎಂದು ಡಿಫೆಂಡ್ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಯಾರ ಬಗ್ಗೆಯೇ ಆಗಲಿ ವಕಾಲತ್ತು ಮಾಡುವ ಕೆಲಸ ನಿಲ್ಲಿಸಬೇಕು. ಈಗಿರುವ ಪ್ರಶ್ನೆ ಇಷ್ಟೆ. ಮಾನ್ಯ ಸದಸ್ಯರು ಸದನಕ್ಕೆ ಅಗೌರವ ತೋರಿದ್ದಾರೆ ಎಂದು ತೀರ್ಮಾನವಾಗಿದೆ. ಅವರು ಕ್ಷಮೆ ಕೇಳುವುದಕ್ಕೆ ಸಿದ್ಧವಾಗಿದ್ದರೆ ಕೇಳಿಕೊಳ್ಳಲಿ, ಇಲ್ಲದಿದ್ದರೆ ಬೇರೆ ಕ್ರಮ ತೆಗೆದುಕೊಳ್ಳಬಹುದು.

ಛೇರ್ಮನ್.—ಮಾನ್ಯ ಸದಸ್ಯರಾದ ನಾರಾಯಣ ಕುಮಾರ್ ಅವರು ಸಭೆಯ ಘನತೆ ಗೌರವಗಳನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ನಾನು ಕೊಟ್ಟಿರುವ ಸೂಚನೆಯನ್ನು ಪಾಲಿಸಿದರೆ ಒಳ್ಳೆಯದು.

ಶ್ರೀ ಜಿ. ನಾರಾಯಣ ಕುಮಾರ್.—ಸಭೆಗೆ ಅಪಮಾನ ಆಗಿದ್ದರೆ ನಾನು ತಲೆತಗ್ಗಿಸುವುದಕ್ಕೆ ತಯಾರಿದ್ದೇನೆ. ಸಭೆಗಿಂತ ಅತಿಶಯವಾದುದು ಏನೂ ಇಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ಇದೇನು ಹುಡುಗಾಟಿಕೆಯೇ ? ಸದನ ಎಂದರೆ ಹುಡುಗಾಟಿಕೆ ಆಗಿದೆಯೆಲಿ. ನಾನು ಬಳಸಿದ ಶಬ್ದದ ಹಿನ್ನೆಲೆಯನ್ನು ಹೇಳುತ್ತಿದ್ದೇನೆ.

ಛೇರ್ಮನ್.—ಬೇರೆ ಕಾರ್ಯಕ್ರಮ ಇದೆ. ಅಷ್ಟಕ್ಕೇ ಮುಗಿಸಿ.

ಶ್ರೀ ಜಿ. ನಾರಾಯಣ ಕುಮಾರ್.—ಒಂದು ನಿಮಿಷ ಅವಕಾಶ ಕೊಡಿ.

ಛೇರ್ಮನ್.—ಸ್ವಚ್ಛಂದ ಪ್ರವೃತ್ತಿಗೆ ಅವಕಾಶ ಇಲ್ಲ. ದಯಮಾಡಿ ನಾನು ಸೂಚನೆ ಕೊಟ್ಟಂತೆ ಪಾಲನೆ ಮಾಡಿ.

ಶ್ರೀ ಜಿ. ನಾರಾಯಣ ಕುಮಾರ್.—ಈ ಸಂದರ್ಭದಲ್ಲಿ ನಾನು ತಲೆಬಾಗುವಾಗ ನನ್ನ ಕ್ಷೇತ್ರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದು ಮಾನ ಮರ್ಯಾದೆಯ ಪ್ರಶ್ನೆ. ಮಾನಾಪಹರಣದ ಪ್ರಶ್ನೆ ಬಂದಾಗ ಅದಕ್ಕೆ ಅವಕಾಶ ಕೊಡುತ್ತಿಲ್ಲ ಎಂದರೆ.

(ಗೊಂದಲ)

ಛೇರ್ಮನ್.—ನಿಮ್ಮ ಕ್ಷೇತ್ರದ ವಿಷಯ ಮಾತನಾಡುವುದಕ್ಕೆ ಆಮೇಲೆ ಅವಕಾಶ ಕೊಡುತ್ತೇನೆ. ಈಗ ಇದನ್ನು ಮುಗಿಸಿ,

ಶ್ರೀ ಜಿ. ನಾರಾಯಣಕುಮಾರ್.—ನನಗೆ ಅವಕಾಶ ಕೊಡುತ್ತಿಲ್ಲವಲ್ಲ.

ಛೇರ್ಮನ್.—ನನ್ನ ಸೂಚನೆ ಪಾಲನೆ ಮಾಡುವುದಕ್ಕೆ ನಿಮಗೆ ಸಾಧ್ಯವಿದೆಯೋ ಇಲ್ಲವೊ ? ಇಲ್ಲದಿದ್ದರೆ ಸಭೆ ಮುಂದಿನ ಕ್ರಮ ಕೈಗೊಳ್ಳಬೇಕಾದೀತು. ನಿಮಗೆ ಅವಕಾಶ ಕೊಡಬೇಕೋ ಬಿಡಬೇಕೋ ಎಂಬುದು ನನಗೆ ಸೇರಿದ್ದು, ನೀವು ಹೇಳುವುದಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಪರಿಸ್ಥಿತಿ ವಿಕೋಪದಲ್ಲಿದ್ದಾಗ, ಉದ್ರೇಕದಲ್ಲಿ ನಾನು ಮಾನ್ಯ ಮಂತ್ರಿವರ್ಯರಾದ ಶ್ರೀ ರಘುಪತಿಯವರ ಬಗ್ಗೆ ತೊದಲುನುಡಿಯನ್ನು ಆಡಿರಬಹುದು.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್.—ನಿಮ್ಮನ್ನು ಅಳಿಸುವುದು, ನಗಿಸುವುದು ಎಲ್ಲಾ ನನಗೆ ಗೊತ್ತಿದೆ. ನಿಮ್ಮ ಮನೆಯ ಹೆಣ್ಣುಮಕ್ಕಳಿಗೆ ಏನಾದರೂ ಆಗಿದ್ದರೆ ನೀವು ಏನು ಮಾಡುತ್ತಿದ್ದಿರಿ ?

(ಗೊಂದಲ)

ಛೇರ್ಮನ್.—ಸಭೆ ಬೇರೆ ಕ್ರಮವನ್ನು ಜರುಗಿಸಬೇಕಾಗುತ್ತದೆ. ನೀವು ಸೂಚನೆ ಪಾಲನೆ ಮಾಡುತ್ತೀರೋ ಇಲ್ಲವೋ ಹೇಳಿ.

ಶ್ರೀ ಜಿ. ನಾರಾಯಣ ಕುಮಾರ್.—ಕ್ಷಮಾಪಣೆ ಕೇಳುವುದಕ್ಕೆ ಅವಕಾಶ ಕೊಡದಿದ್ದರೆ ನಾನೇನು ಮಾಡಲಿ ?

ಛೇರ್ಮನ್.—ಬೇರೆ ವಿವರಣೆ ಕೊಡುವುದು ಬೇಕಾಗಿಲ್ಲ. ಕ್ಷಮಾಪಣೆ ಕೇಳಿ.

ಶ್ರೀ ಜಿ. ನಾರಾಯಣ ಕುಮಾರ್.—ಕೇಳುತ್ತೇನೆ. ಉದ್ರೇಕದ ಸಂದರ್ಭದಲ್ಲಿ ಮಾನ್ಯ ರಘುಪತಿಯವರಿಗೆ ಒಂದು ಶಬ್ದವನ್ನು ಉಪಯೋಗಿಸಿದೆ. ನೋವಿನಿಂದ ಅದನ್ನು ನುಡಿದಿರಬಹುದು. ಒಂದು ವೇಳೆ ಇದರಿಂದ ಅವರಿಗೇನಾದರೂ ನೋವಾಗಿದ್ದರೆ ಸಂಪೂರ್ಣವಾಗಿ ನನ್ನ ಮಾತುಗಳನ್ನು ವಾಪಸ್ ತೆಗೆದುಕೊಳ್ಳುತ್ತಿದ್ದೇನೆ.

(ಗೊಂದಲ.)

ಶ್ರೀ ಜಿ. ನಾರಾಯಣ ಕುಮಾರ್.—ಸಭೆಯ ಕ್ಷಮಾಪಣೆ ಕೇಳಿ ನನ್ನ ಮಾತುಗಳನ್ನು ವಾಪಸ್ ಪಡೆದಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನೋವಾಗಿದ್ದರೆ ವಾಪಸ್ ತೆಗೆದುಕೊಳ್ಳುತ್ತೇನೆ ಎಂದು ಕಂಡೀಷನಲ್ ಆಗಿ ಅಪಾಲಜಿ ಕೇಳುವುದು ಬೇಕಾಗಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ವಾಪಸ್ ಪಡೆದಿದ್ದೇನೆ ಎಂದು ಹೇಳುತ್ತಿದ್ದಾರಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಹೀಗೆ ಮಾಡಿದರೆ ಜನ ನಮ್ಮನ್ನು ಹರಾಜು ಹಾಕುತ್ತಾರೆ. ತಮಿಳುನಾಡಿನಲ್ಲಿ ಆದಂತಾಗುತ್ತದೆ.

ಛೇರ್ಮನ್.—ಕ್ಷಮಾಪಣೆ ಕೇಳಿಯಾಗಿದೆ. ಈಗ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಉಪಾಧ್ಯಕ್ಷರೆ, ನಾನೇನಾದರೂ ತಪ್ಪು ಮಾತನಾಡಿದ್ದೇನೇನೋ ಎಂದು ನನಗನ್ನಿಸಿತು. ಆದ್ದರಿಂದ ದಯವಿಟ್ಟು ನಾನು ಏನು ಮಾತನಾಡಿದ್ದೇನೆಂಬುದನ್ನು ಕಡತದಲ್ಲಿ ನೋಡಬೇಕು. ಕಡತವನ್ನು ತರಿಸಿ ನಾನು ಮಾತನಾಡಿದ ನಕಲನ್ನು ಮಾನ್ಯ ಬಂಗಾರಪ್ಪನವರಿಗೆ ಮತ್ತು ವಿರೋಧಪಕ್ಷದ ನಾಯಕರಿಗೆ ಕೊಡಬೇಕು.

ಶ್ರೀ ಕೆ. ಹೆಚ್. ರಂಗನಾಥ್.— ಅವರು ಏನೂ ಆಕ್ಷೇಪಣೆ ಎತ್ತಿಲ್ಲವಲ್ಲ.

SRI RAMAKRISHNA HEGDE.—Not that he has taken any objection but I wanted you to see that. ನಾನು ಅಷ್ಟು ಹೇಳಿದ್ದು ನಿಜ. ಇವತ್ತು ನನ್ನ ಮನಸ್ಸಿನಲ್ಲಿ ತಳಮಳ ಇಲ್ಲದಿದ್ದರೆ ಅದೇ ಘಟನೆಗೆ ಸಂಬಂಧಪಟ್ಟಹಾಗೆ ಮುಂದೆ ತಳಮಳ ಆಗುವುದಕ್ಕೆ ಸಾಧ್ಯವಿದೆ ಇವತ್ತು ಸುಧಾರಿಸುವುದಕ್ಕೆ ಅರ್ಹತೆ ಇಲ್ಲ ಎಂದು ನಾನು ತಿಳಿದುಕೊಳ್ಳುವುದಿಲ್ಲ. ಮುಂದೆ ಸುಧಾರಿಸುತ್ತದೆ. ಒಂದೊಂದು ಸಂದರ್ಭ ಬಂದಾಗ ಸುಧಾರಿಸಬಹುದು ಎಂದು ನಾನು ಹೇಳಿದೆನೇ ಹೊರತು ಇನ್ನೇನೂ ಹೇಳಲಿಲ್ಲ. ಮಾನ್ಯ ಬಂಗಾರಪ್ಪನವರು ಮಾತನಾಡಿ ನನಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಜೊತೆಗೆ ಸಲಹೆಯನ್ನೂ ಕೊಟ್ಟಿದ್ದಾರೆ. ಎಚ್ಚರಿಕೆ ಯಾವ ಕಡೆಯಿಂದ ಬಂದರೂ ತೆಗೆದುಕೊಳ್ಳುತ್ತೇನೆ. ಮನುಷ್ಯ ಯಾವಾಗಲೂ ಎಚ್ಚರವಾಗಿರಬೇಕು ಎಂಬ ಅಭಿಪ್ರಾಯವನ್ನು ನಾನು. ಎಚ್ಚರಿಕೆ ಅವರು ಕೊಟ್ಟರು ಎಂದು ನನ್ನ ಮನಸ್ಸಿಗೆ ಬೇಜಾರು ಇಲ್ಲ. ಕೊಡುತ್ತಲೇ ಹೋಗಲಿ ಅದನ್ನು ನಾನು ಅಪಾರ್ಥ ಮಾಡಿಕೊಳ್ಳುವುದಿಲ್ಲ. ಅವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇಬ್ಬರೂ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಪೋಲೀಸರಲ್ಲಿ ದಕ್ಷತೆ ಹೆಚ್ಚಬೇಕು ಮತ್ತು ಪೋಲೀಸ್ ಆಡಳಿತದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡುವಂತೆ ಮಾಡಬೇಕು ಎಂದು ಹೇಳಿದ್ದಾರೆ. ಅದು ಒಪ್ಪತಕ್ಕ ಮಾತು. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಅದನ್ನು ಹೇಗೆ ಮಾಡಬೇಕು ಎಂಬುದು ಪ್ರಶ್ನೆ. ಪೋಲೀಸರು ಯಾವುದೇ ಮಂತ್ರಿಗಳ ಮೇಲೆ ಆರೋಪಣೆ ಬಂದಾಗ ತನಿಖೆ ಮಾಡಿ ಪ್ರಾಮಾಣಿಕವಾಗಿ ವರದಿ ಕೊಟ್ಟರೆ ಅವರನ್ನು ಅನಾವಶ್ಯಕವಾಗಿ ಬೇರೆ ಕಡೆ ಟ್ರಾನ್ಸ್‌ಫರ್ ಮಾಡುವುದರಿಂದ ದಕ್ಷತೆ ಹೆಚ್ಚುತ್ತದೆಯೇ ? ಅಥವಾ ಜನರಲ್ಲಿ ಪೋಲೀಸರ ಬಗ್ಗೆ ನಂಬಿಕೆ ಹುಟ್ಟುತ್ತದೆಯೆ ? ಪೋಲೀಸರು ಕರ್ತವ್ಯ ನಿರ್ವಹಿಸುವಾಗ ದೊಡ್ಡ ದೊಡ್ಡ ಪುಢಾರಿಗಳು ಪಾರ್ಲಿಮೆಂಟ್ ಸದಸ್ಯರು ಮಧ್ಯ ಪ್ರವೇಶಿಸಿದರೆ ಕಣ್ಣು ಮುಚ್ಚಿಕೊಂಡು ಕುಳಿತುಕೊಂಡರೆ ನಂಬಿಕೆ ಹುಟ್ಟುತ್ತದೆಯೇ ? ಉದಾಹರಣೆಗೆ ನಾಗರಾಜ್ ಎಂಬ ಪೋಲೀಸ್ ಅಧಿಕಾರಿಗೆ ಶಿಕ್ಷೆಯಾಯಿತು.

೪-೦೦ ಪಿ. ಎಂ.

ಆ ರೀತಿ ಮಾಡುವುದರಿಂದ ಪೋಲೀಸಿನವರಲ್ಲಿ ಏನಾದರೂ ದಕ್ಷತೆ ಕಡಿಮೆ ಆಗುವುದಾಗಲೀ ಅಥವಾ ಜನರಲ್ಲಿ ಪೋಲೀಸರ ಬಗ್ಗೆ ಹೆಚ್ಚು ನಂಬಿಕೆ ಬರುವುದಾಗಲೀ ಆಗುತ್ತದೆಯೋ ಎಂಬುದನ್ನು ಮಾನ್ಯ ಮೊಯ್ಲಿಯವರು ಹೇಳಬೇಕು. ನಾನು ಇಷ್ಟು ಮಾತ್ರ ಹೇಳಬಲ್ಲೆ. ಇದು ಪೋಲೀಸ್ ಇಲಾಖೆಯಲ್ಲಿ ಮೊನ್ನೆ ಆದ ಬದಲಾವಣೆಗಳ ವಿಷಯವನ್ನು ಇಲ್ಲಿ ತರಬೇಕೆನ್ನುವ ಪ್ರಯತ್ನವೆಂದು ಗೊತ್ತಾಗುತ್ತದೆ. ಇದಕ್ಕೆ ಉತ್ತರ ಕೊಡುವುದಕ್ಕೆ ಮತ್ತು ಪ್ರಶ್ನೆ ಕೇಳುವುದಕ್ಕೆ ಮತ್ತೊಂದು ಸಂದರ್ಭ ಬರತ್ತದೆ. ಅದನ್ನೆಲ್ಲಾ ಇಲ್ಲಿ ಸೇರಿಸುವುದಕ್ಕೆ ಬಯಸುವುದಿಲ್ಲ. ಆದರೆ ಸರ್ಕಾರದ ನೀತಿಯನ್ನು ನಾನು ಪುನಃ ಹೇಳ ಬಯಸುತ್ತೇನೆ. ಯಾವುದೇ ಒಬ್ಬ ಪೋಲೀಸ್ ಅಧಿಕಾರಿ, ಆತ ಮೇಲ್ದರ್ಜೆಯವನಾಗಿರಲಿ ಅಥವಾ ಸಾಮಾನ್ಯ ದರ್ಜೆಯವನಾಗಿರಲಿ, ಎಲ್ಲಿಯವರೆಗೆ ತನ್ನ ಕೆಲಸ ಕಾರ್ಯಗಳನ್ನು ಪಕ್ಷಪಾತ ಇಲ್ಲದೇ ಪ್ರಾಮಾಣಿಕತೆಯಿಂದ ಮಾಡುತ್ತಾನೋ ಅಲ್ಲಿಯವರೆಗೆ ಸರ್ಕಾರದ ಅಭಯ ಹಸ್ತ ಅವನ ಮೇಲೆ ಇರುತ್ತದೆ ಮತ್ತು ಯಾವುದೇ ವ್ಯಕ್ತಿ ಅವನು ಎಷ್ಟೇ ಪ್ರಭಾವಿತನಾಗಿರಲಿ ಅವನ ಮೇಲೆ ತನಿಖೆ ನಡೆಸಿ ಸತ್ಯವನ್ನು ಹೊರಗೆ ತಂದರೆ ಸರ್ಕಾರಕ್ಕೆ ಅದರಿಂದ ಸ್ವಲ್ಪ ಅನಾನುಕೂಲವಾಗಬಹುದು ಎಂದು ಹೇಳತಕ್ಕ ದೃಷ್ಟಿಯಿಂದ ನಾವು ಯಾವುದೇ ರೀತಿಯ ಕ್ರಮವನ್ನು ಆ ಅಧಿಕಾರಿಯ ಮೇಲೆ ತೆಗೆದುಕೊಳ್ಳುವುದಿಲ್ಲ. ಹಿಂದೆ ಇಂತಹ ವರದಿ ಕೊಟ್ಟವರ ವರ್ಗಾವಣೆ ಆಗುತ್ತಿತ್ತು. ಈ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಪೋಲೀಸರ ಬದಲಾವಣೆ ಬಗ್ಗೆ ಯಾರು ನನಗೆ ಪ್ರಶ್ನೆ ಕೇಳಿದರೂ ನಾನು ಉತ್ತರ ಕೊಡಬಲ್ಲೆ. ನಿಮ್ಮೆಲ್ಲರ ಮನಸ್ಸಿನಲ್ಲಿ ಏನಾದರೂ ಸಂದೇಹ ಇದ್ದರೆ ಅದು ಹೋಗುವ ರೀತಿಯಲ್ಲಿ ಉತ್ತರವನ್ನು ಕೊಡುತ್ತೇನೆ. ಶ್ರೀಮಾನ್ ಖಂಡ್ರೆಯವರು ಈ ಪ್ರಕರಣವನ್ನು ಮುಚ್ಚತಕ್ಕ ಪ್ರಯತ್ನ ನಡೆಯುತ್ತಿದೆಯೆಂದು ಹೇಳಿದರು. ಯಾಕೆ ಇದನ್ನು ಮುಚ್ಚಬೇಕು. ಪೋಲೀಸರದ್ದು ಏನಾದರೂ ಇದ್ದರೆ ಪೋಲೀಸರು ಮುಚ್ಚುತ್ತಾರೆಂದು ಹೇಳಬಹುದು. ಇದರಲ್ಲಿ ಮೂರು ಜನ ಆರೋಪಿಗಳು ಇದ್ದಾರೆ. ಇವರಲ್ಲಿ ಇಬ್ಬರನ್ನು ಹಿಡಿದಿದ್ದಾರೆ. ಮತ್ತೊಬ್ಬರನ್ನು ಇವತ್ತಲ್ಲಾ ನಾಳೆ ಹಿಡಿಯಬಹುದು. ಆತ ಎಲ್ಲಿದ್ದರೂ ಹಿಡಿಯುತ್ತಾರೆ. ಅವರಿಗೂ ನಮಗೂ ಏನಾದರೂ ಸಂಬಂಧ ಇದೆಯೋ ? ಪಕ್ಷದ ಮಂತ್ರಿಗಳಿಗೂ ಅವರಿಗೂ ಏನಾದರೂ ಸಂಬಂಧ ಇದೆಯೋ ? ಸುಮ್ಮನೆ ಈ ರೀತಿ ಬಚ್ಚಿಡುತ್ತಾರೆಂದು ಆರೋಪ ಮಾಡಬಹುದೇ ? ಆ ರೀತಿ ನಾವು ಮಾಡಿಲ್ಲ, ಎಂದೆಂದೂ ಮಾಡುವುದಿಲ್ಲ. ಮಾನ್ಯ ಮೊಯ್ಲಿಯವರಿಗೆ ನಾನು ಹೇಳುವುದು ಇಷ್ಟೇ. ಚಾಕು ಚೂರಿಯ ಸಂಸ್ಕೃತಿ ಇವತ್ತು ಹೋಗಬೇಕು. ಅದು ಬೆಂಗಳೂರು ಶಹರಿನಲ್ಲಿ ಇಲ್ಲದಂತೆ ತೆಗೆದುಹಾಕುತ್ತೇನೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಅವರ ಹಿಂದೆ ಎಂತಹ ರಾಜಕೀಯ ವ್ಯಕ್ತಿಗಳೇ ಇರಲಿ, ರಾಜಕೀಯ ಪಕ್ಷಗಳೇ ಇರಲಿ, ಯಾರೇ ಇರಲಿ ಈ ವಿಷಯದಲ್ಲಿ ನಾನು ಹಿಂದು ಮುಂದು ನೋಡುವುದಿಲ್ಲ, ಬೆಂಗಳೂರು ನಾಗರೀಕರು ಕೆಲವು ಕಾಲದಿಂದ ಭಯದಿಂದ ಓಡಾಡುತ್ತಿದ್ದರು. ಯಾವ ಹೊತ್ತಿನಲ್ಲಿ ಎಲ್ಲಿ ಹೋಗಲಿ. ಕಾಲೇಜುಗಳಿಗೆ ಹೋಗಲೀ, ಯೂನಿವರ್ಸಿಟಿಗೆ ಹೋಗಲಿ, ಅಲ್ಲಿ ಏನಾಗುತ್ತದೋ ಎಂಬ ಭಯ ಅವರಿಗೆ ಬೆಂಗಳೂರು ನಗರದಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕೆ ಏನು ಮಾಡಬೇಕೋ! ಅದನ್ನು ಮಾಡುತ್ತೇನೆ. ರಾಜ್ಯದಲ್ಲಿ ದರೋಡೆ ನಡೆದಾಗ, ಹೆದ್ದಾರಿ ದರೋಡೆ ನಡೆದಾಗ ಕಂಡಲ್ಲಿ ಗುಂಡು ಹಾರಿಸಲು ಹೇಳಿದ್ದೇನೆ. ಆ ಬಗ್ಗೆ ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿದ್ದೇನೆ. ಪ್ರತ್ಯೇಕ ಸ್ಕ್ವಾಡ್ ಹಾಕಿದ್ದೇನೆ. ಹಿಂದೆ ಮಂತ್ರಿಗಳ ಹಿಂದೆ ಮುಂದೆ ಓಡಾಡುತ್ತಿದ್ದಂತಹ ಜೀಪುಗಳನ್ನು ಈಗ ಜನರ ರಕ್ಷಣೆ ಮಾಡುವುದಕ್ಕೆ ಕಳುಹಿಸಿದ್ದೇವೆ. ಮಂತ್ರಿಗಳ ಹಿಂದೆ ರಕ್ಷಣೆಗೆ ಇದ್ದ ವಾಹನಗಳನ್ನು ಈ ಕಾರ್ಯಕ್ಕೆ ಬಿಟ್ಟಿದ್ದೇವೆ. ಈಗ ಮಂತ್ರಿಗಳ ಹಿಂದೆ ರಕ್ಷಣೆ ಇಲ್ಲ. ಆದುದರಿಂದ ಏನೂ ಘಟನೆ ಆಗದೆ ಅದನ್ನು ಸಮರ್ಥನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ನಾನು ಏಕೆ ಸಮಯವನ್ನು ಕೇಳುತ್ತಿದ್ದೇನೆಂದರೆ, ಇವತ್ತು ಏನು ನನಗೆ ಸುದ್ದಿ ಬಂದಿದೆ ಅದು ನನಗೆ ಖಾತರಿಯಾಗಿಲ್ಲ. ಈ ಬಗ್ಗೆ ಸತ್ಯ ಸುದ್ದಿ ಬಂದ ಮೇಲೆ ಸದನದ ಮುಂದೆ ಇಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ರಾಮದೇವ್ ಅವರು ಮಾತನಾಡುತ್ತಾ, ಇದರಲ್ಲಿ ಯಾರದೋ ಪ್ರಚೋದನೆ ಇದೆ ಎಂದು ಹೇಳಿದ್ದಾರೆ. ಈ ಬಗ್ಗೆ ತಮಗೆ ಬಂದಿರತಕ್ಕ ಪೋಲೀಸ್ ವರದಿಯಲ್ಲಿ ಏನಾದರೂ ಇದೆಯೋ ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಅಂತಹದ್ದು ಇದ್ದರೆ ಅದನ್ನು ಸಹಾ ಸಭೆಯ ಮುಂದೆ ಇಡುತ್ತೇನೆ

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸಭಾನಾಯಕರು ಒಂದು ವಿಚಾರವನ್ನು ಹೇಳಿದರು. ಅದನ್ನು ನಾನು ಮುಕ್ತವಾಗಿಯೂ ಸ್ವಾಗತಿಸುತ್ತೇನೆ. ಚಾಕು, ಚೂರಿ ಸಂಸ್ಕೃತಿ ನಾವು ಇರುವಷ್ಟರ ಮಟ್ಟಿಗೆ ಬೆಂಗಳೂರಿನಲ್ಲಿ ನಡೆಯಲಿಕ್ಕೆ ಬಿಡುವುದಿಲ್ಲವೆಂದು ಹೇಳಿದರು, ಬಹಳ ಸಂತೋಷ. ಅದನ್ನು ಅವರು ನಡೆಸಿಕೊಡುತ್ತಾರೆನ್ನುವ ಸಂಪೂರ್ಣ ಭರವಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಈ ಬಗ್ಗೆ ನಮ್ಮ ಸಹಕಾರ ಕೂಡಾ ಇದೆ. ಇದನ್ನು ನಡೆಸಿಕೊಡುವ ಜವಾಬ್ದಾರಿಕೆ ತಮ್ಮಲ್ಲಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಹಾಗೂ ಮಂತ್ರಿಗಳ ಹಿಂದೆ ಓಡಾಡುತ್ತಿದ್ದ ಜೀಪುಗಳನ್ನು ದರೋಡೆಗಳನ್ನು ತಡೆಯುವುದಕ್ಕಾಗಿ ಬಳಸುತ್ತಿದ್ದೇವೆಂದು ಹೇಳಿದರು. ಅಧ್ಯಕ್ಷರೇ, ಹೆದ್ದಾರಿ ದರೋಡೆಯನ್ನು ತಡೆಯಲು ನಮ್ಮ ಕಾಲದಲ್ಲಿಯೂ ಬೇಕಾದಷ್ಟು ಮೊಬೈಲ್ ವ್ಯಾನ್‌ಗಳನ್ನು, ಅದಕ್ಕೆ ಪ್ರತ್ಯೇಕ ಪೋಲೀಸರನ್ನು ಕೊಟ್ಟಿದ್ದೆವು. ಈ ಬಗ್ಗೆ ಪೋಲೀಸ್ ಅಧಿಕಾರಿಗಳು ತಮಗೆ ಮಾಹಿತಿ ಕೊಡದಿದ್ದರೆ ಅದು ನಮ್ಮ ತಪ್ಪಲ್ಲ. ಅವರು ನಿಮಗೆ ಯಾವ ರೀತಿಯ ಮಾಹಿತಿಯನ್ನು ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಇಂತಹ ಕಾನೂನು ವ್ಯವಸ್ಥೆಯನ್ನು ನಮ್ಮ ಕಾಲದಲ್ಲೂ ನಾವು ಮಾಡಿದ್ದೇವೆ. ೧೧ನೇ ತಾರೀಖು ನಡೆದ ಘಟನೆ ಬಗ್ಗೆ ಮಾನ್ಯ ನಾಯಕರು ಒಂದು ಸಂಪೂರ್ಣಕವಾದ ಮಾಹಿತಿಯನ್ನು ಸಭೆಗೆ ಒದಗಿಸುತ್ತಾರೆಂದು ನಾವು ಭಾವನೆ ಇಟ್ಟುಕೊಂಡಿದ್ದೆವು. ಸರ್ಕಾರ ಚುರುಕಾಗಿರಬೇಕು. ಸರ್ಕಾರಕ್ಕೆ ಬೇಕಾದ ಮಾಹಿತಿಯನ್ನು ಇಲಾಖೆ ಚುರುಕಾಗಿ ಒದಗಿಸಬೇಕು. ಈ ಬಗ್ಗೆ ಬೇಗ ಮಾಹಿತಿಯನ್ನು ಕೊಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿಲ್ಲ. ಈ ಬಗ್ಗೆ ಮಾಹಿತಿ ಕೊಡಲು ಏನು ತೊಂದರೆ ಇದೆ ಎಂಬುದನ್ನೂ ಸ್ಪಷ್ಟಪಡಿಸಿಲ್ಲ ಈ ಬಗ್ಗೆ ನಮಗೆ ಸಮಾಧಾನ ಆಗುವಂತಹ ಯಾವ ವಿಚಾರವನ್ನು ಹೇಳಿಲ್ಲ. ಸಾರ್ವಜನಿಕರು ಏನು ನಿರೀಕ್ಷಣೆ ಮಾಡುತ್ತಿದ್ದರೋ ಅದಕ್ಕೆ ಸರಿಯಾದ ಉತ್ತರ ತಮ್ಮ ಉತ್ತರದಿಂದ ಸಿಕ್ಕಿಲ್ಲ. ತಾವು ಸಮಯಾವಕಾಶವನ್ನು ಕೇಳಿದ್ದೀರಿ. ತಮಗೆ ಮನವರಿಕೆಯಾದಮೇಲೆ ಹೇಳಿಕೆ ಕೊಡುವುದಾಗಿ ಹೇಳಿದ್ದೀರಿ. ನಾವೇನೂ ಚಾರ್ಜ್‌ಶೀಟ್ ಕೇಳಿಲ್ಲ. ಪೋಲೀಸ್ ಅಧಿಕಾರಿಗಳು ಚಾರ್ಜ್‌ಶೀಟ್ ಕೇಳಿದ್ದಾರೆಂದೇನಾದರೂ ತಿಳಿದುಕೊಂಡರೋ ಏನೋ ? ಈ ಬಗ್ಗೆ ಕಾರಣ ಕೊಡುವುದಕ್ಕೂ ತಾವು ಪ್ರಯತ್ನ ಮಾಡಿಲ್ಲ. ತಾವು ಈ ಪ್ರಕರಣವನ್ನು ಅಡಗಿಸುತ್ತಿದ್ದೀರೆಂದೇನೂ ನಾನು ಹೇಳುತ್ತಿಲ್ಲ. ಆದರೆ ಗೃಹ ಇಲಾಖೆಯನ್ನು ಸ್ವಲ್ಪ ಚುರುಕು ಮಾಡಿ ಎಂದು ಹೇಳುತ್ತಿದ್ದೇನೆ. ತಾವು ಈ ಬಗ್ಗೆ ಮುಚ್ಚು ಮೊರೆ ಮಾಡುತ್ತಿದ್ದೀರೆಂದು ಹೇಳುತ್ತಿಲ್ಲ. ೧೯೭೧ರಿಂದ ೭೨ರವರೆಗೆ ಎಷ್ಟು ಅತ್ಯಾಚಾರ ಪ್ರಸಂಗಗಳು ಬಂದವೆಂದು ಹೇಳಿದ್ದೀರಿ. ಅದಕ್ಕಿಂತ ಹಿಂದಿನದನ್ನು ಹೇಳಿಲ್ಲ. ಹಾಗೂ ಇತ್ತೀಚೆಗೆ ಇಂತಹ ಪ್ರಕರಣಗಳು ನಡೆಯುತ್ತಿವೆ, ಅದನ್ನು ತಾವು ಹೇಳುವುದಕ್ಕೆ ಹೋಗಲಿಲ್ಲ. ತಾವು ಮೆಡಿಕಲ್ ಟೆಸ್ಟ್ ಆಗಿದೆ ಎಂದು ಹೇಳಿದ್ದೀರಿ, ಹಾಗೂ ರೇಡಿಯಾಲಜಿಕಲ್ ಟೆಸ್ಟ್ ಆಗಬೇಕು ಎಂದು ಹೇಳಿದ್ದೀರಿ. ಇದಕ್ಕೆ ಎಷ್ಟು ಸಮಯ ಬೇಕಾಗುತ್ತದೆ ಸ್ವಾಮಿ ೧೧ನೇ ತಾರೀಖು ನಡೆದ ಪ್ರಕರಣದಲ್ಲಿ ೧೫ನೇ ತಾರೀಖು ಆದರೂ ರೇಡಿಯಾಲಜಿಕಲ್ ಟೆಸ್ ಮಾಡಿಸಲಾಗಲಿಲ್ಲವೇ ? ಈ ಟೆಸ್ಟಿಗೆ ೪ ದಿನಗಳು ಬೇಕಾಗಿತ್ತೇ ? ಬೇಕಾಗಿಲ್ಲ. ಇದನ್ನು ತಕ್ಷಣ ಮಾಡಬಹುದು. ಇಷ್ಟು ಗಮನಾರ್ಹವಾಗಿ ಸಾರ್ವಜನಿಕರ ಗಮನ ಕುತೂಹಲವನ್ನು ಕೆರಳಿಸಿನುವಂತಹ ಇಂತಹ ಒಂದು ಪ್ರಮುಖ ವಿಚಾರ ಇವತ್ತು ಸದನದಲ್ಲಿ ಪ್ರಸ್ತಾಪಕ್ಕೆ ಬರುತ್ತದೆಂಬುದು ತಮಗೆ ಗೊತ್ತಿದೆ, ಈ ವಿಚಾರ ಪತ್ರಿಕೆಗಳಲ್ಲೂ ಬಂದಿದೆ.

ಪೋಲೀಸ್ ಅಧಿಕಾರಿಗಳು ಸದನದಮುಂದೆ ಬರತಕ್ಕ ವಿಷಯಗಳ ಬಗ್ಗೆ ಸರಿ ಯಾದಂಥ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಈ ಸದನವನ್ನು ಬಹಳ ಪ್ರಮುಖವಾದಂಥ ವೇದಿಕೆಯೆಂದು ತಿಳಿದುಕೊಂಡು ವರದಿಯನ್ನು ಕೊಡಬೇಕಾಗುತ್ತದೆ. ರೇಡಿಯಾಲಾಜಿಕಲ್ ಟೆಸ್ಟ್ ವರದಿ ಬರಲಿಲ್ಲವೆಂದು ತಡೆಯುವುದಾದರೆ ಈ ವಿಷಯದ ಗಂಭೀರತೆಯನ್ನು ತಾವು ಅರ್ಥಮಾಡಿಕೊಂಡಿಲ್ಲವೆಂದು ನಾನು ಆಪಾದನೆ ಮಾಡಬೇಕಾಗುತ್ತದೆ. ಜೊತೆಗೆ ಇದರಲ್ಲಿ ಸದಸ್ಯರ ಹಕ್ಕುಬಾಧ್ಯತೆ ಪ್ರಶ್ನೆ ಕೂಡ ಬರುತ್ತದೆ. ತಾವು ಸರಿಯಾದಂಥ ಮಾಹಿತಿಯನ್ನು ಕೊಡಲಿಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಹಿಂದಿನ ಅಂಕಿಸಂಖ್ಯೆಗಳನ್ನು ಒದಗಿಸುವುದಕ್ಕೆ ಕಾಲ ವ್ಯರ್ಥ ಮಾಡುವ ಬದಲು ಈ ವಿಷಯಕ್ಕೆ ಗಮನಕೊಟ್ಟು ಮಾಹಿತಿಯನ್ನು ಸಂಗ್ರಹಿಸಬಹುದಾಗಿತ್ತು. ನಮಗೆ ರಾಜಕೀಯ ಮಾಡುವುದಕ್ಕೆ ಹೋಗುತ್ತೀರೆನ್ನುವ ಮಾತನ್ನು ಏನು ಹೇಳುತ್ತೀರಿ. ಅದು ಸರಿಯಲ್ಲ ? ತಾವು ರಾಜಕೀಯ ಮಾಡುತ್ತಿದ್ದೀರೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮಾನಾಪಹರಣದಂಥ ಗಂಭೀರವಾದ ಪ್ರಶ್ನೆ ಸದನದಮುಂದಿರುವಾಗ, ೨-೩ ದಿನಸ ಕಳೆದರೂ ಸರಿಯಾದಂಥ ಉತ್ತರವನ್ನು ಸದನಕ್ಕೆ ಕೊಡಲಿಲ್ಲವೆಂಬುದೆ ಸರ್ಕಾರದ ಬೇಜವಾಬ್ದಾರಿತನವನ್ನು ಇದು ತೋರಿಸುತ್ತದೆ. ಬಳ್ಳಾರಿಯಲ್ಲಿ ಗೋಲೀಬಾರ್ ನಡೆದಂಥ ಸಂದರ್ಭದಲ್ಲಿಯೂ

ಕೂಡ ೨-೩ ದಿವಸ ಕಳೆದ ಮೇಲೆ ಕ್ರಮ ತೆಗೆದುಕೊಂಡಿರಿ. ತಮಗೆ ಆಡಳಿತದ ಅನುಭವ ಇದೆ, ತಾವು ಮನಸ್ಸು ಮಾಡಿದರೆ. ಮಾಹಿತಿಯನ್ನು ಪಡೆಯುತಕ್ಕಂಥ ಶಕ್ತಿ ಇದೆ, ಬಹಳ ದಕ್ಷರಿದ್ದೀರಿ, ಬಹಳ ಸಮರ್ಥರಿದ್ದೀರಿ. ಚೆನ್ನಾಗಿ ಕೆಲಸ ಮಾಡುತ್ತಿದ್ದಿರಿ. ಆದರೆ, ಡೆಲ್ಲಿಯಿಂದ ಬಂದಮೇಲೆ ಆಜ್ಞೆ ತೆಗೆದು ಕೊಳ್ಳುವುದಕ್ಕೆ ಅವಕಾಶ ಕೇಳುತ್ತೀರಿ. ತಾವು ತಕ್ಷಣ ಕ್ರಮ ತೆಗೆದುಕೊಳ್ಳದೇ ಹೋದರೆ ಕಾಲ ನಮಗಾಗಿ ನಿಲ್ಲುವುದಿಲ್ಲ. ಮಾನ್ಯ ಸದಸ್ಯರಾದ ರಾಂದೇವ್‌ರವರು ನಮ್ಮ ಸದಸ್ಯರು ಪ್ರಚೋದನೆ ಮಾಡುತ್ತಿದ್ದಾರೆಂದು ತಿಳಿಸಿದರು ? ನಿಮ್ಮ ಸದಸ್ಯರಿಗೆ ಬೋದನಾ ತರಗತಿಗಳನ್ನು ಇಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.--ನಮಗೆ ಬೋದನೆ ಬೇಕಾಗಿಲ್ಲ. ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದವರು ಯಾವರೀತಿ ಬೆಂಗಳೂರು ನಗರದಲ್ಲಿ ಚಾಕು ಚೂರಿ ಉಪಯೋಗಿಸಿದ್ದಾರೆ ಎನ್ನುವುದು ಗೊತ್ತಿದೆ. ಬನ್ನೇರುಘಟ್ಟದಲ್ಲಿ ಏನಾಯಿತು ಎಂಬುದು ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.--ಚಾಕು ಚೂರಿ ಮಾಡಿದವರು ಯಾರು ನಮಗೆ ಬೆಂಬಲ ಕೊಟ್ಟಿಲ್ಲ. ಯಾರು ಯಾರು ಮಾಡಿದ್ದಾರೆನ್ನುವುದನ್ನು ಸಮಯ ಬಂದಾಗ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.--ಚುನಾವಣಾ ಕಾಲದಲ್ಲಿ ನಿಮ್ಮ ಜೊತೆಗೇ ಇದ್ದರು.

ಶ್ರೀ ಎಂ. ವೀರಪ್ಪಮೊಯ್ಲಿ.--ಪಕ್ಷಕ್ಕೆ ಅಪಪ್ರಚಾರ ಮಾಡಲು ಇಂಥ ವ್ಯಕ್ತಿಗಳು ಇದ್ದೇ ಇರುತ್ತಾರೆ. ಇವರು ಯಾವ ಪಕ್ಷದ ಸದಸ್ಯರು ಕೂಡ ಆಗಿರುವುದಿಲ್ಲ. ಮಾನ್ಯ ಜಾಲಪ್ಪನವರಿಗೂ ಚಾಕು ಚೂರಿ ಪ್ರಸಂಗಗಳು ನಡೆಯುತಕ್ಕದ್ದು ಗೊತ್ತಿದೆ.

ಶ್ರೀ ಆರ್. ಎಲ್. ಜಾಲಪ್ಪ.--ಆ ಕಸುಬುಗಳೆಲ್ಲಾ ತಮಗೆ ಚನ್ನಾಗಿ ಗೊತ್ತು.

ಶ್ರೀ ಪಿ. ರಾಂದೇವ್.--ತಮ್ಮ ಪಕ್ಷದ ಮೂಲಕ ಅಂತಹವರಿಗೆ ಟಿಕೇಟ್ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.--ಚಾಕು ಚೂರಿ ಸಂಸ್ಕೃತಿಯಿಂದ ರಾಜಕಾರಣ ಮಾಡುತ್ತೇವೆಂದರೆ ಅದಕ್ಕಿಂತ ದೊಡ್ಡ ಹುಚ್ಚುತನ ಬೇರೆ ಇಲ್ಲ. ಚಾಕು ಚೂರಿ ಸಂಸ್ಕೃತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ, ಮುಂದೆ ಅದಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳಿ. ಇವತ್ತು ಏನು ಒಂದು ದುರಂತದ ಪ್ರಸಂಗ ನಡೆದಿದೆ, ಅದಕ್ಕೆ ಸಮರ್ಪಕವಾದ ಉತ್ತರವನ್ನು ತಾವು ಕೊಡಬೇಕಾಗಿತ್ತು. ನನಗೆ ಮಾನ್ಯ ರಾಂದೇವ್‌ರವರ ಬಗ್ಗೆ ಬಹಳ ಪ್ರೀತಿ, ಪ್ರೇಮ ಇದೆ. ನಾವು ಏನು ನೀರಿಕ್ಷೆ ಮಾಡಿದ್ದೆವು ಅಂದರೆ, ಪ್ರಥಮವಾಗಿ ಅವರೂ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳಾಗುತ್ತಾರೆಂದು ತಿಳಿದಿದ್ದೆವು.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.--ಅಂದರೆ, ತಮ್ಮ ಅಭಿಪ್ರಾಯದಲ್ಲಿ ಈಗ ಮಂತ್ರಿಗಳಾಗಿರುವವರು ಒಳ್ಳೆಯವರಲ್ಲವೆಂದು ತಮ್ಮ ವಾದವೇ ?

ಶ್ರೀ ಮೈಕೇಲ್ ಫರ್ನಾಂಡೀಸ್.--ನಮ್ಮ ಕಡೆ ಎಲ್ಲರೂ ಒಳ್ಳೆಯವರು ಇದ್ದಾರೆ, ಅಂದಾಕ್ಷಣ ಎಲ್ಲರೂ ಮಂತ್ರಿಗಳಾಗುವುದಕ್ಕೆ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಅಧ್ಯಕ್ಷರೇ, ಮೊಯ್ಲಿಯವರು ರಾಂದೇವರ ಬಗ್ಗೆ ಎಷ್ಟು ಹೊಗಳಿದರೂ ಅವರ ಕಡೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ. ಮೊಯಿಲಿ --ಯಾರಾದರೂ ಮಂತ್ರಿ ಮಾಡುತ್ತೇವೆ ಅಂದರೆ ನಿಮ್ಮ ಕಡೆ ಬರುತ್ತಾರೆ,ಮಂತ್ರಿ ಮಾಡುವುದಿಲ್ಲವೆಂದರೆ ಈ ಕಡೆಯೇ ಇರುತ್ತಾರೆ. ಯಾರ ಕಡೆ ಯಾರು ಇರುತ್ತಾರೆ. ಎಂಬುದನ್ನು ಕೊನೆಗೆ ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.--ತಮಗೆ ಮಂತ್ರಿ ಮಾಡುತ್ತೇವೆ ಬಂದು ಬಿಡಿ.

ಶ್ರೀ ಎಂ. ವೀರಪ್ಪಮೊಯ್ಲಿ.--ನಿಮ್ಮಲ್ಲಿ ಬಹಳ ಜನ ಕೋಟು ಹೊಲಿಸಿಕೊಂಡು ನಿಂತಿದ್ದಾರೆ. ಇದು ಸೂಕ್ಷ್ಮವಾದಂಥ ಮತ್ತು ಗಂಭೀರವಾದಂಥ ಪ್ರಶ್ನೆ ಇದನ್ನು ಅಷ್ಟು ಸುಲಭವಾಗಿ ಅಲ್ಲಗಳೆಯುವುದಕ್ಕಾಗಲ್ಲ

ವುದಿಲ್ಲ. ಇಂತಹ ಗಂಭೀರವಾದಂಥ ಅಫೆನ್ಸ್ ಇರುವಾಗ ಈ ಸದನದಲ್ಲಿ ನಾವು ಗಂಭೀರವಾಗಿ ಚರ್ಚೆ ಮಾಡಬೇಕಾಗುತ್ತದೆ. Motive in an offence is an important component ಇದು ಬಹಳ ಪ್ರಮುಖವಾದಂಥ ವಿಚಾರ. ಈಗ ಅಫೆನ್ಸ್‌ನಲ್ಲಿ ಮೋಟೀವ್ ಪ್ರೂವ್ ಮಾಡುವುದು ಇದ್ದರೆ ಆ ಕೇಸ್ ಸಾಬೀತಾಗುವುದಿಲ್ಲ. ಈ ತರಹ ಸಂದರ್ಭ ಇರುವಾಗ ಟ್ರಜರಿ ಬೆಂಚಿನಲ್ಲಿರುವವರು, ಜವಾಬ್ದಾರಿ ವಹಿಸಿ ಕೊಂಡಿರುವವರು, ಹಿರಿಯ ಸದಸ್ಯರು ಆದ ರಾಮದೇವ್ ಅವರು ಇದರಲ್ಲಿ ಪ್ರಚೋದನೆ ಇದೆ ಎಂದು ಹೇಳುವುದು ಸರಿಯಾದುದಲ್ಲ. ಇದರಲ್ಲಿ ನ್ಯಾಯ ಸಿಕ್ಕದಂತೆ ಮಾಡುವುದು ಖಂಡಿತ ಸರಿಯಲ್ಲ.

ಶ್ರೀ ಜೆ. ಹೆಚ್. ಪಟೇಲ್.--ನಾನು ಲಾ ಓದಿದ್ದೇನೆ, ಪ್ರಾಕ್ಟೀಸ್ ಆಗಲಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರು ಚೆನ್ನಾಗಿ ಪ್ರಾಕ್ಟೀಸ್ ಮಾಡಿದ್ದಾರೆ. ಅವರಲ್ಲಿ ನಾನು ಒಂದು ವಿಚಾರ ತಿಳಿಯಲಿಕ್ಕೆ ಇಷ್ಟಪಡುತ್ತೇನೆ. ರೇಪ್‌ಗೆ ಕೆಲವು ಅಪರಾಧಿಗಳಿಗೆ ಮೋಟೀವ್ ಇರುತ್ತದೆಂದರೆ ಅದರ ಅರ್ಥ ಏನು ಎಂದು ಗೊತ್ತಾಗಲಿಲ್ಲ.

SRI M. VEERAPPA MOILY.--Possession of fashion is itself a motive to commit the offence.

SRI RAMAKRISHNA HEGDE.--That is not a motive. That can be driving force.

ಶ್ರೀ ಎಂ. ವೀರಪ್ಪಮೊಯಿಲಿ.--ಮಾನ್ಯ ರಾಂದೇವ್ ಅವರು ಇಂತಹ ಮಾತುಗಳನ್ನು ಇಲ್ಲಿ ಆಡಬಾರದು, ಇಂತಹ ಮಾತುಗಳನ್ನು ಆಡಿದರೆ ಅತ್ಯಾಚಾರ ಏನು ನಡೆದಿದೆ ಅವರಲ್ಲಿ ನ್ಯಾಯ ದೊರಕಿಸಿಕೊಡಲಿಕ್ಕೆ ಬಹಳ ಕಷ್ಟವಾಗುತ್ತದೆ, ಅದರಿಂದ ಹೆಚ್ಚಿನ ಆಘಾತ ಒದು ಪ್ರಾಸಂಗಿಕವಾಗುತ್ತದೆಯೆ ಹೊರತು ಅದರಿಂದ ಹೆಚ್ಚಿನ ಪ್ರಯೋಜನ ಆಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ನಮ್ಮ ನಾಯಕರು ಇದರ ಬಗ್ಗೆ ಏನಾದರೂ ವಿಚಾರ ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ.--ಅಧ್ಯಕ್ಷರೆ, ಇದು ಪಕ್ಷರಹಿತವಾದಂತಾದ್ದು, ಆ ಪಕ್ಷ, ಈ ಪಕ್ಷ ಎಂದು ಅಲ್ಲ, ಇಲ್ಲಿ ಪಾರ್ಟಿ ಪ್ರಶ್ನೆ ಇಲ್ಲ. ಇದು ಒಂದು ಗಂಭೀರವಾದಂಥ ವಿಷಯ ಇದ್ದ ಕಾರಣ ಚರ್ಚೆ ಮಾಡಬೇಕೆಂದು ಹೇಳಿದ್ದು. ನಮಗೆ ಮುಖ್ಯ ಮಂತ್ರಿಗಳ ಮೇಲೆ ಹಿಂದಿನಿಂದಲೂ ಗೌರವ ಇದೆ. ಆದರೆ ಅವರು ಉತ್ತರವನ್ನು ಕೊಡುವಾಗ ವಿಷಾದವೆನಿಸಿತು. ಆ ದೃಷ್ಟಿಯಿಂದ ಕೇಳುತ್ತಿದ್ದೇನೆ. ಪ್ರತಿಯೊಂದು ಪಾರ್ಟಿಯಲ್ಲೂ ಒಳ್ಳೆಯವರು ಕೆಟ್ಟವರು ಇದ್ದಾರೆಂದು ಹೇಳುತ್ತಾರೆ. ಅದು ಇಲ್ಲಿ ಯಾವುದೂ ಬೇಡ. ಎಫ್‌ಐಆರ್ ಬಗ್ಗೆ ಹೇಳಬೇಕಾಗಿದೆ. ಅವೊತ್ತಿನ ದಿವಸ ನಾಲ್ಕೂವರೆ ಗಂಟೆಗೆ ಎಫ್‌ಐಆರ್ ಆಯಿತು ಎಂದು ತಾವು ಹೇಳುತ್ತಿದ್ದೀರಿ ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ ದಯಮಾಡಿ ತಾವು ಕೇಳಬೇಕು. ಈ ಸದನದ ಮುಂದೆ ನಾನು ಸಿದ್ಧಮಾಡಿ ತೋರಿಸುತ್ತೇನೆ. ಎರಡನೇ ದಿವಸ ಬಂದದ್ದು ನಿಜ. ಎರಡು ಮೂರು ಬಂದಿದೆ, ಮೊದಲು ಬಂದದ್ದು ನಾನು ಎಫ್‌ಐಆರ್ ಎಂದು ತಿಳಿದುಕೊಂಡಿದ್ದೇನೆ. ಆದರೆ ಎರಡನೇ ಎಫ್‌ಐಆರ್ ಇಶ್ಯು ಆಯಿತು. ಅದಕ್ಕೆ ಹಿಂದಿನ ದಿವಸದ ಡೇಟ್ ಹಾಕಿಸಲಿಕ್ಕೆ ಪ್ರಯತ್ನ ಮಾಡಿದರು, ಆದು ಆಗಲಿಲ್ಲ. ಅದರ ಬಗ್ಗೆ ತಾವು ಹೇಳಬೇಕು. ಮಾನ್ಯ ಮಂತ್ರಿಗಳು ಮಾತನಾಡುವಾಗ ಬಹಳ ಜವಾಬ್ದಾರಿಯಿಂದ ಉತ್ತರವನ್ನು ಕೊಡಬೇಕಾಗುತ್ತದೆ, ಈಗ ತಾವು ಕೆಲವೊಂದು ಹಿಂಟ್ಸ್‌ಗಳನ್ನು ಕೊಟ್ಟಿದ್ದೀರಿ. ಅದನ್ನು ಪೋಲೀಸರು ದುರುಪಯೋಗ ಮಾಡಿಕೊಳ್ಳಬಹುದೆಂದು ಹೇಳುತ್ತೇನೆ. ಆಟೋರಿಕ್ಷಾದಲ್ಲಿ ನಾಲ್ಕು ಜನರು ಹೋಗಲಿಕ್ಕೆ ಸಾಧ್ಯವೇ ಎನ್ನುವುದು ಊಹಾಪೋಹವಾಗುತ್ತದೆ. ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಊಹಾಪೋಹ ಮಾಡಿದರೆ ಅದರ ಪರಿಣಾಮ ಕೆಟ್ಟದ್ದಾಗುತ್ತದೆ. ಮತ್ತೊಂದು ಮಾತನಾಡಿದಿರಿ, ಅಷ್ಟು ಜನ ಇರತಕ್ಕ ಕಡೆ, ಸಾವಿರಾರು ಜನ ಇರತಕ್ಕ ಕಡೆ ಕೂಗಿಕೊಂಡರೂ ಕೇಳದ ಹಾಗೆ ಹೇಗೆ ಇರುತ್ತದೆ ಎಂದರೆ, ಇದು ಊಹಾಪೋಹದ ಬಗ್ಗೆ ಹೇಳಿದಂತಾಗುತ್ತದೆ, ಅದರಿಂದ ದುರುಪಯೋಗವಾಗುತ್ತದೆ. ಸ್ಟೇಟ್‌ಮೆಂಟ್‌ಗೆ ಬೆಲೆ ಇಲ್ಲದಂತಾಗುತ್ತದೆ, ಅನಂತರ ಕೋರ್ಟಿನಲ್ಲಿ ಹೋದರೆ ಸರಿಯಾಗುವುದಿಲ್ಲ. ಪೋಲೀಸರು ತಮ್ಮನ್ನು ಬಚಾವ್ ಮಾಡಿಕೊಳ್ಳುವುದಕ್ಕೋಸ್ಕರ ಬರೆದುಕೊಳ್ಳುತ್ತಾರೆ ಅನಂತರ ಅವರು ಬರೆದುಕೊಂಡಿರುವುದು ನಿಜ ಆಗಬಹುದು ಅಥವಾ ಸುಳ್ಳು ಆಗಬಹುದು. ಮಾನ್ಯ ಮುಖ್ಯ ಮಂತ್ರಿಗಳು ೪ ಜನ ರಿಕ್ಷಾದಲ್ಲಿ ಹೋಗಲಿಕ್ಕೆ ಹೇಗೆ ಆಗುತ್ತದೆ ಎನ್ನುವ ವಿಚಾರ ಹೇಳಬಾರದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಬೇರೆ ವಿವರಗಳನ್ನು ಕೇಳಲಿಕ್ಕೆ ಹೋಗುವುದಿಲ್ಲ. ಮಾನ್ಯ ವಿರೋಧಪಕ್ಷದವರು, ಮಾನ್ಯ ಭೀಮಣ್ಣ ಖಂಡ್ರೆಯವರು ಕೇಳಿದ್ದಾರೆ. ಮುಖ್ಯ ಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೆ, ಒಬ್ಬ ಸದಸ್ಯರಿಗೆ ಮಾತನಾಡಲಿಕ್ಕೆ ಎಷ್ಟು ವೇಳೆ ಸಮಯ ಕೊಡುತ್ತೀರಾ, ಎಷ್ಟು ಸಾರಿ ಕೊಡುತ್ತೀರಾ ತಿಳಿಸಬೇಕು.

ಛೇರ್‌ಮನ್.—ನಿಯಮಾವಳಿ ಪ್ರಕಾರ ಕೊಡುತ್ತೇವೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು, ವಿಷಯ ಮನಸ್ಸಿಗೆ ಖಾತರಿ ಆಗುವವರೆಗೂ ಹೇಳಿಕೆ ಕೊಡಬಾರದೆಂದು ಹೇಳಿದ್ದಾರೆ ವಾಸ್ತವಾಂಶದ ಆಧಾರದ ಮೇಲೆ ಉತ್ತರ ಕೊಡಬೇಕೆಂದು ಹೇಳುವುದು ಮೆಚ್ಚತಕ್ಕ ವಿಚಾರ. ಕಾಲಮಿತಿಬೇಕು ಎನ್ನತಕ್ಕ ಅನಿಸಿಕೆ ನಿಮ್ಮದಾದರೂ ಈ ಸದನ ಅತಿ ಶೀಘ್ರವಾಗಿ ತಿಳಿದುಕೊಳ್ಳಬೇಕಾಗಿದೆ. ಇನ್ನು ರೇಡಿಯಾಲಾಜಿಕಲ್ ರಿಪೋರ್ಟ್ ಬಗ್ಗೆ ವಿರೋಧ ಪಕ್ಷದವರು ಪ್ರಸ್ತಾಪ ಮಾಡಿದ್ದಾರೆ. ಇದು ಎಕ್ಸ್‌ರೆಗೆ ಸಂಬಂಧಪಟ್ಟಿರತಕ್ಕ ವಿಚಾರ. ಅದರ ಅವಶ್ಯಕತೆ ಇಲ್ಲದೆ ಪರೀಕ್ಷೆ ಮಾಡಲಿಕ್ಕೆ ಬರುತ್ತದೆ. ಅದನ್ನು ನೋಡುವುದಕ್ಕೆ ಒಂದು ದಿವಸಕ್ಕಿಂತಲೂ ಹೆಚ್ಚು ಬೇಕಾಗಿಲ್ಲ. ಕೇವಲ ಕೆಲವು ಗಂಟೆಗಳು ಸಾಕು ಎಂದು ಹೇಳುತ್ತೇನೆ. ಆದ್ದರಿಂದ, ಹೆಚ್ಚು ವೇಳೆ ತೆಗೆದುಕೊಳ್ಳುವುದು ಬೇಡ. ನಿಮ್ಮ ಮನಸ್ಸಿಗೂ ತಕ್ಷಣ ಸಮಾಧಾನವಾಗಲಿ ಎಂದು ನಮ್ಮ ಬಯಕೆ. ಆದ್ದರಿಂದ, ಕಾಲಮಿತಿ ಹೇಳಿದರೆ ಒಳ್ಳೆಯದು. ಏಕೆಂದರೆ ಇದು ಬೆಂಗಳೂರಿನಲ್ಲಿ ನಡೆದಿದೆ. ಇದು ಏನಾದರೂ ದೂರದಲ್ಲಿ ನಡೆದಿದ್ದರೆ ಸಮಯ ಬೇಕಾಗುತ್ತಿತ್ತು. ಅಲ್ಲದೆ, ಇನು ನಾಲ್ಕು ದಿವಸದ ಹಿಂದಿನ ವಿಚಾರ. ಇಷ್ಟು ಹೊತ್ತಿಗೆ ಆಗಲೇ ಹೇಳಿಕೆ ರೆಡಿ ಇರಬೇಕಾಗಿತ್ತು. ತಾವು ಯಾವಾಗ ಹೇಳಿಕೆ ಕೊಡುತ್ತೀರಾ ನಾಳೆ ತಿಳಿಸುತ್ತೀರಾ ಅಥವಾ ನಾಡಿದ್ದು ತಿಳಿಸುತ್ತೀರಾ ? ದಯವಿಟ್ಟು ತಿಳಿಸಬೇಕು. ನೀವು ಒಂದು ವಾರಬೇಕು ಅಂದರೆ ಅದರ ಇಂಪಾರ್ಟೆನ್ಸ್ ಹೊರಟು ಹೋಗುತ್ತದೆ. ಇನ್ನು ಮಾನ್ಯ ಖಂಡ್ರೆಯವರು ಹೇಳಿದ್ದನ್ನು ನಾನು ಮೆಚ್ಚುತ್ತೇನೆ. ಒಂದು ಆಟೋರಿಕ್ಷಾದಲ್ಲಿ ನಾಲ್ಕು ಜನ ಎನ್ನುವ ಅಭಿಪ್ರಾಯ ಕೊಡುವುದು ಒಳ್ಳೆಯದಲ್ಲ.

೪-೩೦ ಪಿ.ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳಬೇಕಾದ ಅಗತ್ಯವಿತ್ತೊ ಅದನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಕ್ಲಾರಿಫಿಕೇಷನ್‌ಗಳನ್ನು ಏನೂ ಕೇಳಲಿಲ್ಲ. ಆದರೆ ಅವರ ಏನು ಕೆಲವು ವಿಚಾರಗಳನ್ನು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಖಂಡ್ರೆಯವರು ಕೇಳಿದರು ರಿಕ್ಷಾದಲ್ಲಿ ೪ ಜನರು ಕೂತುಕೊಂಡು ಹೋಗುವುದಕ್ಕೆ ಅವಕಾಶ ಇದೆಯೋ ಇಲ್ಲವೋ ? ಎಂದು. ಅದಕ್ಕೆ ಹೇಳಿಕೆ ಸಿದ್ಧವಾಗಿದೆ. ಮುಖ್ಯವಾದ ಕಾರಣವನ್ನು ನಾನು ಹೇಳುತ್ತಿದ್ದೇನೆ. ನಾನು ಎಫ್.ಐ.ಆರ್‌ನ್ನು ನೋಡಿದ ಕೂಡಲೇ ನನಗೆ ಅನುಮಾನ ಬಂತು ಆ ಹೆಣ್ಣುಮಗಳು. ತನ್ನನ್ನು ರಿಕ್ಷಾದಲ್ಲಿ ಎಳೆದುಕೊಂಡು ಹೋಗುವಾಗ ಕೂಗಾಡಿದೆ, ಒದರಾಡಿದೆ ಎಂದು ಏನೂ ಹೇಳಿಲ್ಲ. ಆದರೆ ಬಲಾತ್ಕಾರ ಆಗುವಾಗ ನಾನು ಅರಚಾಟ ಮಾಡಿದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಬಂಗಾರಪ್ಪನವರು ಅದನ್ನು ಸರಿಯಾಗಿ ಹೇಳಲಿಲ್ಲ. ಬೇರೆ ಏನೋ ಹೇಳುತ್ತಿದ್ದಾರೆ. ಸ್ವಾಮಿ, ಹೇಳಬೇಕಾದ್ದನ್ನು ನಾನು ಈಗಾಗಲೇ ಹೇಳಿರುವುದರಿಂದ ಅವರು ಇನ್ನೂ ಅರ್ಧಗಂಟೆ ಬೇಕಾದರೂ ಚರ್ಚೆಮಾಡಿಕೊಳ್ಳಲಿ. ನಾನು ಸುಮ್ಮನೆ ಕೂತುಕೊಳ್ಳುತ್ತೇನೆ ನಡೆದಿರತಕ್ಕ ಘಟನೆ ಏನು ಎಂಬುದನ್ನೆಲ್ಲಾ ನಾನು ಈಗಾಗಲೇ ಹೇಳಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಹೇಳುವ ಅಗತ್ಯ ಏನೂ ಇಲ್ಲ. ಅದಷ್ಟು ಬೇಗ ಈ ರಿಪೋರ್ಟ್‌ನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆದಷ್ಟು ಬೇಗ ಎಂದರೆ ಎಷ್ಟು ದಿವಸ ? ಒಂದು ವಾರ ಮುಂದಕ್ಕೆ ಹಾಕುತ್ತೀರಾ ? ನಾಳೆ, ನಾಡಿದ್ದರಲ್ಲಿ ಹೇಳುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ ಎಂಬುದನ್ನು ಹೇಳುತ್ತೀರಾ ? ಹೋಗಲಿ ಆಸ್ಪತ್ರೆ ಹತ್ತಿರದಲ್ಲಿಲ್ಲವೆ ? ಅಥವಾ ಅಲ್ಲಿ ವೈದ್ಯರಿಲ್ಲವೇ ? ಏತಕ್ಕೆ ಇದನ್ನು ಮುಂದಕ್ಕೆ ಹಾಕುತ್ತೀರಿ ? ಆದಷ್ಟುಬೇಗ ಎಂದರೆ ಎಷ್ಟು ದಿವಸದಲ್ಲಿ ಎಂಬುದನ್ನು ನಿರ್ದಿಷ್ಟವಾಗಿ ಹೇಳುತ್ತೀರಾ ?

ಶ್ರೀ ರಾಮಕೃಷ್ಣ.—ಇಷ್ಟು ವರ್ಷಕಾಲ ತಾವು ಮಂತ್ರಿಗಳಾಗಿದ್ದಿರಿ. ಆದಷ್ಟುಬೇಗ ಎಂದರೆ ನಿಮಗೆ ಅಷ್ಟೂ ಗೊತ್ತಾಗುವುದಿಲ್ಲವೆ ?